ಗೌರಿ ಲಂಕೇಶರ

ಲಂಕೇಶ್


ನವೆಂಬರ್ 15, 2006 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಮೋದನೆ




ತೋಪು!

ಟರ ನಖರ-ನಿರ್ಮಾಪಕ ಪೆಕರ-ಪ್ರೇಕ್ಷಕ ಬಬರ!





ಗೌಡರ ಗೌಡನಾ



36 ಕೋಟಿ ವಹಿವಾಟು ನ್ಯಾಯಾಧೀಶರ ವರ್ಗಾ ಯತ್ನ ವಿಫಲ

ಆಪರೇಶನ್ ಶತ್ರುಜೀತ್-ಜೀತ್ ಶತ್ರುವಿನದೇ..

ಕರ್ನಾಟಕದ ಬೆಳಗಾವಿಯಲ್ಲಿ ಮೊನ್ನೆ ಅಮೆರಿಕದ ಸೈನಿಕರು ಮತ್ತು ಭಾರತದ ಸೈನಿಕರು ಒಟ್ಟಾಗಿ ಭಯೋತ್ಪಾದಕರ ವಿರುದ್ಧ ಹೋರಾಡುವುದು ಹೇಗೆ ಎಂಬ ಬಗ್ಗೆ ತಾಲೀಮು ಪಡೆದರು. ಪ್ರಾಯಶಃ ಇದು ಕಳೆದ ಎರಡು ವರ್ಷಗಳಲ್ಲಿ ಅಮೆರಿಕ ಭಾರತದೊಂದಿಗೆ ಮಾಡುತ್ತಿರುವ 25ನೇ ಸೈನಿಕ ಕವಾಯತು. ಇದ್ದಕ್ಕಿದ್ದ ಹಾಗೆ ಅಮೆರಿಕ ಭಾರತದ ಸೈನ್ಯದೊಂದಿಗೆ ಇಷ್ಟೊಂದು ಸ್ನೇಹವನ್ನು ಏಕೆ ಮಾಡುತ್ತಿದೆ? ಕೆಲವು ಪಂಡಿತರ ಪ್ರಕಾರ ಅಮೆರಿಕದ ಸೈನ್ಯಕ್ಕೆ ಭಾರತದ ಸೈನ್ಯ ಉಗ್ರಗಾಮಿಗಳನ್ನು ಹೇಗೆ ಮಟ್ಟ ಹಾಕಬೇಕೆಂಬುದನ್ನು ಕಲಿಸಿಕೊಡುತ್ತಿದೆಯಂತೆ!


ಆದರೆ ನಿವೃತ್ತ ಏರ್ ಮಾರ್ಷಲ್ ಬಿ.ಕೆ.ಪಾಂಡೆಯವರು ಹೇಳುವಂತೆ "ಭಾರತ-ಅಮೆರಿಕ ಜಂಟಿ ಕವಾಯತಿನಿಂದ ಅಮೆರಿಕಕ್ಕೆ ಅನುಕೂಲವೇ ವಿನಃ ಭಾರತಕ್ಕಲ್ಲ". ಏಕೆಂದರೆ ಅವರು ಇಲ್ಲಿ ಕಲಿಯುವುದಕ್ಕಿಂತ ನಮ್ಮ ಸೈನಿಕರ ದೈಹಿಕ ಸಾಮರ್ಥ್ಯವನ್ನು ಅಳೆಯುತ್ತಿದ್ದಾರೆ. ಏಕೆಂದರೆ ಅದರ ಬಗ್ಗೆ ಅವರಿಗೆ ಸಾಕಷ್ಟು ಭರವಸೆ ಬಂದ ನಂತರವೇ ವಿಶ್ವದ ದೊಡ್ಡಣ್ಣ ಭಾರತಕ್ಕೆ ಈ ಭೂಭಾಗದಲ್ಲಿ ಕೆಲವು ಸೈನಿಕ ಜವಾಬ್ದಾರಿಯನ್ನು ವಹಿಸಿಕೊಡಲಿದೆ. ಅಂದರೆ ತನ್ನ ಸಾಮಂತನಾಗಿ ಅರಬ್ ದೇಶದಲ್ಲಿ ಇಸ್ರೇಲ್ ಮಾಡುತ್ತಿರುವಂತಹ ದಮನಕಾರಿ ಕೆಲಸವನ್ನು ಏಷಿಯಾದಲ್ಲಿ ಭಾರತಕ್ಕೆ ವಹಿಸಿಕೊಡಲಿದೆ. ಅಷ್ಟು ಮಾತ್ರವಲ್ಲದೆ ಏಷಿಯಾದ ಬಹುಭಾಗದಲ್ಲಿ ತಲೆ ಎತ್ತುತ್ತಿರುವ ಕಮ್ಯುನಿಸ್ಟ್ ಮತ್ತು ರಾಷ್ಟ್ರೀಯವಾದಿ ಕ್ರಾಂತಿಕಾರಿಗಳನ್ನು ಹೇಗೆ ಬಗ್ಗು ಬಡಿಯಬಹುದೆಂಬುದರ ತರಬೇತಿಯನ್ನು ಅಮೆರಿಕ ಭಾರತಕ್ಕೆ ನೀಡುತ್ತಿದೆ. ವಿಶ್ವದ ಹೋರಾಟಗಳನ್ನು ಕಳೆದ 50 ವರ್ಷಗಳಿಂದ ಪ್ರತ್ಯಕ್ಷ ಮತ್ತು ಪರೋಕ್ಷ ತಂತ್ರಗಳಿಂದ ಬಗ್ಗು ಬಡಿಯುತ್ತಿರುವ ಅಮೆರಿಕಾಗೆ ಭಾರತದಿಂದ ಕಲಿಯುವುದೇನೂ ಇಲ್ಲ. ಈ ಕವಾಯತಿಗೆ ಶತ್ರುಜೀತ್ ಎಂದೂ ಹೆಸರಿಟ್ಟಿದ್ದಾರೆ. ಈ ಹೆಸರೂ ಸಹಾ ನಮ್ಮ ಸ್ವಾತಂತ್ರ್ಯದಷ್ಟೇ ಕುಚೋದ್ಯದ್ದು.

ಗ್ರೇಟರ್ ಬೆಂಗಳೂರು ಎಂಬ ತಿರುಕನ ಕನಸು

ಚಾರ್ವಾಕ

- ಶಿವಸುಂದರ್ -


ಬೆಂಗಳೂರ್ ಬೆಂಗಳೂರು ಆಗುವದರೊಂದಿಗೆ ಅದೇ ಸಮಯದಲ್ಲಿ ಗ್ರೇಟರ್ ಬೆಂಗಳೂರ್ ಸಹ ಆಗುತ್ತಿದೆ. ಇದರಲ್ಲಿ 114 ಹಳ್ಳಿಗಳು ಮತ್ತು 7 ಪುರಸಭೆ ಮತ್ತು ಒಂದು ಮುನ್ಸಿಪಾಲಿಟಿಯೂ ಸೇರಿ ಬೆಂಗಳೂರಿನ ಗಾತ್ರ ಹೆಚ್ಚಲಿದೆ. ಜೇಬಲ್ಲಿ ಒಂದು ಪೈಸ ದುಡ್ಡಿರದ ಬೆಂಗಳೂರಿನ ಕೂಲಿ ಜನಗಳೂ ಸಹ ಏನೋ ತಮಗೆ ಮಹತ್ತರವಾದದ್ದು ಸಂಭವಿಸಲಿದೆ ಎಂಬ ನಿರೀಕ್ಷೆ ಇಟ್ಟುಕೊಳ್ಳುವಂತೆ ಮಾಧ್ಯಮಗಳು ತುತ್ತೂರಿ ಊದುತ್ತಿವೆ.



ಈ ಗ್ರೇಟರ್ ಬೆಂಗಳೂರಿನಿಂದ ಯಾರಿಗೆ ಏನು ಪ್ರಯೋಜನ? ಸರ್ಕಾರ ಹೇಳುವಂತೆ ಇದರಿಂದ ಬೆಂಗಳೂರಿನ ಆಸುಪಾಸಿನಲ್ಲಿರುವ ಜನರಿಗೂ ರಾಜ ಸೌಕರ್ಯಗಳು ಸಿಗುತ್ತವೆಯೇ? ಈಗಾಗಲೇ ಅವೆಲ್ಲವನ್ನೂ ಖಾಸಗೀಕರಣ ಮಾಡಲಾಗಿದ್ದು ಇತರ ಸೌಕರ್ಯವಿರಲಿ ಕುಡಿಯುವ ನೀರೂ ಸಹ ತುಟ್ಟಿಯಾಗಲಿದೆ. ಮುರುಕಲು ಮನೆಗೆ ಕಟ್ಟಬೇಕಾದ ಅಭಿವೃದ್ಧಿ ಸುಂಕಕ್ಕೆ ಮನೆಯನ್ನೇ ಮಾರಬೇಕಾದ ಸೌಭಾಗ್ಯ ಅಲ್ಲಿ ವಾಸಿಸುತ್ತಿರುವ ಬಡ ಮಧ್ಯಮ ವರ್ಗದ್ದಾಗಲಿದೆ. ಅಸಲು ಈ ಗ್ರೇಟರ್ ಬೆಂಗಳೂರು ಯೋಜನೆ ಜಾರಿಗೆ ಬರುತ್ತಿರುವುದೇ ಮುಂದೆ ಬೆಳೆಯಲಿರುವ ಬೆಂಗಳೂರನ್ನು ಬರಲಿರುವ ಈ ದೇಶದ ಮತ್ತು ಪರದೇಶದ ಕುಬೇರರಿಗೆ ಸಜ್ಜು ಮಾಡಲೆಂದು.

ಏಕೆಂದರೆ ಇನ್ನು ಮುಂದೆ ಈ ಗ್ರೇಟರ್ ಬೆಂಗಳೂರು ವ್ಯಾಪ್ತಿಯಲ್ಲಿ ಅಭಿವೃದ್ಧಿ ಎಂಬುದೆಲ್ಲವೂ ದೊಡ್ಡ ರಿಯಲ್ ಎಸ್ಟೇಟ್ ಮ್ಯಾಗ್ನೆಟ್‌ಗಳು ಒಟ್ಟು ರೂಪಿಸುವಂತೆ ಆಗಲಿದೆ. ಅದಕ್ಕೆ ಅಭಿವೃದ್ಧಿ ಪ್ರಾಧಿಕಾರವೆಂದು ಕರೆಯುತ್ತಾರೆ. ಆದರೆ ಪ್ರಾಧಿಕಾರದ ಬಾಗಿಲಬಳಿ ಹೋಗುವ ತಾಕತ್ತೂ ಸಹ ಈ ಹಿಂದೆ ನಗರಸಭೆಗೆ ಸಲೀಸಾಗಿ ಹೋಗಿ ಬರುತ್ತಿದ್ದ ಜನತೆಗೆ ಇರದಂತಾಗುತ್ತದೆ. ಆದ್ದರಿಂದಲೇ ಗ್ರೇಟರ್ ಬೆಂಗಳೂರೆಂದರೆ ತಿರುಕನ ಕನಸು-ಕುಬೇರರ ಅಮರಾವತಿ. ಇಂತಹ ಬೆಂಗಳೂರ್ ಅನ್ನು ಬೆಂಗಳೂರು ಅಂದರೂ ಬ್ಯಾಂಗಲೂರ್ ಅಂದರೂ ವ್ಯತ್ಯಾಸವೇನು?

RAW ಸಂಸ್ಥೆಯಲ್ಲಿ ಮುಸ್ಲಿಮರು ಏಕಿಲ್ಲ?



ದೇಶ ರಕ್ಷಣೆ ಎಂದರೆ ಹಿಂದೂಗಳ ರಕ್ಷಣೆ..!

ಗುಟ್ಟು ○ ರಟ್ಟು

ಭಾರತದ ಅಲ್ಪಸಂಖ್ಯಾತರ ಬಗ್ಗೆ ಇತರ ಎಲ್ಲಾ ರಾಜಕೀಯ ಪಕ್ಷಗಳು ಸದಾ ತುಷ್ಟೀಕರಣ ನೀತಿಗಳನ್ನೇ ಅನುಸರಿಸುತ್ತಾ ಬಂದಿವೆ ಎಂಬುದು ಬಿಜೆಪಿ ಹಾಗೂ ಸಂಘ ಪರಿವಾರದ ಹುಯಿಲು. ಮೊನ್ನೆ ಸಚ್ಚಾರ್ ಸಮಿತಿ "ಸರ್ಕಾರದ ಹಲವಾರು ಕ್ಷೇತ್ರಗಳಲ್ಲಿ ಅದರಲ್ಲೂ ಮುಖ್ಯವಾಗಿ ಸೇನಾ ಕ್ಷೇತ್ರದಲ್ಲಿ ಮುಸ್ಲಿಮರ ಪ್ರಾತಿನಿಧ್ಯ ಅತ್ಯಂತ ಕಡಿಮೆಯಾಗಿದೆ. ಆದ್ದರಿಂದ ಸೇನಾ ನೇಮಕಾತಿಯಲ್ಲಿ ಮುಸ್ಲಿಮರ ಪ್ರಮಾಣ ಹೆಚ್ಚಿಸಬೇಕು" ಎಂಬ ಸಲಹೆಯನ್ನು ಮುಂದಿಟ್ಟಾಗ ಇದೇ ದೇಶಭಕ್ತರು "ಇದೊಂದು ದೇಶದ್ರೋಹಿ ಕೆಲಸ. ದೇಶದ ರಕ್ಷಣೆಯ ವಿಷಯ ಬಂದಾಗ ಈ ರೀತಿಯ ಮೀಸಲಾತಿ ನೀತಿಗಳನ್ನೆಲಾ ಅನುಸರಿಸಬಾರದು. ಇದರಿಂದ ದೇಶದ ರಕ್ಷಣಾ ಸಾಮರ್ಥ್ಯ ಕುಸಿಯುತ್ತದೆ" ಎಂದೆಲ್ಲಾ ವಾದಿಸಿದ್ದರು. ಮೊನ್ನೆ ಪ್ರಧಾನಿ ಮನಮೋಹನ್ ಸಿಂಗ್ ಉತ್ತರ ಪ್ರದೇಶದಲ್ಲಿ ಬರಲಿರುವ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರಿ ಕ್ಷೇತ್ರದಲ್ಲಿ ಮುಸ್ಲಿಮರ ಪ್ರಾತಿನಿಧ್ಯ ಕನಿಷ್ಠ ಶೆ.15ಕ್ಕಾದರೂ ಏರಿಸಬೇಕೆಂದು ಪ್ರಸ್ತಾಪ ಮಾಡಿದ ಕೂಡಲೇ ಮತ್ತೆ ಚೆಡ್ಡಿಗಳೆಲ್ಲಾ ಎದ್ದು ಕೂತು ಬಿಟ್ಟರು.

ದೇಶದ ರಕ್ಷಣೆಯ ವಿಚಾರದಲ್ಲಿ ಯಾವುದೇ ಮೀಸಲಾತಿ ಇರಬಾರದೆಂಬ ಈ ನಕಲಿ ದೇಶಭಕ್ತರ ವಾದದಲ್ಲಿ ಯಾವುದೇ ಮತಧರ್ಮಗಳಿಗೆ ಸೇರಿದ್ದರೂ ಪರವಾಗಿಲ್ಲ ಸಮರ್ಥರಾಗಿ ದೇಶ ರಕ್ಷಣೆ ಮಾಡಿದರೆ ಸಾಕೆಂಬ ದೇಶಭಕ್ತಿ ಇದೆಯೋ ಅಥವಾ ಮುಸ್ಲಿಂ ವಿರೋಧವಿದೆಯೋ? ಏಕೆಂದರೆ ದೇಶದ ರಕ್ಷಣಾ ವಿಭಾಗಕ್ಕೆ ಸಂಬಂಧಪಟ್ಟ ಬೇಹುಗಾರಿಕಾ ಸಂಸ್ಥೆಯಾದ RAW ಮತ್ತು IBಗಳಲ್ಲಿ ಸಮರ್ಥರಾಗಿದ್ದರೂ ಒಬ್ಬ ಮುಸ್ಲಿಮರೂ ಇಲ್ಲ. ಇದರಿಂದ ದೇಶದ ರಕ್ಷಣೆ ಬಡವಾಗಿದ್ದರೂ ದೇಶಭಕ್ತರು ಮಾತ್ರ ಮೌನವಾಗಿರುವುದೇಕೆ?

ಇತ್ತೀಚೆಗೆ ಔಟ್‌ಲುಕ್ ಪತ್ರಿಕೆ ಪ್ರಕಟಿಸಿರುವ ವರದಿಯಲಿ ಒಟ್ಟು 10000ದಷ್ಟು ನೌಕರರಿರುವ RAW ಸಂಸ್ಥೆಯಲ್ಲಿ 1969ರಿಂದ ಈ ವರೆಗೆ ಒಬ್ಬ ಮುಸ್ಲಿಮನನ್ನೂ ಭರ್ತಿ ಮಾಡಿಕೊಂಡಿಲ್ಲ ಎಂಬ ಆಘಾತಕಾರಿಯಾದ ಮಾಹಿತಿಯನ್ನು ಹೊರಹಾಕಿದೆ. ಏಕೆ ಹೀಗೆ? ಏನಿದರ ಗುಟ್ಟು?

ದೇಶದ ರಕ್ಷಣೆಯೇ ಪ್ರಮುಖವೆಂದಾದಲ್ಲಿ ಅದನ್ನು ಯಶಸ್ವಿಯಾಗಿ ನಿಭಾಯಿಸುವ ಯಾರಿಗೇ ಆದರೂ ಆ ಜವಾಬ್ದಾರಿಯನ್ನು ವಹಿಸಬಹುದಲ್ಲವೇ?

ಮುಸ್ಲಿಮರಿಗೆ ಮೀಸಲಾತಿ ಕೊಡಬಾರದು ಎನ್ನುವಲ್ಲಿ ಅವರ ವಾದ ಅದೇ ಅಲ್ಲವೇ? ಹಾಗಿದ್ದಲ್ಲಿ ದೇಶ ರಕ್ಷಣೆಯ ವಿಷಯ ಬಂದಾಗ ಅದೇಕೆ ಇದ್ದಕ್ಕಿದ್ದಂತೆ ಏಕೆ ಮಾಯವಾಗಿಬಿಡುತ್ತದೆ? ಏಕೆಂದರೆ ವಿಷಯ ಸ್ಪಷ್ಟ.

1969ರಿಂದಲೂ ಅಂದರೆ ಕಾಂಗ್ರೆಸ್ ಸೆಕ್ಯುಲರಿಸಂ ಭಜನೆ ಮಾಡುತ್ತಾ ಮುಸ್ಲಿಮರನ್ನು ತುಷ್ಟೀಕರಿಸುತ್ತಿತ್ತು ಎಂಬ ಕಾಲದಿಂದಲೂ ಭಾರತದ ಪ್ರಭುತ್ವಕ್ಕೆ ಅದನ್ನು ನಿಯಂತ್ರಿಸುವ ಭಾರತದ ಆಳುವವರ್ಗಗಳಿಗೆ ಮುಸ್ಲಿಮರ ಬಗ್ಗೆ ಆಳವಾದ ಅನುಮಾನ ಹಾಗೂ ಅಸಹನೆ ಇದ್ದೇ ಇದೆ.

ಇದು ಎಲ್ಲಿಯತನಕ ಎಂದರೆ ಈ ದೇಶದ ಪ್ರಧಾನಮಂತ್ರಿ ಸಿಖ್ಖರಾದ ಮನಮೋಹನ ಸಿಂಗರೇ ಆದರೂ ಅವರ ಅಂಗರಕ್ಷಣೆಯ ಜವಾಬ್ದಾರಿಯಲ್ಲಿ ಒಬ್ಬ ಸಿಖ್ಖನೂ ಇಲ್ಲ. ಮುಸ್ಲಿಮನಂತೂ ಇಲ್ಲವೇ ಇಲ್ಲ. ಅಂದರೆ ಈ ದೇಶದಲ್ಲಿ ಮುಸ್ಲಿಮರನ್ನು ಅನುಮಾನದಿಂದಲೇ ನೋಡಲಾಗುತ್ತದೆ ಎಂದೇ ಅರ್ಥವಲ್ಲವೇ? ಪ್ರಭುತ್ವದ ಅಂತಃಪುರದಲ್ಲೇ ಈ ಬಗೆಯ ಪೂರ್ವಾಗ್ರಹಗಳಿರುವಾಗ ದೇಶದಲ್ಲಿ ಈ ಪ್ರಭುತ್ವ ಇನ್ನೆಂತಹ ಪೂರ್ವಾಗ್ರಹ ಬಿತ್ತುತ್ತಿರಬಹುದು?

ಎಲ್ಲಕ್ಕಿಂತ ಮುಖ್ಯವಾಗಿ ಈ ಪೂರ್ವಾಗ್ರಹ ಮತ್ತು ತಾರತಮ್ಯ ಹೆಚ್ಚಾದದ್ದು ಬಿಜೆಪಿ ಆಳ್ವಿಕೆಯ ಕಾಲದಲ್ಲೇ ಆದರೂ ಪ್ರಾರಂಭವಾದದ್ದು ಮಾತ್ರ ಕಾಂಗ್ರೆಸ್ ಕಾಲದಲ್ಲಿ ಎನ್ನುವುದಾದರೆ ಮುಸ್ಲಿಮರು ಯಾವಾಗಲೂ ಶಾಶ್ವತ ಪರಕೀಯರಂತೆ ಇರುತ್ತಾರೆ ಎಂದು ದೂರಲು ಯಾರಿಗೆ ತಾನೆ ನೈತಿಕ ಅರ್ಹತೆ ಇರುತ್ತದೆ?

No Comments

"ಒಸಾಮಾ ಬಿನ್ ಲಾಡೆನ್‌ಗಿಂತ ಜಾರ್ಜ್ ಬು... ಹೆಚ್ಚು ಅಪಾಯಕಾರಿ"

-ಸರ್ವೆ ಒಂದರಲ್ಲಿ ಬ್ರಿಟನ್ನಿನ ಶೇ.75 ಜನ... ಅಭಿಮ...



"ಸರ್ಕಾರ ಸುಪ್ರೀಂಕೋರ್ಟ್‌ನಲ್ಲಿ ರಿವ್ಯೂ ಪೆಟಿಷನ್ ಹಾಕಿದ್ದರೂ ನಾವೇನೂ ಕೆಲಸವನ್ನು ಸ್ಥಗಿತಗೊಳಿಸಿರಲಿಲ್ಲ"


-ಅಶೋಕ್ ಖೇಣಿ. (BMIC ಕೆಲಸ ಮುಂದುವರೆಸಿದ್ದರ ಬಗ್ಗೆ

"ನಮ್ಮ ಪ್ರಧಾನ ಕಾಳಜಿ ಇರುವುದು ಸರ್ಕಾರದ ... ವಿದೇಶಾಂಗ ನೀತಿಯ ಬಗ್ಗೆ"

-ಪ್ರಕಾಶ್ ಕಾರಟ್... ಸಿ.ಪಿ.ಎಂ. ಪಕ್ಷದ ಕಾರ್ಯದರ್ಶಿ...

"ಭಾರತ-ಅಮೆರಿಕ ಜಂಟಿ ಕವಾಯತಿನಿಂದ ಅಮೆರಿಕಕ್ಕೆ ಅನುಕೂಲವೇ ವಿನಃ ಭಾರತಕ್ಕಲ್ಲ"

-ನಿವೃತ್ತ ಏರ್ ಮಾರ್ಷಲ್ ಬಿ.ಕೆ.ಪಾಂ...



"ಹೊಸ ರೀತಿಯ ಬರಹಗಳು ಬರುತ್ತಿರುವುದು ನಿಜವೇ. ಆದರೆ ಸಾಹಿತ್ಯದ ದಿಕ್ಕನ್ನು ಬದಲಿಸಬಲ್ಲಂಥ ಸಾಹಿತ್ಯ ಬರುತ್ತಿಲ್ಲ"

-ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ...

ನಂಬಿದ್ರೆ ನಂಬಿ ಬಿಟ್ರೆ ಬಿಡಿ

"ಅಧಿಕಾರಿಗಳು ಹತ್ತುದಿನ ಕಾಡಿನಲ್ಲಿ ವಾ... ಹೂಡಿದರೆ ನಕ್ಸಲರ ಸಮಸ್ಯೆ ನಿವಾರಣೆಯಾಗುತ್ತ..."

-ಎಚ್.ಡಿ.ಕುಮಾರಸ್ವಾ...



"ನಾನು ವಿದ್ಯಾರ್ಥಿಯಾಗಿದ್ದಾಗಲೇ ನನ್ನನ್ನು ಗುರುಗಳಾಗಿದ್ದ ಜಿ.ಎಸ್.ಎಸ್.ರವರು ಕವಿ ಎಂದು ಗುರುತಿಸಿದ್ದರು"

-ಸುಮತೀಂದ್ರ ನಾಡಿಗ

"ಸುವರ್ಣ ಸಂಭ್ರಮ ಕಡಿಮೆ ಖರ್ಚಿನಲ್ಲಿ ಆಗಿದೆ. ಅದಕ್ಕಾಗಿ ಕೇವಲ 80... ರೂ.ಗಳನ್ನು ಮಾತ್ರ ಖರ್ಚು ಮಾಡಿದ್ದೇವೆ."

-ಐ.ಎಂ. ವಿಠಲಮೂರ್ತಿ, ಕ... ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದ...

"ಶ್ಯಾಮನೂರು ಶಿವಶಂಕರಪ್ಪನವರು ಅಜಾತ... ಮತ್ತು ದಾನಶೂರ ಕರ್ಣ"

-ಅಭಿನಂದನಾ ಪತ್ರದ ಸಾಲುಗ...



"ವಿಶೇಷ ಆರ್ಥಿಕವಲಯದಡಿ... ವಾದ ಅರ್ಧದಷ್ಟು ಜಮೀನನ್ನು ರಿಯ... ಎಸ್ಟೇಟಿಗೆ ಬಳಸಿದರೆ ತಪ್ಪೇನಿಲ್ಲ"

-ಕಟ್ಟಾ ಸುಬ್ರಹ್ಮಣ್ಯ ನಾ...

ವಾರದ ಘೋಷಣೆ

"ನಮ್ಮ ಪರಿಸರದಲ್ಲಿ ಯಾವುದೇ ಗುಂಪು ಘರ್ಷ... ಯಾಗಿಲ್ಲ. ಇಲ್ಲಿ ಆಗಿರುವುದು ಪೊಲೀಸ್ ದೌರ್ಜ... ಆದ್ದರಿಂದ ಗುಂಪು ಘರ್ಷಣೆಯ ಹೆಸರಲ್ಲಿ ನೀಡಿರು... ಪರಿಹಾರವನ್ನು ನಾವು ವಾಪಸ್ ಮಾಡುತ್ತಿದ್ದೇವ..."

-ಮಂಗಳೂರಿನ ಬದ್ರಿಯಾ ನಗ... ಗ್ರಾಮಸ್ಥರು. ಸರ್ಕಾರ ಕೊಟ್ಟ ಪರಿಹಾ... ಹಣವನ್ನು ತಿರಸ್ಕರಿಸು...

ದುಃಖ ತನ್ನಷ್ಟಕ್ಕೆ ತಾನಿರಬಲ್ಲದು, ಆದರೆ ಸಂತೋಷದ ಸಂಪೂರ್ಣ... ಮೌಲ್ಯ ಪಡೆಯಲು ಅದನ್ನು ಹಂಚಿಕೊಳ್ಳುವವರು ಬೇಕು ಎನ್ನುತ್ತಾರೆ. ಸ್ನೇಹ ಎನ್ನುವುದು ಬೆಲೆ ಕಟ್ಟಲಾಗದ ಸಂಬಂಧ. ಅದೂ ರಕ್ತ ಸಂಬಂಧವನ್ನೂ ಮೀರಿದ ಸಂಬಂಧ. ಸ್ನೇಹವೆಂದರೇನು, ಸ್ನೇಹದ ಮಹತ್ವವೇನು? ಈ ಎಲ್ಲದರ ಕುರಿತ ಸೂಕ್ತಿಗಳನ್ನು ಈ ಸಲ ನೀಡಿದ್ದೇವೆ. ಸ್ನೇಹದಿಂದ....

-ಮ...

ನಿಜವಾದ ಸ್ನೇಹಿತರು ಸಿಗುವುದು ಅಪರೂಪ, ಅಂತಹವರಿಂದ ದೂರ ಹೋಗುವುದು ಕಷ್ಟ, ಅಂತಹವರನ್ನು ಮರೆಯುವುದು ಅಸಾಧ್ಯ. -ಜೆ. ರ್‍ಯಾಂ...

ನಮ್ಮ ಚಿತ್ರರಂಗಕ್ಕೇನಾಗಿದೆ?

ಬಿಹಳ ದಿನಗಳ ನಂತರ ಕನ್ನಡ ಚಿತ್ರರಂಗ ಕುರಿತ ವರದಿಯನ್ನು ಮುಖಪುಟದಲ್ಲಿ ಪ್ರಕಟಿಸಿರುವುದಕ್ಕೆ ಪ್ರಮುಖ ಕಾರಣಗಳಿವೆ. ಕಳೆದ ಹಲವು ವರ್ಷಗಳಿಂದ ಬಿಕ್ಕಟ್ಟನ್ನು ಎದುರಿಸುತ್ತಿರುವ ಕನ್ನಡ ಚಿತ್ರೋದ್ಯಮದ ಎಲ್ಲಾ ವಲಯಗಳಲ್ಲೂ ಈಗ ಅಸಹಾಯಕತೆ, ಅಸಹನೆ, ಭಿನ್ನಾಭಿಪ್ರಾಯ ಹೆಚ್ಚಾಗಿ ವಿವಿಧ ರೀತಿಯಲ್ಲಿ ಸ್ಫೋಟಗೊಳ್ಳುತ್ತಿದೆ. ಇದಕ್ಕೆ ಕಾರಣಗಳೇನು ಎಂಬುದೇ ನಮ್ಮ ವರದಿಯ ಕಾಳಜಿಯಾಗಿದೆ.

ನಮ್ಮ ಬಳಿದಾಳೆ ಈಶರವರು ಈ ವರದಿಗೆ ಮಾಹಿತಿ ಸಂಗ್ರಹಿಸುತ್ತಿದ್ದಾಗಲೇ ನಮ್ಮ ಆಫೀಸಿಗೆ ನಿರ್ಮಾಪಕ ಕೆ. ಮಂಜುರವರು ಆಗಮಿಸಿದರು. ಇತ್ತೀಚೆಗೆ ಸೂಪರ್‌ಹಿಟ್ ನೀಡಿರದಿದ್ದ ಮಂಜುರವರು ಸಹಜವಾಗಿಯೇ ಹಲವು ನಾಯಕನಟರ ವರಸೆಗಳ ಬಗ್ಗೆ, ಕಾರ್ಮಿಕ ಸಂಘದ ಕಿರಕುಳದ ಬಗ್ಗೆ ಬೇಸರದಿಂದ ಆದರೆ ಅಷ್ಟೇ ಹಾಸ್ಯಮಯವಾಗಿ ಮಾತನಾಡಿದರು.


"ಮಂಜುರವರೆ, ಈ ವರ್ಷ ಕನ್ನಡ ಚಿತ್ರರಂಗ ಅನುಭವಿಸಿರುವ ನಷ್ಟ ಎಷ್ಟು?" ಅಂದೆ.

"ಇಲ್ಲಿಯವರೆಗೆ ಐವತ್ತು ಚಿತ್ರಗಳು ಬಿಡುಗಡೆ ಆಗಿವೆ ಎಂದಿಟ್ಟುಕೊಂಡರೆ, ಪ್ರತಿ ಸಿನಿಮಾದಿಂದ ಒಂದು ಕೋಟಿಯಷ್ಟು ಅಂತ ಲೆಕ್ಕ ಹಾಕಿದರೆ, ಐವತ್ತು ಕೋಟಿ ರೂಪಾಯಿ ನಷ್ಟವಾಗಿದೆ ನಿರ್ಮಾಪಕರಿಗೆ. ನಟರಿಗೆ, ಕಾರ್ಮಿಕರಿಗೆ ಸಂಭಾವನೆ ಸಿಕ್ಕಿರುತ್ತೆ, ಆದರೆ ಮನೆ, ಮಠ ಕಳೆದುಕೊಳ್ಳುವವರು ನಾವು" ಎಂದರು.

"ಅದೇನೋ ನಿಜ, ಆದರೆ ನೀವೆಲ್ಲ ಯಾಕೆ ರೀಮೇಕ್‌ಗಳಿಗೆ, ದುಬಾರಿ ನಟರಿಗೆ ಶರಣಾಗುತ್ತೀರಿ? ಹೊಸ ಕತೆ, ಹೊಸ ನಟರು, ಹೊಸ ನಿರ್ದೇಶಕರು ಯಾಕೆ ನಿಮ್ಮ ಗಮನಕ್ಕೆ ಬರಲ್ಲ?" ಅಂತ ಕೇಳಿದರೆ "ಯಾರಾದರೂ ಅವರ ಸಿನಿಮಾ ಹಿಟ್ ಆಗುತ್ತೆ, ನಾನು ಹಾಕಿದ ಬಂಡವಾಳದ ಮೇಲೆ ಕನಿಷ್ಠ ಮೂರು ಪರ್ಸೆಂಟ್‌ನಷ್ಟು ಬಡ್ಡಿ ಸಿಗುವಷ್ಟು ಲಾಭ ಬರುತ್ತೆ ಅಂತ ಗ್ಯಾರಂಟಿ ಕೊಡಲಿ, ಅವರ ಸಿನಿಮಾ ಮಾಡುತ್ತೇನೆ" ಅಂದರು. ಅದಕ್ಕೆ ಪ್ರತಿ ಪ್ರಶ್ನೆಯಾಗಿ "ರೀಮೇಕ್‌ಗಳಲ್ಲೂ ಆ ಗ್ಯಾರಂಟಿ ಇರಲ್ಲ ಆದರೂ ಮಾಡುತ್ತಿರಲ್ಲಾ?" ಅಂದಿದ್ದಕ್ಕೆ ಮಂಜುರವರಲ್ಲಿ ಉತ್ತರ ಇರಲಿಲ್ಲ.

ಕನ್ನಡ ಚಿತ್ರರಂಗ ಎದುರಿಸುತ್ತಿರುವ ಬಿಕ್ಕಟ್ಟನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವೇನಲ್ಲ, ಇದಕ್ಕೆ ಒಂದು ಉದಾಹರಣೆ ಕೊಡಬಲ್ಲೆ. ಹಲವು ತಿಂಗಳ ಹಿಂದೆ ನನ್ನ ತಂಗಿ ಚಿತ್ರದುರ್ಗದಲ್ಲಿ 'ತನನಂ ತನನಂ' ಚಿತ್ರೀಕರಿಸುತ್ತಿದ್ದಾಗ, ಅದನ್ನು ನೋಡಲು ಬಂದಿದ್ದ ಯುವಕನನ್ನು ಮಾತನಾಡಿಸಿದಳು. ಪುನೀತ್ ರಾಜ್‌ಕುಮಾರ್ ತನ್ನ ಫೇವರಿಟ್ ಹೀರೋ ಎಂದು ಆತ ಹೇಳಿದಾಗ, ಆಗ ತಾನೇ ಬಿಡುಗಡೆಯಾಗಿದ್ದ 'ಅಜಯ್' ಸಿನಿಮಾ ನೋಡಿದೆಯಾ ಎಂದು ಬೇಬಿ ಕೇಳಿದರೆ ಆತ "ನೋಡಲಿಲ್ಲ" ಅಂದನಂತೆ. ಯಾಕೆ ಅಂತ ಕೇಳಿದ್ದಕ್ಕೆ "ಅದು ತೆಲುಗಿನ 'ಒಕ್ಕುದು' ಚಿತ್ರದ ರೀಮೇಕ್. ನಾನಾಗಲೇ ಒರಿಜಿನಲ್ ನೋಡಿರುವಾಗ ಇದನ್ನು ಯಾಕೆ ನೋಡಲಿ?" ಎಂದು ಉತ್ತರಿಸಿದ. ಅಷ್ಟೇ ಅಲ್ಲ, "ನಮ್ಮ ಕನ್ನಡ ಚಿತ್ರದವರಿಗೆ ಬುದ್ಧಿ ಇದೆಯಾ? ಕೋಲಾರ್‌ನಿಂದ ಬೀದರ್ ತನಕ ತೆಲುಗು ಸಿನಿಮಾಗಳನ್ನು ಕನ್ನಡದ ಜನ ನೋಡಿರುತ್ತಾರೆ. ಆದರೂ ಅದೇ ಸಿನಿಮಾಗಳನ್ನು ಕನ್ನಡದಲ್ಲಿ ರೀಮೇಕ್ ಮಾಡುತ್ತಾರೆ. ಅದ್ಧೂರಿಯಾಗಿರುವ ತೆಲುಗು ಸಿನಿಮಾ ನೋಡಿರುವ ಜನ ಅದರ ಬಡ ಕನ್ನಡ ಕಾಪಿಗಳನ್ನು ಯಾಕೆ ನೋಡ್ಬೇಕು ಅಂತ ಕೇಳಿಕೊಂಡೇ ಇಲ್ಲವಲ್ಲಾ" ಅಂದನಂತೆ ಆ ಹುಡುಗ!

ಆದರೆ ನಮ್ಮ ನಿರ್ಮಾಪಕರಿಗೆ ಆ ಹುಡುಗನಿಗೆ ಇರುವಷ್ಟು ಬುದ್ಧಿ ಇಲ್ಲ, ಮೊನ್ನೆ ತಾನೆ ಕರ್ನಾಟಕದ ಹಲವಾರು ಕಡೆ ಶತದಿನೋತ್ಸವ ಕಂಡ 'ಪೋಕರಿ'



ಎಂಬ ತೆಲುಗು ಚಿತ್ರವನ್ನು ಈಗ ಭಟ್ಟಿ ಇಳಿಸಲು ಹೊರಟಿದ್ದಾರೆ. ಹಾಗೆಯೇ ಈಗ ಸೂಪರ್ ಹಿಟ್ ಆಗಿರುವ 'ಬೊಮ್ಮರಿಲ್ಲು' ಎಂಬ ಮತ್ತೊಂದು ತೆಲುಗು ಸಿನಿಮಾವನ್ನು ರೀಮೇಕ್ ಮಾಡಲು ತಯಾರಿ ನಡೆಸುತ್ತಿದ್ದಾರೆ. ಈಗಾಗಲೇ ಆ ಎರಡು ಚಿತ್ರಗಳನ್ನು ಸಾವಿರಾರು ಕನ್ನಡಿಗರು ತೆಲುಗಿನಲ್ಲಿ ನೋಡಿರುವಾಗ, ಮತ್ತೆ ಯಾಕೆ ಅದನ್ನೇ ಕನ್ನಡದಲ್ಲಿ ನೋಡುತಾರೆ ಹೇಳಿ?

ಇದನ್ನು ನಮ್ಮ ಕನ್ನಡ ಚಿತ್ರರಂಗದ ದಿವಾಳಿತನವೋ, ಸಾಲ-ಸೋಲಿನಿಂದ ಉದ್ಭವಿಸಿರುವ ಅಸಹಾಯಕತೆಯೋ, ಅವರೇ ವಿಮರ್ಶಿಸಿಕೊಳ್ಳಬೇಕು. ಆದರೆ ಅವರಿಂದ ಅದು ಸಾಧ್ಯವೇ? ಈ ಪ್ರಶ್ನೆ ಯಾಕೆಂದರೆ, ಬೇಬಿ ಒಂದು ಆಕ್ಷನ್ ಸಿನಿಮಾದ ಕತೆ ತಯಾರಿಸಿದ್ದಾಳೆ ಎಂದು ಗೊತ್ತಾಗಿ ಓರ್ವ ಹಿರಿಯ ನಿರ್ಮಾಪಕರು ಆಕೆಯನ್ನು ಮಾತುಕತೆಗೆ ಕರೆದಿದ್ದರು. ಈಗಾಗಲೇ ಮೂರು ರೀಮೇಕ್‌ಗಳನ್ನು ನಿರ್ಮಿಸಿ ಅಪಾರ ನಷ್ಟ ಕಂಡಿರುವ ಅವರು ಬೇಬಿ ಹೇಳಿದ ಕತೆ ಕೇಳಿದ ನಂತರ, ಅವಳ ಮುಂದೆ ಮೂರು ತೆಲುಗು ಸಿನಿಮಾಗಳ ಸಿಡಿಗಳನ್ನಿಟ್ಟು "ನಿಮ್ಮ ಕತೆ ಆಮೇಲೆ ಮಾಡೋಣ. ಈಗ ಈ ಮೂರು ಚಿತ್ರಗಳನ್ನು ನೋಡಿ,

ಕಂಡಹಾಗೆ



ನಿಮಗೆ ಯಾವುದು ಇಷ್ಟ ಅಂತ ಹೇಳಿ. ನಾಳೇನೇ ಸಿನಿಮಾ ಅನೌನ್ಸ್ ಮಾಡಿ ನಿಮಗೆ ಒಂದು ಕೋಟಿ ರೂಪಾಯಿ ಕೊಡುತ್ತೇನೆ" ಅಂದರು. ಇದನ್ನು ಕೇಳಿ ಕಕ್ಕಾಬಿಕ್ಕಿಯಾದ ಬೇಬಿ "ಸಾರಿ, ನನ್ನ ಕ್ರಿಯಾಶೀಲತೆ ಇನ್ನೂ ಜೀವಂತವಾಗಿದೆ. ನಾನು ರೀಮೇಕ್ ಮಾಡಲ್ಲ" ಎಂದು ಹೇಳಿ ಹೊರಬಂದ.

ಹೋಗಲಿ, ರೀಮೇಕ್ ಮಾಡುವುದು ಅನಿವಾರ್ಯ ಅನ್ನಿಸಿದರೆ, ಯಾವುದನ್ನು ರೀಮೇಕ್ ಮಾಡಿದರೆ ಯಶಸ್ವಿ ಆಗಬಹುದು ಎಂಬುದೂ ನಮ್ಮವರಿಗೆ ಗೊತ್ತಿರುವಂತಿಲ್ಲ. ಇತ್ತೀಚೆಗೆ ಬಹುತೇಕ ಜನರು ತೆಲುಗು ಸಿನಿಮಾಗಳನ್ನೇ ರೀಮೇಕ್ ಮಾಡಿ ನೆಲಕಚ್ಚುತ್ತಿದ್ದಾರೆ. ಇದಕ್ಕೆ ಕಾರಣ ಚಿತ್ರದುರ್ಗದ ಆ ಯುವಕ ಹೇಳಿದ್ದರಲ್ಲೇ ಉತ್ತರ ವಿದೆ. ಆದರೆ ತಮಿಳು ಚಿತ್ರಗಳು ಕರ್ನಾಟಕದಲ್ಲಿ ಅಷ್ಟು ಜನಪ್ರಿಯವಾಗಿಲ್ಲದಿರುವುದರಿಂದ ಅವುಗಳ ರೀಮೇಕ್‌ಗಳು ಹಿಟ್ ಆಗಿವೆ. ಇದಕ್ಕೆ ತಮಿಳಿನಿಂದ ಭಟ್ಟಿ ಇಳಿಸಿದ 'ಯಜಮಾನ' ಮತ್ತು 'ಮೈ ಆಟೋಗ್ರಾಫ್'ಗಳೇ ಉದಾಹರಣೆ. ಇದನ್ನು ದ್ವಾರಕೀಶ್ ಚೆನ್ನಾಗಿ ಅರ್ಥ ಮಾಡಿಕೊಂಡಿರುವುದರಿಂದಲೇ ಹೆಚ್ಚು ಕನ್ನಡಿಗರು ನೋಡಿರದಿದ್ದ, ಕೇಳರದಿದ್ದ ಮಲಯಾಳಂನ ಸೂಪರ್ ಹಿಟ್ ಚಿತ್ರವನ್ನು 'ಆಪ್ತಮಿತ್ರ'ನನ್ನಾಗಿಸಿ ಗೆದ್ದರು. ಕಾಪಿ ಮಾಡುವುದರಲ್ಲಾದರೂ ಒಂದಿಷ್ಟು ಕ್ರಿಯಾಶೀಲತೆ ತೋರಿಸುತ್ತಾರೆಯೇ ಕನ್ನಡ ಚಿತ್ರರಂಗದವರು?

ಅದೇನೆ ಇರಲಿ, ಇವತ್ತು ಕನ್ನಡ ಚಿತ್ರರಂಗ ಯಾವ ಮಟ್ಟಕ್ಕೆ ಹೋಗಿದೆ ಎಂದರೆ, ಸಿನಿಮಾ ಮುಗಿಯುತ್ತಿದ್ದಂತೆ ಕೈ ಎತ್ತುವ ನಿರ್ಮಾಪಕರಿಂದ ಬೇಸತ್ತು ಕಾರ್ಮಿಕರು ಪ್ರತಿ ದಿನ ತಮ್ಮ ಬಾಟಾ ಪಡೆಯುತ್ತಿದ್ದಾರೆ; ನಾಯಕ ನಟರು ಸಂಭಾವನೆ ಕಡಿಮೆ ಮಾಡಬೇಕೆಂದು ನಿರ್ಮಾಪಕರು ಬೊಬ್ಬೆ ಹಾಕುತ್ತಿದ್ದಾರೆ; ಒಪ್ಪಿಕೊಂಡಷ್ಟು ಹಣ ನೀಡಿ ಎಂದು ನಟರು ತಾಕೀತು ಮಾಡುತ್ತಿದ್ದಾರೆ.

ಇತ್ತೀಚೆಗೆ 'ಜೊತೆ ಜೊತೆಯಲಿ' ಯಶಸ್ವಿ ಆದ ನಂತರ ಆದರ ನಿರ್ದೇಶಕ ದಿನಕರ್ ತೂಗುದೀಪರನ್ನು ಟಿವಿ ಚಾನೆಲ್ ಒಂದು ಲೈವ್ ಸಂದರ್ಶನಕ್ಕೆ ಕರೆದಿತ್ತು, ಆತ ತನ್ನ ಸಿನಿಮಾ ಬಗ್ಗೆ ಮಾತನಾಡುತ್ತಿದ್ದಾಗ, ಪ್ರೇಕ್ಷಕರೊಬ್ಬರಿಂದ ಕರೆ ಬಂತು. ಅದು ಬೇರೆ ಯಾರೂ ಆಗಿರಲಿಲ್ಲ, 'ಜೊತೆ ಜೊತೆಯಲಿ' ಸಿನಿಮಾದ ಹೀರೋಯಿನ್ ರಮ್ಯ, ಭಾರಿ ಚಾಲಾಕಿಯಾದ ರಮ್ಯ ಆ ಲೈವ್ ಸಂದರ್ಶನದಲ್ಲಿ "ಏನು ದಿನಕರ್‌ರವರೇ, ನೀವು ನನಗೆ ಹೇಳಿದ್ದನ್ನು ಸಂಪೂರ್ಣವಾಗಿ ಮರೆತಂತಿದೆ?" ಎಂದು ಕೇಳಿದಳು. ಆಗ ಆತ "ಮರೆತಿಲ್ಲ, ಈ ಸಂದರ್ಶನ ಮುಗಿಯುತ್ತಿದ್ದಂತೆ ನಿಮಗೆ ಫೋನ್ ಮಾಡ್ತೀನಿ" ಎಂದು ಹೇಳಿ ಬಚಾವ್ ಆದರು. ರಮ್ಯ ಕೇಳಿದ್ದು ತನಗೆ ದಿನಕರ್‌ರವರು ನೀಡಬೇಕಿದ್ದ ಬಾಕಿ ಸಂಭಾವನೆ ಬಗ್ಗೆ!

ಇಂತಹ ಭಿನ್ನಾಭಿಪ್ರಾಯ ಅತಿರೇಕಕ್ಕೆ ಹೋಗಿದ್ದು ರವಿಚಂದ್ರನ್‌ರವರ ವಿರುದ್ಧ ನಿರ್ಮಾಪಕರು ಅವಾಚ್ಯ ಶಬ್ದಗಳನ್ನು ಉಪಯೋಗಿಸಿದಾಗ, ಅದಕ್ಕೆ ಪ್ರತಿಕ್ರಿಯೆಯಾಗಿ ಅವರ ಕಚೇರಿಯನ್ನು ಹಲವರು ನಾಶಪಡಿಸಿದಾಗ, ಇದೆಲ್ಲದರ ಮಧ್ಯೆ ಹಲವು ನಿರ್ಮಾಪಕರು ರಾಜೇಂದ್ರಕುಮಾರ್ ಆರ್ಯ ಎಂಬ ನಿರ್ದೇಶಕನ ಮೇಲೆ ಕೈ ಮಾಡಿದಾಗ....

ಇಲ್ಲಿ ನೆನಪಿಡಬೇಕಾದ ಮುಖ್ಯ ಅಂಶವೊಂದಿದೆ. ಅದೇನೆಂದರೆ ಇತ್ತೀಚೆಗೆ ಹಿಟ್ ಆಗಿರುವ 'ಜೋಗಿ' ಮತ್ತು 'ಜೊತೆ ಜೊತೆಯಲಿ' ಎಂಬ ಎರಡೂ ಚಿತ್ರಗಳು ಅಪ್ಪಟ ಸ್ವಮೇಕ್‌ಗಳು. ಹಾಗೆಯೇ 'ಮೈ ಆಟೋಗ್ರಾಫ್' ಹೊರತಾಗಿ ಎಲ್ಲ ರೀಮೇಕ್ ಮತ್ತು ರೀಮಿಕ್ಸ್ (ಮೂರ್‍ನಾಲ್ಕು ಚಿತ್ರಗಳ ಮಿಶ್ರಣ)ಗಳು ನೆಲಕಚ್ಚಿವೆ. ಇದರಿಂದಲಾದರೂ ನಮ್ಮ ಚಿತ್ರರಂಗದವರು ಪಾಠ ಕಲಿತು, ಇನ್ನು ಮುಂದೆ ಹೊಸ ಕತೆ, ಹೊಸ ಮುಖಗಳು, ಹೊಸ ಪ್ರತಿಭೆಗಳಿಗೆ ಅವಕಾಶ ನೀಡಿ ಇಡೀ ಉದ್ಯಮ ಚೇತರಿಸಿಕೊಳ್ಳುವಂತೆ ಆಗಲಿ. ಅದರ ಬದಲಾಗಿ ಕನ್ನಡ, ಕರ್ನಾಟಕದ ಮೇಲಿನ ಅಭಿಮಾನದಿಂದಲೇ ಜನರು ಕಳಪೆ ಸಿನಿಮಾಗಳನ್ನು ನೋಡಲಿ ಎಂದರೆ, ನಾಶವಾಗುವುದು ಚಿತ್ರೋದ್ಯಮ ಹೊರತು ಕನ್ನಡಿಗರಲ್ಲ.

ಈಗ ಕನ್ನಡ ಚಿತ್ರರಂಗದ ಬಗ್ಗೆ ಕನ್ನಡಿಗರಲ್ಲಿ ಎಷ್ಟು ಅಸಹನೆ ಇದೆ ಎಂಬುದಕ್ಕೆ ಇತ್ತೀಚೆಗೆ ಪ್ರಜಾವಾಣಿಯಲ್ಲಿ ಓದುಗರು ವ್ಯಕ್ತಪಡಿಸಿದ ಅಭಿಪ್ರಾಯಗಳೇ ಸಾಕ್ಷಿ. ಅವರೆಲ್ಲರೂ ಚಿತ್ರರಂಗವನ್ನು ಜಾಡಿಸಿದರೇ ಹೊರತು ಇವರಿಂದ ಕನ್ನಡ ಭಾಷೆ, ಸಂಸ್ಕೃತಿ, ಸಮಾಜ ಉದ್ಧಾರವಾಗಿದೆ ಎಂದೂ ಯಾರೂ ಹೇಳಲಿಲ್ಲ, ಅದನ್ನು ನೋಡಿ ನಮ್ಮ ಶಿವಸುಂದರ್‌ರವರು "ಜನರ ಪ್ರತಿಕ್ರಿಯೆಯನ್ನು ಚಿತ್ರರಂಗದವರು ಓದಿದರೆ ಅವರೆಲ್ಲ ಸಾಮೂಹಿಕ ಆತ್ಮಹತ್ಯೆ ಮಾಡಿಕೊಳ್ಳಬೇಕಾಗುತ್ತದೆ" ಅಂದರು.

ಕನ್ನಡ ಚಿತ್ರರಂಗ ಉತ್ತಮ, ಕ್ರಿಯಾಶೀಲ, ಸದಭಿರುಚಿಯ ಸಿನಿಮಾಗಳನ್ನು ನೀಡುವಂತಾಗಲಿ; ಅವರೆಲ್ಲರೂ ಬದುಕಿ, ಪ್ರೇಕ್ಷಕರನ್ನೂ ಉಳಿಸಲಿ ಎಂಬುದಷ್ಟೇ ನಮ್ಮ ಆಶಯ.

-ಗೌರಿ ಲಂಕೇಶ್

ಪ್ರಭಾಕರ್ ಎದುರು ಬದುಕಿನ ಸವಾಲು

"ಕನ್ನಡ ಸಾಹಿತ್ಯಕ್ಕೆ ಉತ್ತಮ ಕೊಡುಗೆಗಳನ್ನು ನೀಡಿದವರನ್ನೇ ಜನ ಮರೆತಿರುತ್ತಾರೆ, ಅಂತಹ ಕೊಡುಗೆ ನೀಡಿದವರಲ್ಲಿ ಎಂ.ಎಸ್. ಪ್ರಭಾಕರ್ ಕೂಡ ಒಬ್ಬರು" ಎಂದು ವಿಮರ್ಶಕ ಮನುಚಕ್ರವರ್ತಿ ಒಮ್ಮೆ ಬೇಸರದಿಂದ ಹೇಳಿದ್ದರು. ಪ್ರಭಾಕರ್‌ರವರು ಹಲವು ಸಾಹಿತ್ಯಾಸಕ್ತರಿಗೆ ಗೊತ್ತಿರುವುದು ಕಾಮರೂಪಿ ಎಂಬ ಅವರ ಕಾವ್ಯನಾಮದ ಮೂಲಕ ಹಾಗೂ ಅವರು ಬರೆದ 'ಕುದುರೆ ಮೊಟ್ಟೆ' ಎಂಬ ಪುಸ್ತಕದಿಂದ ಮತ್ತು ಅದನ್ನೇ ಜಿ.ವಿ. ಅಯ್ಯರ್‌ರವರು ಮಾಡಿದ ಚಲನಚಿತ್ರದಿಂದ.

ಸುಮಾರು ಮೂವತ್ತು ವರ್ಷಗಳ ಹಿಂದೆ ಪ್ರಕಟವಾದ 'ಕುದುರೆ ಮೊಟ್ಟೆ' ಈಗ ಎಲ್ಲೂ ಸಿಗುವುದಿಲ್ಲವಾದ್ದರಿಂದ ನನ್ನನ್ನೂ ಸೇರಿದಂತೆ ಅದೆಷ್ಟೋ ಜನರಿಗೆ ಆ ಪುಸ್ತಕ ಮತ್ತು ಕಾಮರೂಪಿ ಎಂಬ ಬರಹಗಾರ ಗೊತ್ತೇ ಇಲ್ಲ. ಆದರೆ ಮನುಚಕ್ರವರ್ತಿ ಮತ್ತು ನಮ್ಮ ಜಿ. ರಾಜಶೇಖರ್‌ರವರ ಪ್ರಕಾರ 'ಕುದುರೆ ಮೊಟ್ಟೆ' existentialism ನ ಕುರಿತು ಕನ್ನಡದಲ್ಲಿ ಬಂದ ಅತ್ಯುತ್ತಮ ಪುಸ್ತಕಗಳಲ್ಲಿ ಒಂದು.

ಆದರೆ ಎಂ.ಎಸ್. ಪ್ರಭಾಕರ್‌ರವರು ಇಂಗ್ಲಿಷ್ ಓದುವ ಸಾವಿರಾರು ಕನ್ನಡಿಗರಿಗೆ ಗೊತ್ತಿರುವುದು 'ದಿ ಹಿಂದು' ಪತ್ರಿಕೆಯಲ್ಲಿ ಅವರು ಬರೆಯುವ ಲೇಖನಗಳ ಮೂಲಕ. ಹಲವು ದಶಕಗಳಿಂದ ಅಸ್ಸಾಂ ರಾಜ್ಯದಲ್ಲಿ ವಾಸಿಸುತ್ತಿರುವ ಪ್ರಭಾಕರ್‌ರವರು ಭಾರತ ದೇಶದ ಆ ಭಾಗದ ಬಗ್ಗೆ ಅದ್ಭುತ ಲೇಖನಗಳನ್ನು ಬರೆಯುತ್ತಾ ಬಂದಿದ್ದಾರೆ. ಹಾಗೆಯೇ ಹಲವು ವರ್ಷಗಳ ಕಾಲ ದಕ್ಷಿಣ ಆಫ್ರಿಕಾದಲ್ಲಿ ವಾಸ ಮಾಡಿದ ಪ್ರಭಾಕರ್‌ರವರು ಆ ದೇಶದ ಬಗ್ಗೆಯೂ ಉತ್ತಮ ಲೇಖನಗಳನ್ನು ನೀಡಿದ್ದರು. ನಾನು ದಕ್ಷಿಣ ಆಫ್ರಿಕಾಗೆ ಹೋಗಿದ್ದಾಗ ಅವರನ್ನು ಭೇಟಿ ಆಗಿದ್ದೆ ಮತ್ತು ಅವರೊಂದಿಗೆ ಇ-ಮೇಲ್‌ನಲ್ಲಿ ಸಂಪರ್ಕ ಇಟ್ಟುಕೊಂಡಿರುವೆ.

ಈಗ ಪ್ರಭಾಕರ್ ಬಗ್ಗೆ ಬರೆಯುತ್ತಿರುವುದಕ್ಕೆ ಕಾರಣ: ಇತ್ತೀಚೆಗೆ ಪ್ರಸನ್ನರವರು ಫೋನ್ ಮಾಡಿ "ಪ್ರಭಾಕರ್‌ರವರಿಗೆ ಲಂಕೇಶರ ಆತ್ಮಕಥನ 'ಹುಳಿಮಾವಿನ ಮರ' ಬೇಕಂತೆ. ನನಗೆ ಗೊತ್ತಿರುವವರು ಸದ್ಯದಲ್ಲೇ ಗೌಹಾಟಿಗೆ ಹೋಗುತ್ತಿದ್ದಾರೆ, ಅವರೊಂದಿಗೆ ಕಳುಹಿಸಿ ಕೊಡು" ಅಂದರು.



"ಅರೆ, ಪ್ರಭಾಕರ್‌ರವರನ್ನು ಎಲ್ಲಿ ಭೇಟಿ ಆದಿರಿ?" ಅಂದೆ.

"ಅದೊಂದು ಟ್ರ್ಯಾಜಿಡಿ. ಇತ್ತೀಚೆಗೆ ಅವರು ಬೆಂಗಳೂರಿಗೆ ಬಂದಿದ್ದರು. ಮದುವೆ ಆಗಿರದ ಪ್ರಭಾಕರ್ ತಮ್ಮ ಸಹೋದರನ ಪುತ್ರನನ್ನೇ ಮಗನಂತೆ ಕಂಡಿದ್ದರು. ಆದರೆ ಇದ್ದಕ್ಕಿದ್ದ ಹಾಗೆ ಬೆಂಗಳೂರಿನಲ್ಲಿದ್ದ ಅವರ ಸಾಕು ಮಗನಿಗೆ ಅದೇನೋ ಆಗಿ ತೀರಿಕೊಂಡರು. ಅವರ ಶವಸಂಸ್ಕಾರಕ್ಕೆ ಬಂದಿದ್ದ ಪ್ರಭಾಕರ್‌ಗೆ ತುಂಬಾ ಜ್ವರ ಬಂತು. ಇಲ್ಲಿದ್ದು ಚೇತರಿಸಿಕೊಂಡು ಗೌಹಾಟಿಗೆ ವಾಪಸ್ಸು ಹೋಗಿ ಎಂದರೆ ಯಾರ ಮಾತೂ ಕೇಳದೆ ಹೊರಟರು. ಈಗ ಅಲ್ಲಿಂದ ಬಂದಿರುವ ವಿಷಯ ಏನೆಂದರೆ ಪ್ರಭಾಕರ್‌ರವರಿಗೆ ಪ್ರಾಸ್ಟೇಟ್ ಕ್ಯಾನ್ಸರ್ ಇದೆಯಂತೆ" ಎಂದರು ಪ್ರಸನ್ನ.

ಇದನ್ನು ಕೇಳಿ ನನಗೆ ಶಾಕ್ ಆಯಿತು. "ನೋಡಿ, ಜನ ಹೇಗೆ ತಮ್ಮ ಆರೋಗ್ಯವನ್ನು ನಿರ್ಲಕ್ಷಿಸುತ್ತಾರೆ. ಹೀಗೆ ಮಾಡಿಯೇ ಬಿ.ವಿ. ಕಾರಂತರೂ ಕೊನೆಯುಸಿರೆಳೆದರು. ಅದರಲ್ಲೂ 40 ದಾಟದ ಮೇಲೆ ಪ್ರಾಸ್ಟೇಟ್ ಮತ್ತು ಯೂಟರೆಸ್ ಕ್ಯಾನ್ಸರ್ ಬಗ್ಗೆ ಪುರುಷರು ಮತ್ತು ಮಹಿಳೆಯರು ಎಚ್ಚರದಿಂದಿರಬೇಕು. ಆ ಕ್ಯಾನ್ಸರ್‌ಗಳು ಬೇಗನೆ ಪತ್ತೆಯಾದರೆ ಚಿಕಿತ್ಸೆ ಸುಲಭ. ನನ್ನ ಅಪ್ಪ ಕೂಡ ರೆಗ್ಯೂಲರ್ ಆಗಿ ಪ್ರಾಸ್ಟೇಟ್ ಚೆಕ್ ಮಾಡಿಸಿಕೊಳ್ಳುತ್ತಿದ್ದರು" ಅಂದೆ.

ನಿಜವಾಗಲೂ, 40 ದಾಟಿರುವ ಪುರುಷರು ಮತ್ತು ಮಹಿಳೆಯರು ವರ್ಷಕ್ಕೊಮ್ಮೆ ಸಂಪೂರ್ಣ ದೇಹವನ್ನು ಚೆಕ್ ಅಪ್ ಮಾಡಿಸಿಕೊಳ್ಳಬೇಕು. ಹಾಗೆ ಮಾಡಿದಾಗ, ಪ್ರಾಸ್ಟೇಟ್, ಯೂಟರೆಸ್ ಮತ್ತು ಸ್ತನಗಳ ಕ್ಯಾನ್ಸರ್‌ನಂತಹವು ಆರಂಭದ ಹಂತದಲ್ಲೇ ಪತ್ತೆಯಾಗಿ, ಸೂಕ್ತ ಚಿಕಿತ್ಸೆಯನ್ನು ಪಡೆಯಬಹುದು.

ಪ್ರಸನ್ನರವರೊಂದಿಗೆ ಮಾತನಾಡಿದ ದಿನವೇ ಪ್ರಭಾಕರ್‌ರವರಿಗೆ ಫೋನ್ ಮಾಡಿದೆ. "ಹೇಗಿದ್ದೀರಿ?" ಎಂದು ಕೇಳಿದ್ದಕ್ಕೆ, ಅವರು "Why beat around the bush? I have cancer. ಎಲ್ಲವನ್ನೂ ಎದುರಿಸಬೇಕಷ್ಟೇ" ಅಂದರು. ಅವರೊಂದಿಗೆ ಸ್ವಲ್ಪ ಹೊತ್ತು ಮಾತಾಡಿ ನಿಟ್ಟುಸಿರಿನೊಂದಿಗೆ ಫೋನ್ ಇಟ್ಟೆ.

ಕರ್ನಾಟಕದಿಂದ, ಕನ್ನಡಿಗರಿಂದ ಎಲ್ಲೋ ದೂರದಲ್ಲಿರುವ ಈ ಅಪ್ರತಿಮ ಕನ್ನಡಿಗನಿಗೆ ಬದುಕು ಎಸೆದಿರುವ ಸವಾಲನ್ನು ಮೀರಿ ನಿಲ್ಲುವ ಶಕ್ತಿ ಸಿಗಲಿ ಎಂದು ಆಶಿಸುತ್ತೇನೆ....

-ಗೌರಿ

ನಿಮ್ಮ ಬಗ್ಗೆ ಹೇಳಿಕೊಳ್ಳದಿರಿ. ಸ್ನೇಹಿತರಿಗೆ ಅದು ಅವಶ್ಯವಿಲ್ಲ ಮತ್ತು ನಿಮ್ಮ ವೈರಿಗಳು ಅದನ್ನು ನಂಬುವುದಿಲ್ಲ -ಬಿ. ಹೊವೆಲ್

ವಜ್ರಮುನಿಯ ವಿಲನ್ ಸಹೋದರನ ವೃತ್ತಾಂತ



ರಂಗಭೂಮಿಯ ಪ್ರಚಂಡ ರಾವಣನಾಗಿ, ಚಲನ ಚಿತ್ರಗಳ ಖಾಯಂ ವಿಲನ್ ಆಗಿದ್ದ ನಟ ವಜ್ರಮುನಿ, ನಿಜ ಜೀವನದಲ್ಲೆಂದೂ ಖಳನಾಗಿರಲಿಲ್ಲ. ಆದರೆ ಅದೇನು ಗ್ರಹಚಾರವೋ, ಅವರ ಸ್ವಂತ ತಮ್ಮ ಚಂದ್ರಶೇಖರ್ ಅಲಿಯಾಸ್ ಚಂದ್ರು ರಾವಣನ ಅಪರಾವತಾರವಾಗಿ ಅಂಜನಾಪುರದ ಜನರಿಗೆ ಅಮರಿಕೊಂಡಿದ್ದಾನೆ. ಅಂಜನಾಪುರ ಗ್ರಾಮ ಪಂಚಾಯ್ತಿ ಅಧ್ಯಕ್ಷನೂ ಆಗಿರುವ ಚಂದ್ರುವಿನ ಭೂದಾಹಕ್ಕೆ ಇಲ್ಲಿನ ಸ್ಮಶಾನ, ಗೋಮಾಳ ಎಲ್ಲವೂ ಬಲಿಯಾಗಿ ಊರೇ ಎರಡಾಗಿ ಒಡೆದುಹೋಗಿದೆ.

ಅಂಜನಾಪುರ ಮತ್ತು ಗೊಲ್ಲಳ್ಳಿ ರಸ್ತೆಯ ಅಕ್ಕಪಕ್ಕದಲ್ಲಿ ಬರುವ ಗ್ರಾಮಗಳು ಕಳೆದ ವರ್ಷ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಒಳಪಟ್ಟು, ಬಿಡಿಎ ಲೇಔಟ್ ನಿರ್ಮಾಣವಾದ ನಂತರ ಭೂಮಿಯ ಬೆಲೆ ಗಗನಕ್ಕೇರಿತು. ಈ ಗೊಲ್ಲಳ್ಳಿಯ ಸರ್ವೆ ನಂಬರ್ 1ರಲ್ಲಿ 26 ಗುಂಟೆ ಜಮೀನನ್ನು ಪರಿಶಿಷ್ಟರ ಸ್ಮಶಾನಕ್ಕೆಂದು ಮೀಸಲಿಡಲಾಗಿತ್ತು, ಯಾವಾಗ ಇಲ್ಲಿಯ ಭೂಮಿಯ ಬೆಲೆ ಏರಿತೋ ಮುಖ್ಯರಸ್ತೆಯ ಪಕ್ಕದಲ್ಲೇ ಇರುವ ಈ ಜಾಗವನ್ನು ಮುಸ್ಲಿಮರಿಗೆ ಎಂದು ಪ್ರಕಟಿಸಿದ ಚಂದ್ರು ಆ ಜಾಗಕ್ಕೆ ಕಾಂಪೌಂಡ್ ಹಾಕಿಸಿಬಿಟ್ಟ. ಆಗ



ಭೂಗಳ್ಳರಿಂದ ಜಮೀನು ಒತ್ತುವರಿಯ ಭರಾಟೆ

ಪರಿಶಿಷ್ಟರಿಗೆ ಸ್ಮಶಾನವಿಲ್ಲದಂತಾಯಿತು.

ಸದ್ಯಕ್ಕೆ ಪರಿಶಿಷ್ಟರನ್ನು ಸಮಾಧಾನಪಡಿಸಿದ ಚಂದ್ರು, ಅಂಜನಾಪುರದ ಸರ್ವೆ ನಂಬರ್ 56ರಲ್ಲಿರುವ ಗುಂಡು ತೋಪಿನ 8 ಗುಂಟೆ ಜಾಗವನ್ನು ಪರಿಶಿಷ್ಟರ ಸ್ಮಶಾನ ಎಂದು ಬಿಟ್ಟುಕೊಟ್ಟ. ಈಗಾಗಲೇ ಇಲ್ಲಿ ಮೂರ್‍ನಾಲ್ಕು ಶವಸಂಸ್ಕಾರ ಸಹ ನಡೆದಿದೆ. ಆದರೆ ಕಳೆದ 26ರಂದು ಇದ್ದಕ್ಕಿದ್ದಂತೆ ಅಲ್ಲಿಗೆ ಬಂದ ಕೆಲವು ಮುಸ್ಲಿಮರು, ಈ ಜಾಗವನ್ನು ಸಹ ಅಧ್ಯಕ್ಷ ಚಂದ್ರು ನಮಗೆ ಬಿಟ್ಟುಕೊಟ್ಟಿದ್ದಾರೆಂದು ಹೇಳಿ ಸಮಾಧಿಗಳನ್ನು ಒಡೆದು ಹಾಕಿದ್ದಾರೆ. ಆದರೆ ಗ್ರಾಮಸ್ಥರು ಮಧ್ಯ ಪ್ರವೇಶಿಸಿ ಅವರನ್ನು ತಡೆದು ಈ ವಿಷಯವನ್ನು ಅಧ್ಯಕ್ಷ ಚಂದ್ರಶೇಖರ್ ಎದುರೇ ಇತ್ಯರ್ಥ ಮಾಡೋಣ ಎಂದು ಹೇಳಿದ್ದಾರೆ.

ಸುಮಾರು 300 ಮುಸ್ಲಿಂ ಕುಟುಂಬವಿರುವ ಅಂಜನಾಪುರದಲ್ಲಿ ಈವರೆಗೆ ಕೋಮುಘರ್ಷಣೆ ಆಗಿಲ್ಲ, ಆದರೆ ಈಗ ಅಧ್ಯಕ್ಷ ಚಂದ್ರಶೇಖರ್ ಕಿತಾಪತಿಯಿಂದ ಅಂತಹ ಒಂದು ವಾತಾವರಣ ನಿರ್ಮಾಣವಾಗಿದೆ. ಈ ಸಂಬಂಧ ಅಕ್ಟೋಬರ್ 28ರಂದು ನ್ಯಾಯಪಂಚಾಯ್ತಿ ಇಟ್ಟು, ಎರಡೂ ಕೋಮಿನ ಮುಖಂಡರು ಸೇರಿದ್ದರೂ ಅಧ್ಯಕ್ಷ ಚಂದ್ರಶೇಖರ್ ಬರಲಿಲ್ಲ, ಆತನನ್ನು ಕರೆದುಕೊಂಡು ಬರೋಣ ಎಂದು ಗ್ರಾಮದ ಕೆಲವು ಯುವಕರು ಹೋದರೆ ಅವರಿಗೆ ಚಂದ್ರಶೇಖರ್ ಹೊಡೆಯಲು ಹೋಗಿ ಬೆದರಿಕೆ ಹಾಕಿದ್ದಾನೆ.

ಇಲ್ಲಿನ ಅಸಲಿ ವಿಚಾರ ಮತ್ತು ಚಂದ್ರಶೇಖರನ ಸಂಚು ಎಂದರೆ ಈ ಹಿಂದೆ ಪರಿಶಿಷ್ಟರ ಸ್ಮಶಾನಕ್ಕೆಂದು ಮೀಸಲಾಗಿದ್ದ ಗೊಲ್ಲಳ್ಳಿ ಸರ್ವೆ ನಂಬರ್ 1ರಲ್ಲಿರುವ 26 ಗುಂಟೆ ಜಮೀನನ್ನು ನುಂಗುವುದು. ಈ ಜಮೀನಿಗೆ ಈಗಾಗಲೇ 20 ಲಕ್ಷ ರೂಪಾಯಿ ಮುಂಗಡ ಹಣ



ಸರ್ವೆ ನಂ. 56 ರಲ್ಲಿನ 2 ಎಕರೆ 6 ಗುಂಟೆ ಜಮೀನು

ಕೂಡ ಚಂದ್ರುವಿನ ಕೈ ಸೇರಿದೆ ಎಂಬ ಸುದ್ದಿ ಹಬ್ಬಿದೆ. ಈ ಕಾರಣದಿಂದಲೇ ಪರಿಶಿಷ್ಟರಿಗಿದ್ದ ಜಮೀನನ್ನು ಮೊದಲು ಮುಸ್ಲಿಮರಿಗೆ ಕೊಟ್ಟು ಆ ನಂತರ ಅಲ್ಲಿಂದಲೂ ಮುಸ್ಲಿಮರನ್ನು ಎಬ್ಬಿಸಿ ಅವರಿಗೆ ಅಂಜನಾಪುರದ ಸರ್ವೆ ನಂಬರ್ 56ರ ಗುಂಡು ತೋಪಿನ ಜಾಗವನ್ನು ನೀಡುತ್ತೇನೆ ಎಂದಿದ್ದಾನೆ.

ಈ ಜಾಗದಲ್ಲಿ ಮೊದಲು ಎಲ್ಲಾ ಜಾತಿಯವರು ಶವಸಂಸ್ಕಾರ ಮಾಡುತ್ತಿದ್ದರು. ಈಗ ಅದನ್ನು ಮುಸ್ಲಿಮರಿಗೆ ನೀಡುವುದರಿಂದ ಬೇರೆ ಜಾತಿಯವರು ಅಲ್ಲಿ ಶವಸಂಸ್ಕಾರ ನಡೆಸುವಂತಿಲ್ಲ ಮತ್ತು ಅವರಿಗೆ ಬೇರೆ ಯಾವ ಜಾಗವೂ ಇಲ್ಲದಂತಹ ಪರಿಸ್ಥಿತಿ ಆಗಿದೆ. ಆದರೆ ಚಂದ್ರುವಿನ ಒಳಸಂಚು ಅರಿಯದ ಮುಸ್ಲಿಮರು ಮತ್ತು ಹಿಂದುಗಳು ಪರಸ್ಪರ ಜಿದ್ದಿಗೆ ಬಿದ್ದಿದ್ದಾರೆ. ಹೀಗೆ ಜಾಗ ನುಂಗುವುದು ಚಂದ್ರುವಿಗೇನು ಹೊಸದಲ್ಲ, ಈ ಹಿಂದೆ ಕೂಡ ಸ್ಕೂಲು ಕಟ್ಟಿಸುತ್ತೇನೆ ಎಂಬ ನೆಪ ಹೇಳಿ ಗೊಲ್ಲಳ್ಳಿ ಸರ್ವೆ ನಂಬರ್ 54ರಲ್ಲಿರುವ 1 ಎಕರೆ ಪ್ರದೇಶದಲ್ಲಿ ಮರಕಡಿಸಲು ಹೊರಟಿದ್ದಾಗ ಜನರೇ ತಡೆದು ನಿಲ್ಲಿಸಿದ್ದರು.



ಮೋರಿ ಬಾಬು

ಅಂಜನಾಪುರದಲ್ಲಿ ಬಿಡಿಎ ಲೇಔಟ್ ಆಗುತ್ತದೆಂದು ಮೊದಲೇ ತಿಳಿದಿದ್ದ ಚಂದ್ರು, ಸರ್ವೆ ನಂಬರ್ 49ರಲ್ಲಿ ಪರಿಶಿಷ್ಟ ರೈತರಿಗೆ ಸೇರಿದ್ದ 2 ಎಕರೆ ಜಮೀನನ್ನು ಅತಿ ಕಡಿಮೆ ಬೆಲೆಗೆ ಕೊಂಡು ಬಡಾವಣೆ ನಿರ್ಮಿಸಿ ಕೋಟ್ಯಂತರ ರೂಪಾಯಿ ಜೇಬಿಗಿಳಿಸಿದ್ದ. ಪಿಳ್ಳಗಾನಹಳ್ಳಿ ಸರ್ವೆ ನಂಬರ್ 1ರಲ್ಲಿದ್ದ 208 ಗೋಮಾಳದ ಜಮೀನು ಕಬಳಿಸಿ, ಸೈಟುಗಳನ್ನು ಮಾಡಿ ತಲಾ ಒಂದೂವರೆ ಲಕ್ಷಕ್ಕೆ ಮಾರಿದ್ದಾನೆ. ಅಲ್ಲಿ ಒಟ್ಟು ಈಗ ನಾಲ್ಕು ಸಾವಿರ ಮನೆಗಳೆದ್ದಿವೆ.


ಆರಂಭದಲ್ಲಿ ಚಂದ್ರಪ್ಪ ಹೀಗಿರಲಿಲ್ಲ, ಹಿಂದೆ ಅಂಜನಾಪುರದಲ್ಲಿ ಅಧ್ಯಕ್ಷ ಮುನಿಬೈರಪ್ಪನದೇ ಅಟ್ಟಹಾಸ. ದಲಿತರು, ಮುಸ್ಲಿಮರು ಮತ್ತು ಬಡವರ ಮೇಲೆ ಅತಿಯಾದ ದಬ್ಬಾಳಿಕೆ ನಡೆಯುತ್ತಿತ್ತು, ಅಂತಹ ಸಮಯದಲ್ಲಿ ಗ್ರಾಮಸ್ಥರೇ ಚಂದ್ರಶೇಖರನನ್ನು ಅಂಜನಾಪುರಕ್ಕೆ ತಂದರು. ಅಂಜನಾಪುರದಲ್ಲಿ ವಜ್ರಮುನಿಯವರ ತೋಟವಿತ್ತಾದರೂ ವಜ್ರಮುನಿ, ಚಂದ್ರಶೇಖರ ಮತ್ತು ಅವರ ಕುಟುಂಬದವರು ಜಯನಗರದ ಕನಕನಪಾಳ್ಯದಲ್ಲೇ ವಾಸವಿದ್ದರು. ಆದರೂ ಗ್ರಾಮಸ್ಥರು ಚಂದ್ರಶೇಖರನನ್ನು ಅಂಜನಾಪುರ ಪಂಚಾಯ್ತಿ ಅವಿರೋಧವಾಗಿ ಆಯ್ಕೆ ಮಾಡಿ ಅಧ್ಯಕ್ಷನಾಗಿಯೂ ಕೂರಿ ದರು.

ಮೊದಲೆಲ್ಲ ಚಂದ್ರು ಜನಪರವಾಗಿಯೇ ಇದ್ದ. ಇ ಕುಡಿಯುವ ನೀರಿನ ಅತಿ ದೊಡ್ಡ ಸಮಸ್ಯೆ ಬಗೆಹರಿದ ಚಂದ್ರುವಿನ ಶ್ರಮದಿಂದಲೇ ಎಂದು ಈಗಲೂ ಜನ ನೆನೆಯುತ್ತಾರೆ. ಆದರೆ ಅಧಿಕಾರದ ರುಚಿ, ಜಮೀ ವ್ಯಾಪಾರಗಳಲ್ಲಿ ದುಡ್ಡು ನೋಡಲಾರಂಭಿಸಿದ ಚಂದ ಅಧ್ಯಕ್ಷನಾಗಿ ಒಂದೇ ವರ್ಷಕ್ಕೆ ಬದಲಾಗಿ ಬಿ ಇವನ ಸುತ್ತಲೂ ತಾಲ್ಲೂಕು ಪಂಚಾಯ್ತಿ ಸದ ಮೋರಿಬಾಬು, ಚಿಡ್ಡಿ ಸೀನ, ಮಹಮದ್ ಮ ಶಾಕಿರ್‌ನಂತಹ ನೆಲಗಳ್ಳರ ಗುಂಪೇ ಸೇರಿ ಇದರೊಂದಿಗೆ ಅಲ್ಪಸ್ವಲ್ಪ ಕುಡಿದು ಸಭ್ಯತೆಯಿ ಇರುತ್ತಿದ್ದ ಚಂದ್ರುಗೆ ಭಯಂಕರ ಕುಡಿತದ ಚ ಆರಂಭವಾಯ್ತು. ಕುಡಿದ ಮೇಲೆ ಚಂದ್ರು ತಾನು ಪಂಚಾಯ್ತಿ ಅಧ್ಯಕ್ಷ ಎಂಬು ಮರೆತುಹೋಗುತ್ತದೇನೋ. ನೈಟ್ ಹಾಲ್ಟಾಗು ಬಿಟಿಎಸ್ ಬಸ್ಸುಗಳನ್ನು ಹುಚ್ಚಾಪಟ್ಟೆ ಓಡಿಸುವು ರಾತ್ರಿ ರಸ್ತೆಯಲ್ಲಿ ನಡೆದು ಹೋಗುತ್ತಿರುವವರ ವಿನಾಕಾರಣ ಕರೆದು ಹೊಡೆಯುವುದು ಚಂದ್ರು ಮತ್ತು ಗ್ಯಾಂಗಿನ ಕೆಲಸವಾಗಿದೆ. ಈಗ ನೋಡಿದರೆ ಸ್ಮಶಾ ನುಂಗುವ ದುರುದ್ದೇಶದಿಂದ ಎರಡು ಜನಾಂಗಗಳ ನಡು ಬೆಂಕಿ ಇಟ್ಟಿದ್ದಾನೆ. ಅಮಾಯಕ ಜನರು ಇವನ ಹುನಾ ವನ್ನು ತಿಳಿಯದೇ ಬೇಸ್ತು ಬಿದ್ದಿದ್ದಾರೆ.

ಇನ್ನಾದರೂ ಅಧ್ಯಕ್ಷ ಚಂದ್ರಶೇಖರ್ ಈ ಸಮಸ್ಯೆಯ ಪರಿಹರಿಸಿ ಎರಡೂ ಜನಾಂಗದವರ ನಡುವೆ ಇರು ವಿಶ್ವಾಸವನ್ನು ಕಾಪಾಡಲಿ.

-ವರದಿಗಾ

ಪದ್ಮನಾಭನಗರ-ಲ್ಯಾಂಡ್ ಗ್ರ್ಯಾಬರ್ ಶ್ರೀನಿವಾಸ್



ಬೆಂಗಳೂರು ಭಾರಿ ವೇಗವಾಗಿ ಬೆಳೆಯುತ್ತಿರುವ ನಗರ, ಹಾಗಿದ್ದ ಮೇಲೆ ಈ ಬೆಂಗಳೂರು ನಗರದ ಪುರಪ್ರಮುಖರೂ ಅಷ್ಟೇ ವೇಗವಾಗಿ ಬೆಳೆಯಬೇಕು ತಾನೆ.

ಇದು ಪದ್ಮನಾಭನಗರದ ಕಾರ್ಪೊರೇಟರ್ ಎಲ್. ಶ್ರೀನಿವಾಸ್ ಅಲಿಯಾಸ್ ಲ್ಯಾಂಡ್ ಗ್ರ್ಯಾಬರ್ ಶ್ರೀನಿವಾಸನ ಥಿಯರಿ. ಆದರೆ ಬೆಂಗಳೂರು ಎಷ್ಟು ಬೆಳೆಯಿತೊ, ಬಿಟ್ಟಿತೊ ಈ ಶ್ರೀನಿವಾಸ ಮಾತ್ರ ರಾಕೆಟ್ ವೇಗದಲ್ಲಿ ಅಡ್ಡಾದಿಡ್ಡಿ ಬೆಳೆದು ಬಿಟ್ಟಿದ್ದಾನೆ. ಎಷ್ಟರಮಟ್ಟಿಗೆಂದರೆ 1995 ವರೆಗೂ ಸೈಕಲ್ ಮೇಲೆ ಹಾಲು ಮಾರಿಕೊಂಡು ತಿರುಗುತ್ತಿದ್ದ ಶ್ರೀನಿವಾಸ್ ಇವತ್ತು 30 ಕೋಟಿಗೆ ತೂಗುತ್ತಾನೆ. ಇವನಿಗೆ ಬರುತ್ತಿರುವ ತಿಂಗಳ ಬಾಡಿಗೆಯೇ 12 ಲಕ್ಷದಷ್ಟಿದೆ. ಅಷ್ಟೇ ಅಲ್ಲ ಒಂದು ಕಾಲದಲ್ಲಿ ಪಾಪರ್ ಚೀಟಿಗಳಾಗಿದ್ದ ಇವನ ಚೇಲಾಗಳಾದ ಶಾಸ್ತ್ರೀನಗರದ ಹಾಲ್‌ರಾಮ, ಪಾರ್ಕ್ ಸೂರಿ, ಯಲಚೇನಹಳ್ಳಿ ಬಾಲಕೃಷ್ಣ ಮುಂತಾದವರು ಇವತ್ತು ಕೋಟಿಗಳ ಲೆಕ್ಕದಲ್ಲಿ ಮಾತಾಡುವ ಹಂತ ತಲುಪಿದ್ದಾರೆ. ಮುಂದಿನ ಕಾರ್ಪೊರೇಷನ್ ಎಲೆಕ್ಷನ್ ಅನೌನ್ಸ್ ಆದ ತಕ್ಷಣ ಅಭ್ಯರ್ಥಿಗಳಾಗಿ ಜನಸೇವೆ ಮಾಡಲು ಕಾದು ಕುಳಿತಿದ್ದಾರೆ.

ಅಂದಹಾಗೆ ಈ ಹಡಬೆಗಳೆಲ್ಲರೂ ಅಗ್ರಗಣ್ಯ ದೇಶಭಕ್ತರಾದ ಬಿಜೆಪಿಯ ಬೆಂಗಳೂರು ಲೀಡರ್‌ಗಳೇ. ಜೊತೆಗೆ ಹೆಲ್ತ್ ಮಿನಿಸ್ಟರ್ ಅಶೋಕ್‌ರ ಚೇಲಾಗಳು. ಭೂಗಳ್ಳತನವೇ ಇವರ ನಿತ್ಯಕಾಯಕ.

ಕಬಡ್ಡಿ ಬಾಬುಗೇ ಕಬಡ್ಡಿ ಆಡಿಸಿದ್ದ

ಇತ್ತೀಚೆಗೆ ಪದ್ಮನಾಭನಗರ ವಾರ್ಡಿನ ಜನರೇ ಎಲ್. ಶ್ರೀನಿವಾಸ್ ವಿರುದ್ಧ ಭಾರಿ ಪ್ರತಿಭಟನೆ ನಡೆಸಿದರು. 2001ರಲ್ಲಿ ಕಾರ್ಪೊರೇಷನ್ ಎಲೆಕ್ಷನ್ ಗೆದ್ದ ಮೇಲೆ ಸಿಕ್ಕಸಿಕ್ಕ ಸರ್ಕಾರಿ ಜಾಗವನ್ನೆಲ್ಲಾ ನುಂಗುವ ತನ್ನ ಮೂಲವೃತ್ತಿ ಬಿಟ್ಟರೆ ಎಲ್ಲಾ ಕೆಲಸವನ್ನೂ ಮರೆತುಬಿಟ್ಟಿದ್ದ ಶ್ರೀನಿವಾಸ. ಅಸಲಿಗೆ ಇವನು ರಾಜಕೀಯಕ್ಕೆ ಬಂದಿದ್ದೇ ಭೂಕಬಳಿಕೆ ದಂಧೆಯಲ್ಲಿದ್ದ, ಇನ್ನೊಬ್ಬ ತರಲೆ ಕಬಡ್ಡಿ ಬಾಬು ಜೊತೆಗಿನ ಜಗಳದಲ್ಲಿ. ಚೆನ್ನಮ್ಮ ಎಂಬುವರು ಕಟ್ಟಿಸಿದ್ದ ಅತೀ ಪುರಾತನ ಕೆರೆಯೊಂದು ಪದ್ಮನಾಭನಗರ ವಾರ್ಡಿನ ಚಿಕ್ಕಲಸಂದ್ರದಲ್ಲಿತ್ತು, ಆ ಜಾಗದ ಮೇಲೆ ಭೂಗಳ್ಳರಾದ ಕಬಡ್ಡಿ ಬಾಬು ಮತ್ತು ಎಲ್. ಶ್ರೀನಿವಾಸ್ ಇಬ್ಬರಿಗೂ ಕಣ್ಣಿತ್ತು. ಅಷ್ಟರಲ್ಲಾಗಲೇ ಬೆಂಗಳೂರು ಈ ಕೆರೆ ಏರಿಯಾವನ್ನು ದಾಟಿ ಬೆಳೆದಿತ್ತು, ಕೆರೆ ನೀರಿಲ್ಲದೆ ಒಣಗುತ್ತಿತ್ತು. ಕೋಟಿಗಟ್ಟಲೆ ಬೆಲೆ ಬಾಳುವ ಆ ಸರ್ಕಾರಿ ಜಾಗ ಲಪಟಾಯಿಸಲು ಈ ಇಬ್ಬರೂ ನೆಲಗಳ್ಳರು ಅಖಾಡಕ್ಕಿಳಿದರು. ಆ ಜಗಳದ ಕಾರಣಕ್ಕೇನೇ 2001 ರ ನವೆಂಬರ್‌ನಲ್ಲಿ ನಡೆದ ಪಾಲಿಕೆ ಎಲೆಕ್ಷನ್‌ನಲ್ಲಿ ಕಬಡ್ಡಿ ಬಾಬು ಅಲಿಯಾಸ್ ಪ್ರಸಾದ್ ಬಾಬು ಜೆಡಿಎಸ್‌ನಿಂದ ನಿಂತರೆ ಎಲ್. ಶ್ರೀನಿವಾಸ್, ಅಶೋಕ್‌ರನ್ನು ಹಿಡಿದುಕೊಂಡು ಬಿಜೆಪಿ ಟಿಕೆಟ್ ಗಿಟ್ಟಿಸಿಬಿಟ್ಟ. ಇನ್ನೇನು ಎಲೆಕ್ಷನ್ ಜಿದ್ದಾಜಿದ್ದಿ ಶುರುವಾಯಿತೆನ್ನುವಷ್ಟರಲ್ಲಿ ಈ ಶ್ರೀನಿವಾಸ ಒಂದು ಕಿಲಾಡಿ ಕೆಲಸ ಮಾಡಿಬಿಟ್ಟ. ಪ್ರಸಾದ್ ಬಾಬು ಎನ್ನುವ ಇನ್ನೊಬ್ಬ ಯಾವನನ್ನೋ ಎಳೆತಂದು ನಾಮಪತ್ರ ಹಾಕಿಸಿ ನಂತರ ಸೀದಾ ಆನೇಕಲ್‌ಗೆ ಸಾಗಿಸಿ ಬಚ್ಚಿಟ್ಟುಬಿಟ್ಟಿದ್ದ. ಭೂಗಳ್ಳ ಪ್ರಸಾದ್ ಬಾಬು ಡಮ್ಮಿ ಕ್ಯಾಂಡಿಡೇಟ್ ಪ್ರಸಾದ್ ಬಾಬುಗೆ ಇಬ್ಬರ ಮಧ್ಯೆ ಜನ ಕನ್‌ಫ್ಯೂಸ್ ಮಾಡಿಕೊಂಡು ಇಬ್ಬರೂ ಪ್ರಸಾದ್ ಬಾಬುಗಳ ಮಧ್ಯೆ ಓಟು ಹಂಚಿಹೋಯಿತು. ಇವರಿಬ್ಬರ ಮಧ್ಯೆ ತೂರಿ ಶ್ರೀನಿವಾಸ್ ಗೆದ್ದು ಕಾರ್ಪೊರೇಟರ್ ಆಗಿಬಿಟ್ಟಿದ್ದ. ಕಬಡ್ಡಿ ಬಾಬುಗೆ ಆಗ ಬರೀ ದುಡ್ಡು ತೋಳ್ಬಲ ಮಾತ್ರ ಇತ್ತು, ತಲೆ ಇರಲಿಲ್ಲ, ಸೋತ. ಶ್ರೀನಿವಾಸನಿಗೆ ಅವೆರಡೂ ಇರದಿದ್ದರೂ ಐನಾತಿ ಬುದ್ಧಿ ಮಾತ್ರ ಇತ್ತು, ಗೆದ್ದ.


ಅವತ್ತು ಹೀಗೆ ಎಲೆಕ್ಷನ್ ಗೆದ್ದಿದ್ದ ಎಲ್. ಶ್ರೀನಿವಾಸ ಚಿಕ್ಕಲಸಂದ್ರ ಕೆರೆಗೆ ನುಗ್ಗಿದವನೇ ಜಾಗ ಒತ್ತುವರಿ ಮಾಡಿಸಿ ಸುಮಾರು ಸೈಟ್ ಮಾಡಿ ಎಂಟುನೂರು ಜನರಿಗೆ ಸಿಕ್ಕ ರೇಟಿಗೆ ಮಾರಿಕೊಂಡ. ಕೋಮರ್ಲ ಫ್ರೆಂಡ್ಸ್ ಏರಿಯಾ ಅಬ್ಬಾಯಿನಾಯ್ಡು ಸ್ಟುಡಿಯೋ ಸುತ್ತಮುತ್ತ ವಿವಾದವಿದ್ದ ಜಾಗಗಳಿಗೆಲ್ಲಾ ಕೈಹಾಕಿದ. ಸಾರ್ವಭೌಮನಗರ ಏರಿಯಾದ ಸರ್ಕಾರಿ ಜಾಗಕ್ಕೆಲ್ಲಾ ಬೇಲಿ ಹಾಕಿಸಿ ಮನೆ, ಕಾಂಪ್ಲೆಕ್ಸ್ ಎಬ್ಬಿಸಿ ತಿಂಗಳಿಗೆ ಒಟ್ಟು 12 ಲಕ್ಷ ಬಾಡಿಗೆ ಬರುವಂತೆ ಮಾಡಿಕೊಂಡಿದ್ದಾನೆ. ಇವನ ಐದು ವರ್ಷಗಳ ಸಾಧನೆ ಎಂದರೆ ಇವೆ. ಬೆಂಗಳೂರಿನ ಹಾಲಿ ಮತ್ತು ಮಾಜಿ ಕಾರ್ಪೊರೇಟರುಗಳ ಪೈಕಿ ಅತೀ ಕಳಪೆ ಕೆಲಸಗಾರ, ನಾಲಾಯಕ್ ಎಂದರೆ ಈ ಎಲ್. ಶ್ರೀನಿವಾಸನೆ.


ವಾರ್ಡಿನ ಜನ ಇವತ್ತು ಮರೆತು ಕೂಡ ಎಲ್. ಶ್ರೀನಿವಾಸ್ ಅನ್ನದೇ ಲ್ಯಾಂಡ್ ಗ್ರ್ಯಾಬರ್ ಶ್ರೀನಿವಾಸ್ ಎನ್ನುವಷ್ಟರ ಮಟ್ಟಿಗೆ ಇವನ ಕುಖ್ಯಾತಿ ಬೆಳೆದಿದೆ. ಜೊತೆಗೆ ಇವನ ಸುತ್ತಲೂ ಇರುವ ತಿಮಿಂಗಿಲಗಳಿಗೂ ಅಧಿಕಾರ ಬೇಕೆಂಬ ಆಸೆ ಚಿಗುರಿಕೊಂಡಿದೆ.

ಎಮ್ಮೆತಮ್ಮಣ್ಣ ಹಾಲ್‌ರಾಮ

ಶ್ರೀನಿವಾಸ ಕಾರ್ಪೊರೆಟರ್ ಆದೇಟಿಗೆ ಚುರುಕಾದವನೇ ಶಾಸ್ತ್ರಿನಗರದ ಈ ಹಾಲ್ ರ್‍ಆಮ.

ಡೈರಿ ಹಾಲಿನ ಬೂತ್ ಇಟ್ಟುಕೊಂಡಿರುವ ಹಾಲ್ ರಾಮ ಸ್ವತಃ ಎಮ್ಮೆತಮ್ಮಣ್ಣನಂತಿದ್ದಾನೆ. ಇವನಿಗೆ ಮೊದಲಿನಿಂದಲೂ ವಿಧಾನಸೌಧದಲ್ಲಿ ಕೆಲಸಕ್ಕಿದ್ದ ರಾಮಕೃಷ್ಣ ಮತ್ತು ಹೊಟ್ಟೆ ಎಂಬುವರೇ ಫೈನಾನ್ಶಿಯರ್‌ಗಳು. ಸೈಕಲು, ಹಾಲಿನ ಕ್ಯಾನು ಎರಡನ್ನು ಬಿಸಾಡಿ ಲ್ಯಾಂಡ್ ಡೀಲು, ಟ್ರಾನ್ಸ್‌ಫರ್, ಬಡ್ಡಿ ದಂಧೆ ಎಲ್ಲಾ ಶುರು ಮಾಡಿಕೊಂಡ ಹಾಲ್ ರಾಮ ಈಗ ಬಡ್ಡಿಗೆ ಬಿಟ್ಟಿರುವ ದುಡ್ಡೇ ಏಳು ಕೋಟಿಯಷ್ಟಿದೆ.





ಹಾಲ್ ರಾಮ ಮತ್ತು ಬಾಲಕೃಷ್ಣ

ಇವನ ಪ್ರತಿಭೆ ನೋಡಿ ಅಪ್ರತಿಭರಾಗಿರುವ ಸಚಿವ ಅಶೋಕ್ ಮುಂದಿನ ಪಾಲಿಕೆ ಎಲೆಕ್ಷನ್‌ಗೆ ಬಿಜೆಪಿ ಟಿಕೆಟ್ ಕೊಡಿಸುವ ಲೆಕ್ಕ ಹಾಕಿದ್ದಾರೆ.

ಯಲಚೇನಳ್ಳಿ ಬಕಾಸುರ ಬಾಲ

ಇವನು ಅಶೋಕ್ ಹಾಗೂ ಶ್ರೀನಿವಾಸ್ ಪಟಾಲಂನ ಇನ್ನೋರ್ವ ಸಮಾಜ ಸೇವಕ. ಯಲಚೇನಹಳ್ಳಿಯ ಮೀಸೆ ಮುನಿಶಾಮಪ್ಪನ ಮೂವರು ಪುತ್ರರಲ್ಲಿ ಒಬ್ಬನಾದ ಬಾಲ ಮಹಾನ್ ಮಹಿಳಾ ಉದ್ಧಾರಕ. ಜೊತೆಗೆ ಬನಶ ಏರಿಯಾದ ರೌಡಿ ಎಲಿಮೆಂಟುಗಳಾದ ಸಂಜೀ ಶಿವಕಾಳಿಯನ್ನು ಬೆಳೆಸಿದ ಪುಣ್ಯಾತ್ಮನೂ ಇವನೆ. ಅದ್ಯಾವ ಲೆಕ್ಕಾಚಾರ ಹಾಕಿಯೋ ಏನೋ ಈ ಬಾ ಸಂಜೀವನನ್ನು ಪೊಲೀಸರಿಗೆ ಹೇಳಿ ಗೂಂಡಾ ಕಾಯ್ದೆ ಒಳಗಾಕಿಸಿದ್ದಾನೆ.

ಇವನಿಗೂ ಈಗ ಕಾರ್ಪೊರೇಟರ್ ಆಗುವ

ಪಾರ್ಕ್ ಸೂರಿ ರೌಡಿ....

ಶ್ರೀನಿವಾಸನಗರದ ಹಾಲಿ ಕೌನ್ಸಿ ವೆಂಕಟೇಶ್ ಮೂರ್ತಿಯ ತಮ್ಮ ಪಾ ಸೂರಿ ಸದ್ಯಕ್ಕೆ ಪೊಲೀಸ್ ವರ್ಗಾವರ್ಗಿ ಬ್ಯುಸಿಯಾಗಿದ್ದಾನೆ. ಇತ್ತೀಚೆಗೆ ಬನಶ ಸರ್ಕಲ್ ಇನ್ಸ್‌ಪೆಕ್ಟರ್ ಶಿವಶಂ ಯಾವುದೋ ಲೇಡೀಸ್ ಕ್ಲಬ್ ಮೇಲೆ ರ ಮಾಡಿ ಇಸ್ಪೀಟ್ ಆಡುತ್ತಿದ್ದ ಘ ಮಣಿಗಳ ಮೇಲೆ ಕ್ರಮ ಕೈಗೊಳ್ಳು ಕೆನ್ನೆಗೆ ಏಟುಬಿದ್ದ ಸದ್ದು ಕೇಳಿಸಿದೆ. ಯಾರು ಯಾರಿಗೆ ಹೊಡೆದಿದ್ದೆಂಬು ಗೊತ್ತಾಗಲಿಲ್ಲ, ಆದರೆ ಶಿವಶಂಕರ್‌ಗೆ ವ ವರ್ಗಾ ಆದೇಶ ಬಂತು. 6 ಲಕ್ಷ ಕೊ ಬನಶಂಕರಿ ಠಾಣೆಗೆ ಬಂದಿದ್ದ ಶಿವಶ ಹಾಕಿದ ಬಂಡವಾಳವೂ ಹೋಗು ಎಂದು ಗಾಬರಿಯಾಗಿ ಈ ಪಾರ್ಕ್ ಸ ಇನ್ನೂ ಐವತ್ತು ಸಾವಿರ ಕೊಟ್ಟು ವ ಕ್ಯಾನ್ಸಲ್ ಮಾಡಿಸಿಕೊಂಡಿದ್ದಾರೆ. ಈ ಕೆಲಸ ಮಾಡಿಕೆ ಪಾರ್ಕ್ ಸೂರಿ ಲಿಂಕುಗಳು ಸಚಿವ ಅಶೋಕ್ ಇವೆ. ಈ ಸೂರಿಯ ದೇಶಭಕ್ತಿ ಗಮನಿಸಿ ಇವ ಈಗ ಬಿಜೆಪಿಯ ಬೆಂಗಳೂರು ನಗರ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ.

ಈ ಖದೀಮರೆಲ್ಲಾ ತೋಳೇರಿಸಿಕೊಂಡು ಎಲೆಕ್ಷ ನಿಲ್ಲಲಿದ್ದಾರೆ... ಹುಷಾರ್....

-ಪ

ಸ್ನೇಹಿತನೆಂದರೆ ಯಾರು? ಯಾರೊಂದಿಗೆ ನೀವು ನೀವಾಗಿಯೇ ಇರಲು ಧೈರ್ಯ ಮಾಡುತ್ತಿರೊ, ಅವರೇ ಸ್ನೇಹಿತರು-ಫ್ರಾಂಕ್ ಕ್ರೇನ್



ಗೌಡರ ಗೌಡನಾ

ಚಲನಚಿತ್ರ ನಟ ರೆಬಲ್ ಸ್ಟಾರ್ ಅಂಬರೀಷ್‌ರವರನ್ನು ಕೇಂದ್ರ ಸಚಿವ ಸಂಪುಟಕ್ಕೆ ಸೇರಿಸಿದ್ದಂತೂ ಆಯಿತು. ಈಗ ಅಂಬರೀಷ್‌ರವರನ್ನು ರಾಜ್ಯದ ಏಕೈಕ ಬಲಿಷ್ಠ ಒಕ್ಕಲಿಗ ಮುಖಂಡ ಎಂದು ಬಿಂಬಿಸಿ ಅವರನ್ನು ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಸಾಂಭವ್ಯ ಮುಖ್ಯಮಂತ್ರಿ ಎಂದು ಘೋಷಿಸುವ ಯತ್ನ ನಡೆಯುತ್ತಿದೆಯೇ? ಕೇಂದ್ರ ಸಚಿವರಾಗಿ ಅಧಿಕಾರ ವಹಿಸಿಕೊಂಡ ನಂತರ ನವೆಂಬರ್ ಆರರಂದು ಪ್ರಥಮ ಬಾರಿಗೆ ಬೆಂಗಳೂರಿಗೆ ಆಗಮಿಸುತ್ತಿರುವ ಅಂಬರೀಷ್‌ರವರನ್ನು ಸ್ವಾಗತಿಸಲು ನಡೆಯುತ್ತಿರುವ ಸಿದ್ಧತೆಯನ್ನು ನೋಡಿದರೆ ಇದು ನಿಜವೆನಿಸುತ್ತದೆ. ಆ ದಿಕ್ಕಿನಲ್ಲಿ ಕಾಂಗ್ರೆಸ್ ಒಳಗಿನ ಅಂಬಿಪರ ಶಕ್ತಿಗಳು ಕೆಲಸ ಮಾಡುತ್ತಿರುವುದಂತೂ ನಿಜ.

ಮಂಡ್ಯ ಜಿಲ್ಲೆಯ ನಾಗಮಂಗಲ ಕ್ಷೇತ್ರದ ಮಾಜಿ ಶಾಸಕ ಎಲ್.ಆರ್. ಶಿವರಾಮೇಗೌಡರ ನೇತೃತ್ವದಲ್ಲಿ ದಿಢೀರನೆ ತಲೆ ಎತ್ತಿರುವ 'ಕಾಂಗ್ರೆಸ್ ಒಕ್ಕಲಿಗರ ವೇದಿಕೆ' ಈ ಅಂಬರೀಷ್ ಸ್ವಾಗತ ಕಾರ್ಯಕ್ರಮ ಸಂಘಟಿಸಿದೆ. ಅಂದು ಬೆಳಿಗ್ಗೆ 11 ಕ್ಕೆ ಆಗಮಿಸಲಿರುವ ಅಂಬರೀಷ್‌ರವರನ್ನು ವಿಮಾನ ನಿಲ್ದಾಣದಿಂದಲೇ ಮೆರವಣಿಗೆಯಲ್ಲಿ ಕರೆತಂದು, ಅರಮನೆ ಮೈದಾನದಲ್ಲಿ ಅದ್ದೂರಿ ಸಭೆ ನಡೆಸುವುದು ಈ ಒಕ್ಕಲಿಗ ವೇದಿಕೆಯ ಉದ್ದೇಶ. ಸಮಾರಂಭದಲ್ಲಿ ಅಂಬರೀಷರ ಆಪ್ತ ಸ್ನೇಹಿತ ಡಾ. ವಿಷ್ಣುವರ್ಧನ್, ಬಾಲಗಂಗಾಧರನಾಥ ಸ್ವಾಮಿ, ಮಲ್ಲಿಕಾರ್ಜುನ ಖರ್ಗೆ ಮತ್ತು ಕೇಂದ್ರ ಸಚಿವ ಎಂ.ವಿ. ರಾಜಶೇಖರನ್ ಭಾಗವಹಿಸುತ್ತಾರೆ. ಈ ಕಾರ್ಯಕ್ರಮಕ್ಕೆ ಸುಮಾರು 3 ಲಕ್ಷಕ್ಕೂ ಅಧಿಕ ಜನ ಸೇರುತ್ತಾರೆಂಬುದು ಸಂಘಟಕರ ನಂಬಿಕೆ.

ಕರ್ನಾಟಕ ರಾಜ್ಯದ ಪ್ರಸ್ತುತ ಕಾಂಗ್ರೆಸ್ ಪಕ್ಷದ ಸ್ಥಿತಿಯನ್ನು ಗಮನಿಸಿದರೆ ಒಕ್ಕಲಿಗರ ನಾಯಕತ್ವದ ಕೊರತೆ ಎದ್ದು ಕಾಣುತ್ತದೆ. ಕಾಂಗ್ರೆಸ್ಸಿನ ಎಚ್.ಸಿ. ಶ್ರೀಕಂಠಯ್ಯ ಮುದಿ ಹುಲಿಯಂತಾಗಿದ್ದಾರೆ, ಹಾಸನದ ಪುಟ್ಟಸ್ವಾಮಿಗೌಡ ಸ್ವರ್ಗಸ್ಥರಾಗಿದ್ದಾರೆ, ಕನಕಪುರದ ಚಂದ್ರಶೇಖರ ಮೂರ್ತಿಯವರೂ ಬದುಕುಳಿದಿಲ್ಲ, ಮಂಡ್ಯದ ಜಿ. ಮಾದೇಗೌಡರು ಸಹ ಆಸಕ್ತಿ ಕಳೆದುಕೊಂಡಿದ್ದಾರೆ, ಚಿಕ್ಕಮಗಳೂರಿನ ತಾರಾದೇವಿ, ಕೋಲಾರದ ಮುನಿಯಪ್ಪ ಮತ್ತು ಬಿ.ಎಲ್. ಶಂಕರ್‌ರಂತಹವರನ್ನು ಒಕ್ಕಲಿಗರೇ ತಮ್ಮ ನಾಯಕರೆಂದು ಒಪ್ಪುವುದಿಲ್ಲ, ಇನ್ನು ಮಹಾರಾಷ್ಟ್ರದ ರಾಜ್ಯಪಾಲ ಎಸ್.ಎಂ. ಕೃಷ್ಣ ರಾಜ್ಯ ರಾಜಕಾರಣಕ್ಕೆ ಸಕ್ರಿಯವಾಗಿ ಪ್ರವೇಶಿಸುವ ಮಾತು ಅಂಬರೀಷ್ ಕೇಂದ್ರ ಸಂಪುಟಕ್ಕೆ ಸೇರ್ಪಡೆಯೊಂದಿಗೆ ನೆನೆಗುದಿಗೆ ಬಿದ್ದಂತಾಗಿದೆ.


ಇನ್ನು ಮಾಜಿ ಸಚಿವ ಡಿ.ಕೆ. ಶಿವಕುಮಾರರನ್ನು ಒಕ್ಕಲಿಗರ ಸಮಸ್ತ ನಾಯಕ ಎಂದು ಒಪ್ಪಲು ಯಾರೂ ಸಿದ್ಧರಿಲ್ಲ, ಅದರೊಂದಿಗೆ ಅಂಬರೀಷ್, ಕೇಂದ್ರ ಸಂಪುಟ ಸೇರಿದರೆ ತಮ್ಮ ಅಸ್ತಿತ್ವಕ್ಕೆ ಎಲ್ಲಿ ಧಕ್ಕೆ ಉಂಟಾಗುತ್ತದೋ ಎಂದು ಹೆದರಿದ್ದ ಎಸ್.ಎಂ. ಕೃಷ್ಣ ಪರವಾಗಿ, ಅಂಬರೀಷ್ ವಿರುದ್ಧವಾಗಿ ಒಳಗೊಳಗೇ ಲಾಬಿ ನಡೆಸಿದವರಲ್ಲಿ ಡಿ.ಕೆ.ಶಿ. ಪ್ರಮುಖರು. ಅಂಬರೀಷ್‌ಗೆ ಸಚಿವ ಸ್ಥಾನ ಕೊಡಲೇಬೇಕು ಎಂದು ಪಟ್ಟು ಹಿಡಿದು ಕೂತವರು ಕೇಂದ್ರ ಭೂಸಾರಿಗೆ ಸಚಿವ ಕೆ.ಎಚ್. ಮುನಿಯಪ್ಪ.

ಒಕ್ಕಲಿಗ ಜನಾಂಗದ ನಾಯಕತ್ವದಲ್ಲಿ ಇಂಥ ನಿರ್ವಾತ ಮೂಡಿರುವ ಸಂದರ್ಭದಲ್ಲಿ, ಅಂಬರೀಷ್‌ರವರನ್ನು ಕೇಂದ್ರ ಸಂಪುಟಕ್ಕೆ ಸೇರಿಸಿಕೊಳ್ಳುವ ಮೂಲಕ ಕಾಂಗ್ರೆಸ್ ಹೈಕಮಾಂಡ್ ಸೂಕ್ತ ನಿರ್ಧಾರ ಕೈಗೊಂಡಿದೆ. ಒಕ್ಕಲಿಗ ಸಮುದಾಯದ ಮಟ್ಟಿಗೆ ಅಂಬರೀಷ್ ನಾಯಕತ್ವವನ್ನು ಬಹಿರಂಗವಾಗಿ ವಿರೋಧಿಸುವವರ್‍ಯಾರೂ ಇಲ್ಲ, ಅದರೊಂದಿಗೆ ಈವರೆಗೆ ಅಂಬರೀಷ್ ಯಾವ ಬಣದಲ್ಲೂ ಗುರುತಿಸಿಕೊಂಡಿಲ್ಲ, ಜಾತ್ಯತೀತ ಜನತಾದಳದಲ್ಲೂ ಪಳಗಿ ಬಂದಿರುವ ಅಂಬರೀಷ್‌ಗೆ ಎಲ್ಲ ಪಕ್ಷಗಳಲ್ಲೂ ಸ್ನೇಹಿತರಿರುವುದೇ ಅವರಿಗೆ ಅನುಕೂಲ. ಅಂಬರೀಷ್ ಅಜಾತಶತ್ರುವೆಂಬುದು ಅವರ ಹೆಗ್ಗಳಿಕೆ.

ಆದರೆ ಕಾಂಗ್ರೆಸ್ ಹೈಕಮಾಂಡ್ ಅಂಬರೀಷ್ ಬಗ್ಗೆ ಇದಿಷ್ಟೇ ಅಂಶಗಳನ್ನು ಪರಿಗಣಿಸಿ ಸಂಪುಟಕ್ಕೆ ಸೇರಿಸಿಕೊಳ್ಳುವ ತೀರ್ಮಾನ ಕೈಗೊಂಡಿಲ್ಲ, ಪಿ.ವಿ. ನರಸಿಂಹರಾವ್ ಸಂಪುಟದಲ್ಲಿ ಎಂ.ವಿ. ಚಂದ್ರಶೇಖರ್‌ಮೂರ್ತಿಯ ನಂತರ ಕೇಂದ್ರದಲ್ಲಿ ಬೇರ್‍ಯಾವ ಒಕ್ಕಲಿಗರಿಗೂ ಪ್ರಾತಿನಿಧ್ಯ ದೊರೆತಿಲ್ಲ, 1999 ರಲ್ಲಿ ಅಂಬರೀಷ್ ಮಂಡ್ಯ ಲೋಕಸಭಾ ಕ್ಷೇತ್ರದಿಂದ ಆರಿಸಿ ಬಂದಾಗಲೇ ಅವರಿಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ನೀಡಬೇಕೆಂಬ ಒತ್ತಡ ಬಂದಿತ್ತು. 2004 ರಲ್ಲಿ ಅಂಬರೀಷ್ ಮೂರನೆ ಬಾರಿ ಆಯ್ಕೆಯಾದ ನಂತರ ಅಂಬರೀಷ್ ಪರ ಒತ್ತಡ ಹೆಚ್ಚಿತು.

ಎಂ.ಎಸ್. ಸತೀಶ್

ಕಾಂಗ್ರೆಸ್ ಪಕ್ಷದಲ್ಲಿ ಕೂಡ ಎಸ್.ಎಂ. ಕೃಷ್ಣ ರಾಜ್ಯ ರಾಜಕಾರಣದಿಂದ ನಿರ್ಗಮಿಸಿದ ನಂತರ ಒಕ್ಕಲಿಗರನ್ನು ಕಡೆಗಣಿಸಲಾಗಿದೆ ಎಂಬ ಕೂಗು ಎದ್ದಿತ್ತು. ಈ ಬೆಳವಣಿಗೆಯಿಂದ ಬೇಸತ್ತಿದ್ದ ಅಂಬರೀಷ್ ತಮ್ಮ ಲೋಕಸಭಾ ಸದಸ್ಯತ್ವಕ್ಕೆ ರಾಜೀನಾಮೆ ಸಹ ನೀಡಿದ್ದರು.



ಈ ಮಧ್ಯೆ ಕಾಂಗ್ರೆಸ್ ಮತ್ತು ಜೆಡಿಎಸ್ ಮೈತ್ರಿ ಮುರಿದು ಬಿದ್ದು ಎಚ್.ಡಿ. ಕುಮಾರಸ್ವಾಮಿ ನೇತೃತ್ವದಲ್ಲಿ ಜೆಡಿಎಸ್-ಬಿಜೆಪಿ ಮೈತ್ರಿಕೂಟದ ಸರ್ಕಾರ ರಚನೆಯಾದ ನಂತರ, ರಾಜ್ಯದಲ್ಲಿ ಬಲಿಷ್ಠ ಒಕ್ಕಲಿಗ ಮುಖಂಡನೊಬ್ಬನ ಅನಿವಾರ್ಯತೆ ಪಕ್ಷದ ಹೈಕಮಾಂಡ್‌ಗೆ ಎದ್ದು ಕಾಣಲಾರಂಭಿಸಿತು. ಒಂದೆಡೆ ಮಾಜಿ ಪ್ರಧಾನಿ ದೇವೇಗೌಡ, ಇನ್ನೊಂದೆಡೆ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ, ಮತ್ತೊಂದೆಡೆ ಸಚಿವ ಎಚ್.ಡಿ. ರೇವಣ್ಣ ನಡೆಸುತ್ತಿದ್ದ ಆಕ್ರಮಣಕಾರಿ ರಾಜಕೀಯವನ್ನು ನಿಯಂತ್ರಣದಲ್ಲಿಡಲು ಮತ್ತು ಹಳೆ ಮೈಸೂರು ಪ್ರಾಂತ್ಯದಲ್ಲಿ ಒಕ್ಕಲಿಗರ ಮತ ಬ್ಯಾಂಕನ್ನು ಹಿಡಿತದಲ್ಲಿಟ್ಟುಕೊಳ್ಳಲು ಅಂಬರೀಷ್‌ರಂತಹ ವರ್ಚಸ್ಸು, ಗಡಸುತನ ಮತ್ತು ಅಭಿಮಾನಿ ವೃಂದ ಹೊಂದಿರುವವರ ಅವಶ್ಯಕತೆ ಕಾಂಗ್ರೆಸ್ ಪಕ್ಷಕ್ಕಿತ್ತು.

ಹಾಗೆಂದ ಮಾತ್ರಕ್ಕೆ ಪಕ್ಷದ ಹುದ್ದೆ ಅಥವಾ ಸಚಿವಗಿರಿಗಾಗಿ ಎಂದೂ ಅಂಬರೀಷ್ ದೆಹಲಿಯಲ್ಲಿ ಬೀಡು ಬಿಟ್ಟು ಲಾಬಿ ನಡೆಸಲಿಲ್ಲ, "ಪಕ್ಷಕ್ಕೆ ನನ್ನ ಉಪಯೋಗ ಇದೆ ಅಂದ್ರೆ ಕೊಡ್ತಾರೆ ಬಿಡ್ರಪ್ಪ, ನಾನ್ಯಾಕೆ ಹೋಗಿ ಕೇಳ್ಲಿ" ಎಂಬ ನಿರ್ಲಕ್ಷತನದಲ್ಲೇ ಇದ್ದರು. ಮಾತು ಹೀಗಾಡಿದರೂ, ಮೂರು ಬಾರಿ ಸತತವಾಗಿ ಆರಿಸಿ ಬಂದ ಅವರನ್ನು ಪಕ್ಷ ನಿರ್ಲಕ್ಷಿಸಿರುವ ಅಸಮಾಧಾನ ಅವರಲ್ಲಿ ಎದ್ದು ಕಾಣುತ್ತಿತ್ತು, ಕಳೆದ ಜಿಲ್ಲಾ ಮತ್ತು ತಾಲ್ಲೂಕ್‌ನ ಪಂಚಾಯ್ತಿ ಚುನಾವಣೆ ಸಂದರ್ಭದಲ್ಲಿ ಅಂಬರೀಷ್ ಕಾಂಗ್ರೆಸ್ ಅಭ್ಯರ್ಥಿಗಳ ಪ್ರಚಾರ ಮಾಡಿದರು ಎಂಬುದಕ್ಕಿಂತ ಪ್ರವಾಸ ಮಾಡಿದರು ಎಂಬುದೇ ಸೂಕ್ತ, ಜಿಲ್ಲೆಯಲ್ಲೇ ನಡೆದ ಪಕ್ಷದ ಎಷ್ಟೋ ಕಾರ್ಯಕ್ರಮಗಳಿಗೆ ಅವರು ಗೈರುಹಾಜರಾಗುತ್ತಿದ್ದರು.

ಅಂಬರೀಷರ ಈ ಅಸಮಾಧಾನವನ್ನು ಹತ್ತಿರದಿಂದಲೇ ಗಮನಿಸುತ್ತಿದ್ದ ಜಾತ್ಯತೀತ ಜನತಾದಳದ ವರಿಷ್ಠ ಎಚ್.ಡಿ. ದೇವೇಗೌಡ ಅಂಡ್ ಸನ್ಸ್ ಮೆಲ್ಲಗೆ ಅಂಬರೀಷರನ್ನು ಮತ್ತೆ ಜೆಡಿಎಸ್‌ಗೆ ಸೆಳೆಯಲು ತಂತ್ರ ರೂಪಿಸಿದ್ದರಂತೆ. ಈ ತಂತ್ರದಲ್ಲಿ ಅಂಬರೀಷ್ ಮೇಲಿನ ಅಭಿಮಾನಕ್ಕಿಂತ ಹೆಚ್ಚಾಗಿ ಅವರ ಜನಪ್ರಿಯತೆ, ಜಾತಿ ಲಾಭ ಮತ್ತು ಮಂಡ್ಯ ಜಿಲ್ಲೆಯಲ್ಲಿ ಕಾಂಗ್ರೆಸ್ಸನ್ನು ಸಂಪೂರ್ಣವಾಗಿ ಮುಗಿಸುವ ಒಳಸಂಚೇ ಮುಖ್ಯವಾಗಿತ್ತು, ಎಲ್ಲಕ್ಕಿಂತ ಹೆಚ್ಚಾಗಿ ಮೈಸೂರಿನ ಚಾಮುಂಡೇಶ್ವರಿ ಉಪಚುನಾವಣೆಯಲ್ಲಿ ಸಿದ್ಧರಾಮಯ್ಯ ವಿರುದ್ಧ ಒಕ್ಕಲಿಗರ ಮತಗಳನ್ನು ಅಂಬರೀಷ್ ಮೂಲಕ ಹೇಗೆ ಸೆಳೆಯಬಹುದೆಂಬ ಲೆಕ್ಕಾಚಾರದಲ್ಲಿ ಅಪ್ಪ-ಮಕ್ಕಳು ಇದ್ದರು. ಆದರೆ ಈ ವಾಸನೆ ರಾಜ್ಯದ ಕಾಂಗ್ರೆಸ್ ಮುಖಂಡರ ಮೂಗಿಗೆ ಬಡಿದು, ಅವರು ದೆಹಲಿಗೆ ದೌಡಾಯಿಸಿ, ಅಂಬರೀಷ್‌ಗೆ ಈ ಬಾರಿಯೂ ಸಚಿವ ಸ್ಥಾನ ನೀಡದಿದ್ದರೆ ಅನಾಹುತವಾಗುತ್ತದೆ, ದೇವೇಗೌಡರು ಮತ್ತವರ ಮಕ್ಕಳು ಕಾಂಗ್ರೆಸನ್ನು ಹೊಸಕಿ ಹಾಕಿಬಿಡುತ್ತಾರೆಂದು ಬಾಯಿ ಬಡಿದುಕೊಂಡರು.

ಇದು ನಿಜ ಕೂಡ. ಇವತ್ತು ಹಳೆ ಮೈಸೂರು ಪ್ರಾಂತ್ಯವೇಕೆ ರಾಜ್ಯಾದ್ಯಂತ ಅಂಬರೀಷ್‌ಗೆ ಅಭಿಮಾನಿಗಳಿದ್ದಾರೆ. ಇನ್ನೂರಕ್ಕೂ ಹೆಚ್ಚು ಚಲನಚಿತ್ರಗಳಲ್ಲಿ ನಟಿಸಿರುವ ಅಂಬರೀಷ್‌ರ ಕುಟುಂಬ ಸಹ ಹಳೆ ಮೈಸೂರು ಪ್ರಾಂತ್ಯದಲ್ಲಿ ಗೌರವ, ಆದರ ಪಡೆದಿದೆ. ಅಂಬರೀಷ್, ದಿವಂಗತ ಪಿಟೀಲು ಚೌಡಯ್ಯನವರ ಮೊಮ್ಮಗ, ತಮ್ಮ ನೇರ ಮಾತು, ಒರಟುತನ, ಕೊಡುಗೈ ಗುಣ, ಸ್ನೇಹಪರತೆಯಿಂದ ಅಪ್ಪಟ ಒಕ್ಕಲಿಗರಾಗಿರುವ ಅಂಬರೀಷ್ ಈ ಭಾಗದಲ್ಲಿ ಧರ್ಮಸಿಂಗ್ ಮತ್ತು ಖರ್ಗೆಗಿಂತ ಜನಪ್ರಿಯ ಮತ್ತು ಬಲಿಷ್ಠ. ಹೀಗಾಗಿ ಅಂಬರೀಷ್ ಕಾಂಗ್ರೆಸ್ಸಿಗೆ ಇಲ್ಲಿ ಒಂದು ಆಸ್ತಿಯೇ ಸರಿ.


ಈ ಲೆಕ್ಕಾಚಾರಗಳನ್ನೆಲ್ಲಾ ಅಳೆದು-ಸುರಿದೇ ಕಾಂಗ್ರೆಸ್ ಹೈಕಮಾಂಡ್ ಅಂಬರೀಷರನ್ನು ಸಂಪುಟಕ್ಕೆ ಸೇರಿಸಿಕೊಂಡಿದೆ. ಅವರ ಮೂಲಕ ಎಚ್.ಡಿ. ದೇವೇಗೌಡ ಅಂಡ್ ಕಂಪೆನಿಯನ್ನು ಸದೆಬಡಿಯುವುದು ಮತ್ತು ಒಕ್ಕಲಿಗ ಪ್ರಾಬಲ್ಯವಿರುವ ಕ್ಷೇತ್ರಗಳನ್ನು ಹಿಡಿತಕ್ಕೆ ತೆಗೆದುಕೊಳ್ಳುವ ಜವಾಬ್ದಾರಿಯನ್ನು ಅಂಬರೀಷ್ ಹೆಗಲಿಗೆ ಹೊರೆಸಲಾಗಿದೆ. ಅಂಬರೀಷ್‌ಗೆ ಈ ಕಾರ್ಯಕ್ಕೆ ಬೇಕಾದ ಜನಬಲ, ಧೈರ್ಯ, ಛಾತಿ ಎಲ್ಲವೂ ಇದೆ. ಅವರ ಬೆಂಬಲಿಗರು ಬಿಂಬಿಸುತ್ತಿರುವ ಹಾಗೆ ಅಂಬರೀಷ್ ಮುಂದಿನ ಮುಖ್ಯಮಂತ್ರಿಯೂ ಆಗಬಹುದು. ಆದರೆ ಕಾಂಗ್ರೆಸ್ ಪಕ್ಷದಲ್ಲೇ ಇರುವ 'ಕಪ್ಪೆ'ಗಳು ಅಂಬರೀಷ್‌ಗೆ ಅವಕಾಶ ನೀಡುವರೆ?

ಅಂಬರೀಷ್‌ರನ್ನು ಆರಂಭದಿಂದಲೂ ಪರೋಕ್ಷವಾಗಿ ವಿರೋಧಿಸುತ್ತಾ ಬಂದಿರುವ ಹಾಲಿ ಮಹಾರಾಷ್ಟ್ರ ರಾಜ್ಯಪಾಲ ಎಸ್.ಎಂ. ಕೃಷ್ಣ ಅಂಬರೀಷ್ ಕೇಂದ್ರ ಸಂಪುಟ ಸೇರ್ಪಡೆಯಿಂದ ಚಿಂತಾಕ್ರಾಂತರಾಗಿರುವುದು ಸಹಜ. ಅದೇ ರೀತಿ ಒಕ್ಕಲಿಗರ ಏಕೈಕ ನಾಯಕ ನಾನೇ ಎಂದು ಪೋಸು ಕೊಡುತ್ತಿದ್ದ ಡಿ.ಕೆ. ಶಿವಕುಮಾರ್ ಸಹ ಅಸಮಾಧಾನಗೊಂಡಿದ್ದಾರೆ. "ದೇವೇಗೌಡರನ್ನು ಮಟ್ಟ ಹಾಕಲು ನಾನೊಬ್ಬನೇ ಸಾಕು" ಎಂದು ಬಹಿರಂಗವಾಗಿ ಹೇಳುತ್ತಿದ್ದ ಡಿಕೆಶಿಗೆ ಈಗ ದಂಡನಾಯಕನ ಪಟ್ಟವನ್ನು ಅಂಬರೀಷ್‌ಗೆ ಕೊಟ್ಟಿರುವುದು ಇರುಸು-ಮುರುಸಾಗಿದೆ.

ನೇರ ನುಡಿ, ಒರಟುತನ, ಹುಂಬತನದಲ್ಲಿ ಮುಗ್ಧ ಹಳ್ಳಿಗನಂತಿರುವ ಅಂಬರೀಷ್‌ಗೆ ರಾಜಕೀಯದ ಒಳ ಹುಟ್ಟುಗಳು, ಒಳಗುಟ್ಟುಗಳು, ಬೆನ್ನಿಗೆ ಚೂರಿ ಹಾಕುವ ತಂತ್ರಗಳ ಅನುಭವವಿಲ್ಲ, ಇದನ್ನೇ ತಮ್ಮ ಅನುಕೂಲಕ್ಕೆ ಬಳಸಿಕೊಳ್ಳುವ ಹಳೆ ಹುಲಿಗಳು ಇದೀಗ ತಾನೆ ಒಂದನೆ ಮೆಟ್ಟಿಲಿಗೆ ಬಂದು ಕೂತಿರುವ ಅಂಬರೀಷ್ ರಾಜಕೀಯ ಜೀವನಕ್ಕೆ ತೊಡರಾಗಬಹುದೇ?

ಅಂಬಿ ಏಳೋದೆ 12 ಕ್ಕೆ ಅಂದ್ಲಂತೆ ಸೋನಿಯಾ!

I know your Ambarish's daily routine. He wakes up at 12 noon. How can he function as a Minister? (ನಿಮ್ಮ ಅಂಬರೀಷ್ ದಿನಚರಿ ನನಗೆ ಗೊತ್ತು, ಅವರು ಏಳುವುದೇ ಮಧ್ಯಾಹ್ನ 12 ಗಂಟೆಗೆ. ಸಚಿವರಾಗಿ ಅವರು ಹೇಗೆ ಕೆಲಸ ಮಾಡುತ್ತಾರೆ?)



ಅಂಬರೀಷ್‌ರವರಿಗೆ ಸಚಿವ ಸ್ಥಾನ ಕೊಡಲೇಬೇಕು ಎಂದು ಪಟ್ಟು ಹಿಡಿದು ಕೂತಿದ್ದ ಕೇಂದ್ರ ಭೂ ಸಾರಿಗೆ ಸಚಿವ ಕೆ.ಎಚ್. ಮುನಿಯಪ್ಪನವರಿಗೆ ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಕೇಳಿದ ಪ್ರಶ್ನೆ ಇದು.

ಇದರೊಂದಿಗೆ 14ನೇ ಲೋಕಸಭೆ ಅಧಿವೇಶನಕ್ಕೆ ಅತಿಕಡಿಮೆ ದಿನ ಹಾಜರಾದ ಐವರು ಸದಸ್ಯರ ಪಟ್ಟಿಯಲ್ಲಿ ಅಂಬರೀಷ್ ಸಹ ಸೇರುತ್ತಾರೆ. ಹಾಲಿ 190 ದಿನ ನಡೆದಿರುವ ಅಧಿವೇಶನದಲ್ಲಿ ಅವರು ಸಚಿವರಾಗುವ ಮುನ್ನ ಹಾಜರಾಗಿದ್ದು ಕೇವಲ 47 ದಿನ. ಇಪ್ಪತ್ತೆರಡು ದಿನ ನಡೆದ ಮಳೆಗಾಲದ ಅಧಿವೇಶನದಲ್ಲಿ ಅಂಬರೀಷ್ ಭಾಗವಹಿಸಿದ್ದು 2 ದಿನ.



ಲಾಳನಕೆರೆ ಗೋಸುಂಬೆ ಬಣ್ಣ ಬದಲಿಸಲಿದೆ?

ಅಂಬರೀಷರನ್ನೂ ಅದ್ದೂರಿಯಾಗಿ ಸ್ವಾಗತಿಸಲು ಸಜ್ಜಾಗಿರುವ ಗೋಸುಂಬೆ ಲಾಳನಕೆರೆ ಶಿವರಾಮೇಗೌಡ, ಅಂಬರೀಷ್‌ಗೇ ನಾಮ ತೀಡಲು ಸಿದ್ಧನಾಗಿದ್ದಾನಾ? ಈ ಸ್ವಾಗತ ಮತ್ತು ಸಂಭ್ರಮದ ಸಮಾರಂಭ ತನ್ನ ಶಕ್ತಿ ಮತ್ತು ಸಂಘಟನೆ ಪ್ರದರ್ಶನಕ್ಕೆ ಶಿವರಾಮ ರೂಪಿಸುವ ಸಂಚಾ?


ಜಾತ್ಯತೀತ ಜನತಾದಳದಲ್ಲಿ ಇತ್ತೀಚೆಗೆ ನಡೆದಿರುವ ಬೆಳವಣಿಗೆ ಮತ್ತು ದೇವೇಗೌಡ ಅಂಡ್ ಸನ್ಸ್ ರೂಪಿಸಿರುವ ವ್ಯೂಹವನ್ನು ಗಮನಿಸಿದರೆ, ಯಾವುದೇ ಕ್ಷಣದಲ್ಲಿ ಶಿವರಾಮ ಜೆಡಿಎಸ್‌ಗೆ ನೆಗೆಯಬಹುದೆಂಬ ಅನುಮಾನ ಮೂಡುತ್ತಿದೆ.

ಕಳೆದ ಕೆಲವು ತಿಂಗಳಿಂದ ಸಾರಿಗೆ ಸಚಿವ ಚಲುವರಾಯಸ್ವಾಮಿ ಮತ್ತು ಮುಖ್ಯಮಂತ್ರಿ ಕುಮಾರಸ್ವಾಮಿ ನಡುವಿನ ಭಿನ್ನಾಭಿಪ್ರಾಯ ಮತ್ತು ಮುಸುಕಿನ ಗುದ್ದಾಟ ಈಗ ಬಹಿರಂಗವಾಗಿದೆ.

ಸಚಿವ ಸಂಪುಟ ವಿಸ್ತರಣೆ ಮತ್ತು ನಿಗಮ ಮಂಡಲಿ ಅಧ್ಯಕ್ಷರ ನೇಮಕಾತಿ ಶೀಘ್ರವಾಗಿ ನಡೆಯಬೇಕೆಂದು ಸಚಿವ ಚಲುವರಾಯಸ್ವಾಮಿ ಒಕ್ಕಲಿಗ ಶಾಸಕರ ಪ್ರತ್ಯೇಕ ಸಭೆ ನಡೆಸಿದ್ದು, ಕುಮಾರಸ್ವಾಮಿಗೆ ಅಸಮಾಧಾನವಾಗಿದೆ. ಅದೇ ರೀತಿ ಹಣಬಲ ಮತ್ತು ರಾಜಕೀಯವಾಗಿ ಮತ್ತೊಬ್ಬ ಒಕ್ಕಲಿಗ ಮುಖಂಡ ಬೆಳೆಯುವುದು ಗೌಡರ ಕುಟುಂಬಕ್ಕೆ ಬೇಕಿಲ್ಲ.

ಎಲ್ಲಕ್ಕಿಂತ ಹೆಚ್ಚಾಗಿ ಚಲುವರಾಯಸ್ವಾಮಿ ಪ್ರತಿನಿಧಿಸುತ್ತಿರುವ ನಾಗಮಂಗಲ ವಿಧಾನಸಭಾ ಕ್ಷೇತ್ರದಲ್ಲಿ ಸಾಕಷ್ಟು ಕುರುಬ ಮತದಾರರ ಸಂಖ್ಯೆ ಇದೆ. ಸಿದ್ಧರಾಮಯ್ಯನವರನ್ನು ಜೆಡಿಎಸ್‌ನಿಂದ ಉಚ್ಚಾಟಿಸಬಾರದೆಂದು ಚಲುವರಾಯಸ್ವಾಮಿ ಗೌಡರ ಹತ್ತಿರ ಗೋಗರೆದಿದ್ದು ಈ ಕಾರಣಕ್ಕೆ. ಸಿದ್ಧರಾಮಯ್ಯನ ಉಚ್ಚಾಟನೆಯಿಂದ ನನ್ನ ಕ್ಷೇತ್ರದ ಕುರುಬ ಜನಾಂಗದವರು ಎಲ್ಲಿ ತಿರುಗಿಬೀಳುತ್ತಾರೋ ಎಂಬ ಆತಂಕ ಚಲುವರಾಯಸ್ವಾಮಿಗಿತ್ತು, ಚಲುವರಾಯಸ್ವಾಮಿಯ ಸಿದ್ಧರಾಮಯ್ಯ ಪರ ಒಲವನ್ನು ಇನ್ನು ನೆನಪಲ್ಲಿಟ್ಟುಕೊಂಡಿರುವ ಗೌಡ ಅಂಡ್ ಸನ್ಸ್ "ಎಂದಿದ್ದರೂ ಸಿದ್ಧರಾಮಯ್ಯನ ಹಿಂದೆ ಹೋಗುವ ಇವನು ಇನ್ನೂ ಬೆಳೆಯಲು ಬಿಡಬಾರದು" ಎಂಬ ನಿರ್ಧಾರಕ್ಕೆ ಬಂದಿದ್ದಾರಂತೆ. ಇಂದೋ, ನಾಳೆಯೋ ಎಂದು ನೇತಾಡುತ್ತಿರುವ ಸಂಪುಟ ವಿಸ್ತರಣೆಯಲ್ಲಿ ಚಲುವರಾಯಸ್ವಾಮಿ ಕೈಬಿಡುವುದಕ್ಕೆ ನಿರ್ಧರಿಸಲಾಗಿದೆಯಂತೆ.

ಆದರೆ ಮಂಡ್ಯ ಜಿಲ್ಲೆಯಲ್ಲಿ ಚಲುವರಾಯಸ್ವಾಮಿಯನ್ನು ಬಿಟ್ಟರೆ ಅವರಿಗೊಬ್ಬ ಪರ್ಯಾಯ ನಾಯಕ ಬೇಕಲ್ಲ? ಆಗ ಕಣ್ಣಿಗೆ ಬಿದ್ದವನೇ ಲಾಳನಕೆರೆ ಶಿವರಾಮೇಗೌಡ. ಶಿವರಾಮೇಗೌಡರ ಇತ್ತೀಚಿನ ರಾಜಕೀಯ ಪರಿಸ್ಥಿತಿ ನಿಜಕ್ಕೂ ಚಿಂತಾಜನಕವಾಗಿದೆ. ಅಪ್ಪಿತಪ್ಪಿ ಏನಾದರೂ ಸದ್ಯದಲ್ಲೇ ವಿಧಾನಸಭಾ ಚುನಾವಣೆ ನಡೆದರೆ ಶಿವರಾಮನ ಹತ್ತಿರ ಖರ್ಚಿಗೂ ಕಾಸಿಲ್ಲ ಎಂದು ಇಡೀ ಕ್ಷೇತ್ರದ ಚಿಳ್ಳೆಪಿಳ್ಳೆಗಳಿಗೆಲ್ಲಾ ಗೊತ್ತು. ಮಂಡ್ಯ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷಗಿರಿಯೂ ಹೋಗಿದೆ. ಚಲುವರಾಯಸ್ವಾಮಿ ನುಂಗುವುದರೊಂದಿಗೆ ಕ್ಷೇತ್ರಕ್ಕೂ ಸ್ವಲ್ಪ ಮಟ್ಟಿನ ಕೆಲಸ ಮಾಡಿ ಬಲಿಷ್ಠರಾಗಿದ್ದಾರೆ.



ಅನ್ನ ಹಳಸಿತ್ತು-ನಾಯಿ ಹಸಿದಿತ್ತು ಎಂಬ ಹಾಗೆ ಗೌಡರ ಕಾಕದೃಷ್ಟಿ 'ಯಾವ ಸೈಜಿಗೆ-ಬೇಕಾದರೂ ಹೊಂದಬಲ್ಲ' ಶಿವರಾಮನ ಮೇಲೆ ಬಿತ್ತು, ಮೊನ್ನೆ ತಮ್ಮ ಪುತ್ರದ್ವಯರೊಂದಿಗೆ ಶೃಂಗೇರಿಗೆ ಹೋಗುವ ಮುನ್ನ ಈ ವಿಷಯವನ್ನು ಗೌಡರು ಚರ್ಚಿಸಿದ್ದಾರಂತೆ. ಶಿವರಾಮನನ್ನು ಸೆಳೆಯುವ ತಂತ್ರ ರೂಪಿಸಿದ್ದಾರಂತೆ.

ಹಾಗಾದರೆ ಶಿವರಾಮೇಗೌಡ, ಅಂಬರೀಷರನ್ನು ಭವ್ಯವಾಗಿ ಸ್ವಾಗತಿಸುವ ಸಮಾರಂಭ? ಅದೇ ನೋಡಿ ಗೌಡರ ತಂತ್ರ. ರಾಜಕೀಯವಾಗಿ ತಿಪ್ಪೆಗುಂಡಿ ಸೇರಿರುವ ಶಿವರಾಮನ ಹಿಂದೆ ಈಗ ಮೂರು ಮತ್ತೊಂದು ಜನರಿಲ್ಲ, ಕೈಯಲ್ಲಿ ಕಾಸೂ ಇಲ್ಲ. ಇಂಥ ಸಂದರ್ಭದಲ್ಲಿ ಶಿವರಾಮೇಗೌಡ ಏನು ಮಾಡಬೇಕು? ಅಂಬರೀಷ್ ಹೆಸರೇಳಿದರೆ ಊರು ಬಾರದ ಕಡೆಯಿಂದೆಲ್ಲಾ ಕಾಸು ಉದುರುತ್ತೆ. ಅಂಬರೀಷ್ ಹೆಸರಲ್ಲಿ ಈಗಾಗಲೇ ಶಿವರಾಮೇಗೌಡ ಸಖತ್ ಕಲೆಕ್ಷನ್ ಮಾಡಿದ್ದಾನೆ. ಇನ್ನು ಕಾರ್ಯಕ್ರಮದಲ್ಲಿ ಸ್ಟೇಜಿನ ಮೇಲೆ ಮಿಂಚಿ ಮತ್ತೆ ಚಲಾವಣೆಗೆ ಬರುತ್ತಾನೆ. ತಾನೊಬ್ಬ ಸಂಘಟಕ, ಎಷ್ಟು ಜನರನ್ನು ಸೇರಿಸಿದ್ದೀನಿ ನೋಡಿ ಎಂದು ಶಭಾಷ್‌ಗಿರಿ ಪಡೆಯುತ್ತಾನೆ. ಅನಂತರ ತಕ್ಕ ಸಮಯ ನೋಡಿಕೊಂಡು, ಅಂಬರೀಷ್ ಹೆಸರೇಳಿ ಗುಂಜಿಕೊಂಡಿದ್ದ ದುಡ್ಡಿನ ಮೂಟೆಯೊಂದಿಗೆ ಜೆಡಿಎಸ್ ಸೇರಿಬಿಡುವುದು. ಅನಂತರ ಉಳಿದದ್ದನ್ನು ದೇವೇಗೌಡ ಅಂಡ್ ಸನ್ಸ್ ನಿರ್ಧರಿಸುತ್ತಾರೆ. ಹೇಗಿದೆ ತಂತ್ರ?

ಕುಮಾರಸ್ವಾಮಿ ಹುಡುಗುನ್ನ ಕಾಂಗ್ರೆಸ್ಸಿನೋರು ಕೆಡಿಸಿದ್ದರಂತೆ



ಈಚೆಗೆ ಎರಡು ಬಾರಿ ತೆಳ್ಳಗೆ ಎರಚಿ ಹೋದ ಸೋನೆ ಮಳೆ, ಕಾಳಮಾವನ ಮುಖದಲ್ಲಿ ಮಂದಹಾಸ ವನ್ನುಂಟು ಮಾಡಿತ್ತು. ಉಣ್ಣಲು ರಾಗಿಯಾಗದಿದ್ದರೂ ದನಗಳಿಗೆ ಮೇವಂತೂ ಆಗುತ್ತದೆಂಬ ಬರವಸೆಯುಂಟಾ ಗಿತ್ತು. ಕೆಂಚಗಿದ್ದ ಹೊಲ ಹಸಿರುಗುಪ್ಪ ತಿರುಗಿ ಕಣ್ಣಿಗೆ ತಂಪೆರೆಯುವುದನ್ನು ನೋಡುವುದೇ ಹಿತಕರವಾಗಿತ್ತು. ದರೆ ವಲದ ಕಡೆ ತಿರುಗಾಡಿ ಬಂದ ಕಾಳಮಾವನಿಂದ ಬೀದಿ ಈಸಿ ಕೊಂಡು ಹಬ್ಬದ ಸೀರ,

"ಪರವಾಗಿಲವೆ ವಲ?" ಎಂದ.

"ಪರವಾಗಿಲ್ಲ, ಆದ್ರು ಇನ್ನು ಯರಡು ಮಳೆ ಬೇಕು ಕಂದ್ಯ."

"ಇನ್ನ ಪರವಾಗಿಲ್ಲ. ಮಳೆ ಯಾಗದೆಯಿದ್ರೂ ಕ್ವರಿಗೆ ಪೈರು ಬತ್ತದೆ."

"ಏನೂ ಬತ್ತದೊ ಏನೊ, ಅಂತೂ ಯಾವ ಬರವಸೆನೂ ಇಲ್ಲ ಕಂದ್ಯ ಸೀರ."

"ನಮ್ಮ ಕೈಲೇನದೆ? ಮಳ್ಯಾದಾಗ ಬಿತ್ನೆ ಮಾಡಿ ಕಾಯದು ಬುಟ್ರೆ ನಾವು ಇನ್ನೇನು ಮಾಡಕ್ಕಾದತು?"

"ಆದು ನಿಜವೆಯ, ಆದ್ರು ಮಾಡೊ ಕ್ಯಲಸ ಮಾಡಬೇಕಲವೆ?"

"ಮಾಡಿದವಪ್ಪ, ಸೀಳುಕ್ಕೆ ಮಗಚುಕ್ಕೆ ವಡದು ಬಿತ್ನೆ ಮಾಡಿ ಹಲುಬೆವದ್ದು ಆಮ್ಯಾಲೆ ಕುಂಟೆನೂ ವಡದಾಯ್ತು. ಇನ್ನೇನಿದ್ರು ಅವುನಿಗೆ ಸೇರಿದ್ದು" ಎಂದ ಸೀರನ ವೇದಾಂತ ದಲ್ಲಿ ಏನನ್ನೊ ಗುರುತಿಸಿದ ಉಗ್ರಿ.

"ಸೀರಣ್ಣೇಳೊ ಮಾತಿಗೂ ನಮ್ಮ ದ್ಯಾವೇಗೌಡ್ರ ಮಮ್ಮಕ್ಕಳಿಗೂ ಏನೊ ಕನಕ್ಸನ್ನಿರಂಗೆ ಕಾಣ್ತದಲ್ಲಾ" ಎಂದ.

"ಅದ್ಯಾಕ್ಲ ಮುಸುರಿ ಕಿಸ್ನಮೂರ್ತಿಯಂಗೆ ರಾಗ ಯಳಿತಿ?" ಎಂದು ಜುಮ್ಮಿ ನಗಾಡಿದಳು.

"ಊ ಕಣೆ, ಪಾಪ ದ್ಯಾವೇಗೌಡ್ರು ಆಟೊಂತರ ಮಕ್ಕಳನ್ಯಲ್ಲ ಓದ್ಸಿ, ಅವುಕ್ಯಲ್ಲ ಆಸ್ತಿ ಮಾಡಿ, ಯಂಗೊ ಬದುಕ್ಲಿ ಅಂತ ಬುಟ್ರೆ, ಅವುರ ಮಮ್ಮಕ್ಕಳು ಯಲ್ಲಾರ ಮ್ಯಾಲು ಹ್ವಡದಾಟಕೋದವಂತಲ್ಲಾ, ಪಾಪ ಈ ವಯ್ಸನ ಮನಸಿಗೆ ಏನಾಗಿರಬೇಕು" ಎಂದ ಉಗ್ರಿ.

"ಅದ್ಯಾರು ಮ್ಯಾಲೆ ಹ್ವಡದಾಟಕೋದವುಲ?" ಎಂದ ಕಾಳಮಾವ

"ಸಿಕ್ಕ ಸಿಕ್ಕದೋರ ಮ್ಯಾಲೆ ಹೋದವಂತೆ ಕಣ ಮಾವ. ಹೋಟ್ಯಗೋಗಿ ತಿಂದು ಕುಡುದು ಬಿಲ್ಲು ಕೊಡದಂಗೋದ ವಂತೆ. ಕಾಸು ಕೇಳಿದ್ರೆ ಕೈಯ್ಯೆ ಮುಂದಂತೆ. ವಾದ್ವಾರ ಕೋಳಿ ಕೂಗೋವತ್ತಲ್ಲಿ ಹೋಗಿ ಊಟ ಕೇಳಿ, ಇಲ್ಲ ಅಂದ ಸಪ್ಲೈಯರಿಗೆ ವಡದು ಓಡಿದವಂತೆ."

"ದ್ಯಾವೇಗೌಡನ ಮಮ್ಮಕ್ಕಳು ಚನ್ನಾಗೇ ಇದ್ದವಂತೆ. ಕಾಂಗ್ರೆಸ್ಸಿನೋರು ಕುಡಿಸಿ ತಿನ್ನಿಸಿ ಹಾಳು ಮಾಡಿದರಂತೆ" ಎಂದ ಸೀರ.

"ಕಾಂಗ್ರೆಸ್ಸಿನೋರು ಕೆಡಿಕಂಡು ಹುಯ್ಯಕೋಗಿದ್ರೆ ಈ ಒಡ್ಡೆತ್ತವು ಪೋಲಿಬದ್ದೋಗಿರಬೇಕು ಕಂದ್ಯ" ಎಂದ ಕಾಳ ಮಾವ.

"ಇಲ್ಲ ಕಣ್ಣಾ. ಕಾಂಗ್ರೆಸಿನ ಶಿವಕುಮಾರನ ಕಡಿಯೋರು ಈ ಹುಡುಗ್ರ ಕರಕಂಡೋಗಿ ಕುಡಸದು, ಕೈಗೆ ಕಾಸು ಕೊಡದು, ಹೆಂಗುಸರತ್ರಕೆ ಬುಡದು ಹಿಂಗೆ ಮಾಡಿ ಚಟ ಕಲಿಸಿದ್ದರಂತೆ. ಈಗವ ಯಾರೂ ಬಗ್ಗಸಕ್ಕಾಗದಿಲವಂತೆ."

"ದ್ಯಾವೇಗೌಡನಿಗೆ ಮಮ್ಮಕ್ಕಳು ಏಟಿದ್ದವೂ?"

"ನಿನಿಗೆಷ್ಟವೆ ಅಷ್ಟೆ ಅವೆ ಕಣಮಾವ" ಎಂದ ಉಗ್ರಿ.

"ನಮ್ಮುಡಗರ ಬುದ್ದಿ ಯಾರಿಗೆ ಬರಬೇಕ್ಲ, ಅದರಲ್ಯಲ್ಲ ನಮ್ಮ ದ್ವಡ್ಡತಾಯಿ ಹುಡುಗ ಒಂದೀಟು ದಾರಿಬುಟ್ಟ."

"ಬುಟ್ಟ ಅಂದ್ರೆ ಅವುನಿಗೆ ಸರಿಯಾದ ಟೇಮಲ್ಲಿ ಮದುವೆ ಮಾಡಿದ್ರೆ ಅಂಗ್ಯಾಕಾಡನು" ಎಂದ ಸೀರ.

"ಕುಮಾರಸ್ವಾಮಿ ಹುಡುಗ ಮದಿವಿಗೆ ಬಂದಿದ್ದನೇನ್ಲ?" ಎಂದಳು ಜುಮ್ಮಿ.

"ಅವುನಿಗಿಂತ ಹಿರಿ ಹೆಂಗುಸರನೇ ಕರಿತನೆ ಅಂದ್ರೆ ಮದಿವಿಗೆ ಬಂದಿರದಿಲವೇನೆ?"

"ಈಗಿನ ಕಾಲದ ಹುಡುಗರ ಹಾಳು ಮಾಡೋರು ಹುಡುಗಿರಿಗಿಂತ ಹೆಂಗಸರೇ ಜಾಸ್ತಿ ಕಂದ್ಯ" ಎಂದಳು ಜುಮ್ಮಿ.

"ಅಂಗಂತಿಯಾ?"

"ಊ ಕಂದ್ಯ. ಮದಿವಿಗಂಟ ಯಾವಳ್ನಾರ ಇಟ ಗಂಡಿದ್ದು ಆಮ್ಯಾಲೆ ಮನಿಯೋರು ನೋಡಿದುಡುಗಿಯ ಕಟಗರಿಡೊರ ಏಟು ಜನ ತೋರಲಿ?"

"ನೀನು ತೋರತಿಬುಡವ್ವ, ನಿನ್ನತ್ರಕೆ ಬರೋರ್ಯಲ್ಲ ಅಂತ ಸುದ್ದಿನೆ ಅಲವೆ ಹೊತಗಂಡು ಬರದು."

"ಅಂಗರೆ ದ್ಯಾವೇಗೌಡನ ಮಮ್ಮಕ್ಕಳು ಪೋಲಿ ಬದ್ದೋಗಿದ್ದವೆ?" ಎಂದು ಕಾಳಮಾವ ಒಳಗಣ್ಣಾದ.

"ಊ ಕಣ ಮಾವ ಇದ್ದುದರಲ್ಲಿ ರೇವಣ್ಣನ ಹುಡಗನೆ ಪರವಾಗಿಲವಂತೆ. ಕುಮಾರಸ್ವಾಮಿ ಹುಡಗಂತೂ ಕೈಮೀರ್ಯೋಗಿದ್ದನಂತೆ."

"ಅಪ್ಪನಂಕ್ಯಲ್ಲ ಅವ್ವನ ಶಂಕಿಲ್ಲ ಅನ್ನಂಗೆ ಬ್ಯಳುದ್ರೆ ಇನ್ನೆನಾದವುಲಾ?"


"ಅದು ನಿಜಕಣ ಮಾವ. ದಿನಬೆಳಗಾಯ್ತು ಅಂದ್ರೆ ದ್ಯಾವೇಗೌಡ ಯಾರನ್ಯಂಗೆ ಮುರಿಯನ ಅಂತ ಯೋಚನೆ ಮಾಡ್ತನೆ ಮಕ್ಕಳೂ ಅಂತವೆಯ. ಇನ್ನು ಅಂಥೊರ್ವಟ್ಟೆಲಿ ಹುಟ್ಟದ ಮಕ್ಕಳ ಕೇಳೋರ್ಯಾರು, ಹೇಳೊರ್ಯಾರೂ. ಅದ್ಕೆ ಕುಮಾರಸ್ವಾಮಿ ಹುಡುಗ ಮಾಡಿರೋ ತಪ್ಪಿಗೆ ಯಾರೂ ಬುದ್ದಿ ಹೇಳಕ್ಯೋಗಲಿಲ್ಲ, ಯಲ್ಲಾ ಅವುನು ಮಾಡಿದ್ದೆ ಸರಿ ಅಂದ್ರು."

"ಅವುನೇನು ಮಾಡಿದಾ?"

"ಬೆಂಗಳೂರಲ್ಲಿ ಯಾವುದೋ ಹೋಟ್ಯಲ್ಲಿ ಹುಡುಗೀರ ಜ್ವತೆ ಕುಣಕಂಡು, ಕುಡಕಂಡು, ಕೋಳಿಕೂಗೋವತ್ತಿಗೋಗಿ ಇನ್ಯಾವುದೋ ಹೋಟ್ಯಲ್ಲಿ ಊಟ ಕೇಳಿದನಂತೆ. ಪಾಪ ಅವುರಾಟೊತ್ತಿನಲ್ಲಿ ಎಲ್ಲಿಂದ ತಂದರೂ, ಇಲ್ಲ ಅಂದ್ರು. ಸರಿ ಮುಖ್ಯಮಂತ್ರಿ ಮಗಲವೆ, ಸಿಟ್ಟುಬತ್ತು, ಹೋಟ್ಲು ಗಾಜನ್ಯಲ್ಲ ಪುಡಿ ಮಾಡಿ ಯಲ್ಲಾರಿಗೂ ಗೂಸುಬುಟ್ಟು ಹೋದ ಅತ್ತೆ."

"ಏ ಆ ಹುಡುಗ ಉಂಡು ಮನಿಗಿತ್ತಂತೆ ಕಣೊ, ಕಾಂಗ್ರೆಸ್ಸಿನೋರು ಬಂದು ಏಳಿಸಿಗಂಡೋಗಿ ಅಂಗೆ ಮಾಡಿಸಿ ದ್ದರಂತೆ". ಎಂದ ಸೀರ.

"ಯಾರು ಚಿಗಪ್ಪ ನಿನಿಗೇಳಿದೋರು" ಎಂದುಕೊಂಡು



ವಾಟಿಸ್ಸೆ ಬಂದ.

"ರೇವಣ್ಣ ಅಂಗಂತಾ ಅವುನೆ."

"ಅವುನು ಮಾತ ಕಲ್ತು ಕೇವಲ ಐದೊರ್ಸಾಯ್ತು. ಅವುನ ಮಾತನೂ ನಂಬತಿಯಲ್ಲ ಚಿಗಪ್ಪ?"

"ಯಾರ ಮಾತ ನಂಬನ, ಯಾರ ಮಾತ ತಗದಾಕನ ಹೋಗತ್ತಗೆ."

"ಚಿಗಪ್ಪ ಈಗ ನಾನು ಪರೆಗ್‌ಜಾಂಪಲ್ಲ್ ನಿನ್ನ ಕಡಿಕೇ ತಿರುಗುಸ್ತಿನಿ. ನಿನ್ನ ಮಗ ಎಲ್ಯಾರ ಹೋಗಿ ಏನ್ನಾರ ಮಾಡಿದಾ ಅಂದ್ರೆ ಜನ ನಂಬತರೊ, ನಂಬಕ್ಯುಲವೊ ಹೇಳು?"

" !?

"ಕಮಾನ್ ಟೆಲ್‌ಮಿ, ಅಪ್ಪ ಅಡ್ನಾಡಿ ಕ್ಯ[...] ಮಾಡಿದಾಗ ಮಗ ಕುಲಗೇಡಿ ಕ್ಯಲಸ ಮಾಡೇ ಮಾಡ[...] ಅಂತ ಗಾದೆ ಮಾತೆ ಅದೆ. ಕುಮಾರಸ್ವಾಮಿ ಮಾಡಿದ[...] ಹೋಟ್ಲು ರೆಸಾರ್ಟ್ಸ್ ರಾಜಕೀಯ. ಆದ್ರಿಂದ ಅ[...] ಮಗ ಮಾಡೋ ಕ್ಯಲಸನೂ ಅಂತವೆಯಾ."

"ಅವುರಿವರ ಆಡಿಕತ್ತಿಯಲ್ಲಾ ನೀನು ನ್ಯಟ್ಟಗಿದ್ದಿ[...]" ಎಂದಳು ಜುಮ್ಮಿ.

"ಇದೇನಕ್ಕ ನೀನು ದೇವೇಗೌಡನಂಗೆ ಮಾತಾಡ[...]"

"ದೇವೇಗೌಡರೇನು ಮಾತಾಡಿದ್ದರ್ಲ?"

"ಅವುರು ಅವರ ರಾಜಕೀಯದ ಇತಿಹಾ[...] ಸ್ಥಾನಮಾನಕ್ಕೆ ತಕ್ಕಂತೆ ಮಾತಾಡ್ಯವುರೆ ಕಣಕ್ಕ."

"ದ್ಯಾವೇಗೌಡ ಅದರಲ್ಯಲ್ಲ ಸಿಟ್ಟಿಂ ಕಂದ್ಯ ಯಾರ[...] ವಯಿಸಿಗಳದಿಲ್ಲ" ಎಂದ ಕಾಳಮಾವ.

"ದ್ವಡಪ್ಪ ದ್ಯಾವೇಗೌಡ ನಿನ್ನಂಗಲ್ಲ, ಅಪ್ಪ[...] ರಾಜಕಾರಣಿ. ಅದು ಹೋದೆಜ್ಜೆ ಮೇದ ಮೋ[...] ಕಾಣದಂಗೆ ಇರೋ ರಾಜಕಾರಣಿ, ಅದ್ಕೆ ಏನಂದ[...] ಗೊತ್ತೆ?"

"ಏನಂದವುನ್ಲ?"

"ನಾನು ಹುಟ್ಟದ್ಮೊ ಮದ್ನ ದೇವರಾಜ ಅ[...] ಅಳಿಯ ಯಾರೊ ಹೆಂಗುಸ ಚುಡಾಯಿಸಿದ್ನಂತೆ. ಈ ದ್ಯಾವೇಗೌಡ ನ್ಯಾಯ ಪಂಚಾತಿ ಮಾಡಿ ಅ[...] ಅಳಿಯನಿಗೆ ಏನೂ ಆಗದಂಗೆ ನೋಡಿಕಂಡನಂತೆ.[...]

"ಅಲ್ಲಾ ಕಂದ್ಯ ಅಂತ ಮಾತಾಡಿದ್ರೆ ಹುಡ[...] ಹೆದಿರ್ಯನೆ? ಹುಡುಗ ತೆಪ್ಪು ಮಾಡಿದ್ರೆ ಶಿಕ್ಷೆ ಕೊ[...] ಅಂದ್ರೆ ಯಂಗಿರದು?"

"ಅದು ನಿನ್ನ ನ್ಯಾಯ. ದ್ಯಾವೇಗೌಡ್ರ ನ್ಯಾಯ[...] ಅವ್ಯಲ್ಲ ನ್ಯಡಿಯದಿಲ್ಲ ದ್ವಡಪ್ಪ. ಅಂತ ಗಾಂಧಿ ಮ[...] ಹಾಳಾಗಿದ್ದ. ಸಂಜಯಗಾಂಧಿ ಏನಾಗಿದ್ದ? ಅರಸು ಮ[...] ಏನಾದ್ನು? ಪುಡಸಾಮಿ ಮಗ ನ್ಯಟ್ಟಗಿದ್ನೆ? ಆ ಶ್ರೀಕಂಠ[...] ಮಗ ಏನು ಮಾಡ್ತನೆ ಅಂತ ನೋಡಿದ್ದಿರಾ [...] ಪಟ್ಟಬರಕಂಡು ಕಡತ ಕಂಕುಳಿಗಾಯ್ಕಂಡು ಕುಂತ[...] ಇದಕೇನೇಳ್ತಿ?"

"ಯಾವಳೊ ಆರು ಮಕ್ಕಳೆತ್ತ ಮ್ಯಾಲೆ ಹಾ[...] ಕಲ್ತಳಂತೆ, ಅಂಗಾಗ್ಯದೆ ದ್ಯಾವೇಗೌಡನ ಕತೆ" ಎಂದ [...]

"ಏನೊ ಉಪ್ಪು ತಿಂದೋಳು ನೀರು ಕುಡಿತಳೆ [...] ಹೋಗಲತ್ತಗೆ."

"ಅಂಗಿದ್ರೆ ಚನ್ನಾಗಿತ್ತು ದ್ವಡಪ್ಪ, ಇಲ್ಲಿ ಅಂಗಾಯ್ತ[...] ದ್ಯಾವೇಗೌಡ್ರು ಮಕ್ಕಳು ಉಪ್ಪುತಿಂದ್ರೆ ಸರ್ಕಾರ [...] ಕುಡಿತ ಅದೆ."

" !?"


–ಬಿ. ಚಂದ್ರೇಗ[...]

Zero Hour ಮುನ್ನಿ

1. ದಾವಣಗೆರೆ ಕಮ್ಯುನಿಸ್ಟರಿಗೆ ಶ್ಯಾಮನೂರು ಶಿವಶಂಕರಪ್ಪ 'ಸಮಾಜ ವಿಜ್ಞಾನಿ'ಯಂತೆ ಕಂಡಿದ್ದಾರೆ. ನೀವೇನಂತೀರಿ?
   a) ಅವರ ಲೀಡರುಗಳು ಟಾಟಾ, ನಾರಾಯಣಮೂರ್ತಿ, ಪ್ರೇಮ್‌ಜಿಗಳನ್ನು ತಬ್ಬಿಕೊಂಡಿದ್ದಕ್ಕೆ ಈ ಪ್ರತಿಕ್ರಿಯೆ.
   b) 'ಕ್ಯಾಪಿಟೇಷನ್' ಎಂಬುದು ಕನ್‌ಫ್ಯೂಶನ್ ಆಗಿರಬೇಕು
   c) 'ಸಮಾಜ ವಿಜ್ಞಾನಿ' ಎಂದರೆ ಲಿಂಗಾಯತ ಸಮಾಜ ದೊಳಗಿನ ವಿ(ಚಿತ್ರ)ಜ್ಞಾನಿ ಅಂತಾ ಅರ್ಥ
   d) `Buddha Smiles' ಎಂದು ಬಂಗಾಳದ ಕಡೆ ನೋಡಿದ್ದರ ಪರಿಣಾಮ
2. ರಾಜ್ಯ ಪೊಲೀಸರ 'ಎನ್‌ಕೌಂಟರ್' ಕುರಿತ ಈ ವಾಕ್ಯಗಳಲ್ಲಿ ಯಾವುದು ಸರಿ?
   a) ರಜಾಕ್ 'ಎನ್‌ಕೌಂಟರ್'ಅನ್ನು ಸುಪಾರಿ ಕಿಲ್ಲಿಂಗ್ ಎನ್ನಬಹುದು.
   b) ತಮಗಾಗದ ರೌಡಿಗಳನ್ನು ಬಂಧಿಸುವುದು, ಕೊಲ್ಲುವುದು
   c) ಎನ್‌ಕೌಂಟರ್‌ಗೂ ಮೊದಲು 'ಕೌಂಟರ್' ಭರ್ತಿ ಆಗಿರುತ್ತೆ
   d) ಕಾನೂನು ಪಾಲಕರ ಕಾನೂನುಬಾಹಿರ ಕೊಲೆ
3. 'ಇನ್ನು ಕನ್ನಡದಲ್ಲೇ ಸಮನ್ಸ್'-ಸುದ್ದಿ. ನಿಮ್ಮ ಅಭಿಪ್ರಾಯವೇನು?
   a) ಕನ್ನಡದಲ್ಲೇ ಶಿಕ್ಷೆಯಾ?
   b) ಪೊಲೀಸರು ಅಮ್ಮನ್, ಅಕ್ಕನ್ ಬಳಸುವುದನ್ನು 'ಕನ್ನಡದಲ್ಲೇ ಶಿಕ್ಷೆ' ಎನ್ನಬಹುದು
   c) ಇನ್ನು ಮುಂದೆ ರೌಡಿಗಳು 'ಕನ್ನಡದಲ್ಲೇ ಅಪರಾಧ' ಮಾಡಬೇಕೇನೊ?
   d) ನ್ಯಾಯಾಲಯ ಆಡಳಿತವೆಲ್ಲ ಇಂಗ್ಲಿಷ್‌ನಲ್ಲೇ ಮುಂದುವರೆಯುತ್ತಾ?
4. 'ಅಮಿತಾಭ್‌ಗೆ ಪುತ್ರ ಅಭಿಷೇಕ್‌ನಿಂದ ಮೊಮ್ಮಗ ನನ್ನು ಪಡೆಯುವ ಆಶೆ-ಸುದ್ದಿ. ಏನಾಗಲಿದೆ?
   a) ಅದ್ಹೇಗೆ ಸಾಧ್ಯ? ಅಭಿಷೇಕ್ ಲಿಂಗಪರಿವರ್ತನೆ ಮಾಡಿಸಿಕೊಂಡರೂ ಸಾಧ್ಯವಾಗುವುದಿಲ್ಲವಲ್ಲ
   b) 'ಬೇಗ ಮದುವೆಗೆ ರೆಡಿಯಾಗು' ಎಂದು ಐಶೂಗೆ ಇನ್‌ಡೈರೆಕ್ಟಾಗಿ ರಿಕ್ವೆಸ್ಟ್ ಮಾಡಿದ್ದಾರಷ್ಟೇ
   c) ಅಭಿಷೇಕ್‌ಗಂತೂ ಆಕ್ಟಿಂಗ್ ಕಲಿಯಲಾಗಲಿಲ್ಲ, ಅವನ ಮಗನಿಗಾದರೂ ಕಲಿಸೋಣ ಎಂಬ ಯೋಚನೆ
   d) ಈ ಅಮಿತಾಭ್‌ಗೆ ಮೊಮ್ಮಗಳೆಂದರೆ ಅದೇಕೆ ಭಯವೋ...
5. 'ಲೈಂಗಿಕತೆಯಲ್ಲಿ ಭಾರತೀಯರು ದುರ್ಬಲ' ಎಂಬ ಸಮೀಕ್ಷಾ ವರದಿಗೆ ನಿಮ್ಮ ಅಭಿಪ್ರಾಯ?
   a) ಮಕ್ಕಳು ಹುಟ್ಟಾನೇ ಇವೆ ಮತ್ತೆ?
   b) ಸಂತಾನಾಭಿವೃದ್ಧಿಗಷ್ಟೇ ಲೈಂಗಿಕ ಕ್ರಿಯೆಯಲ್ಲಿ ತೊಡಗುತ್ತಾರೇನೊ?
   c) 'ಕಣ್ಣಾಮುಚ್ಚಾಲೆ,' 'ಛಿ ತುಂಟ' ಓದುಗರು ಇದನ್ನು ಒಪ್ಪಲ್ಲವೇನೊ?
   d) ಆ ಸಮೀಕ್ಷಾ ವರದಿ ರಾಂಗ್ ಆಗಿದೆ ಬಿಡು....

ಬಿಟ್ bit ಹಿಟ್!

ಅಂಬಿ ಮಾಮಾಗೆ



ಎಷ್ಟ್ ಖುಷಿ ಆಗೈತಿ ಗೊತ್ತನು ಮಾಮಾ.... ಸುಮ್ಮಕ್ಕನಂ[...] ಹಿರಿಹಿರಿ ಹಿಗ್ಗಿ ಮತ್ತೊಂದೆರಡು ಕೆ.ಜಿ. ಉಬ್ಬಬಿಟ್ಟಾಳ. [...] ಹೋಗಿ ಹೋಗಿ ನೀ ವಾರ್ತಾ ತೊಗೊಂಡಿಯಲ್ಲ, ಅದ[...] ಏನೈತಿ ಮಣ್ಣು.... ಯಾವಾಗ ನೋಡು ಪ್ರೆಸ್‌ನವರ ಜೊತಿಗೆ ಮಾತಾಡ್ಬೇಕು....


ನೀ ಏಳಾದ ಹನ್ನೆರಡಕ್ಕ.... ಅದ್ಕ ಪ್ರೆಸ್ ಮೀಟಿಂಗೆಲ್ಲ ಸಂಜಿ ಹೊತ್ತಿನ್ಯಾಗ ಇಟ್ಕೊಂಡು ಬಿಡು.

ನಿನ್ನಬ್ರು ಕ್ಲೋಸ್‌ಫ್ರೆಂಡ್ಸು ಹ್ಯಂಗದಾರ? ಅವರಾ ಮಾಮ, ಮಿ. ಇಸ್ಪೀಟು & ಮಿಸ್ ಗುಂಡು! ಇಲ್ಲಿ ಸುಮ್ಮಕ್ಕ ಹೇಳ್ಯಾಳ: "ಅಭಿವೃದ್ಧಿ ಮಾಡಲು ಅವ್ರು ಏನೇನೋ ಕಲ್ಪನೆ ಇಟ್ಕೊಗೊಂಡಾರ...."

ಇದ್ನ ಓದಿದಾಗಿನಿಂದ ನಂಗ ಹೆದ್ರಿಕೆ ಆಗಾಕ ಹತ್ತೈತಿ... ಯಾಕಂದ್ರ ನಿನ್ ಕಲ್ಪನಾ ಹ್ಯಂಗಿರ್ತಾವೊ ಅಂತಾ ಭಯ ಆಗಾಕ ಹತ್ತೈತಿ.....

ಡುಮ್ಮು ಅಭಿಷೇಕನ್ನ ಹೀರೋ ಯಾವಾಗ ಮಾಡ್ತೀ ಮಾಮಾ?

-ಇತಿ ಮು[...]
ಧಾರವ[...]



ಒಂದು 'ಗಾದಿ' ಮಾತು

ಕೂಡಿ ನುಂಗಿದರೆ
ಪಾರ್ಟಿ ನೋಡಬಾರದು

ಕಷ್ಟವಾಗದ ಮೀಸಲಾತಿ

ಕಳೆದ ಹದಿನೈದು ವರ್ಷದಿಂದ ಕರ್ನಾಟಕದಲ್ಲಿ ಏನಾಗಿದೆ ಅಂದರೆ, ಚುನಾವಣೆಗೆ ಮುನ್ನ ರಾಜಕೀಯ ಪಕ್ಷಗಳು ಭರವಸೆ ಕೊಡುತ್ತವೆ; ಈ ಭರವಸೆಗಳಲ್ಲಿ ಅನೇಕವು ಸಮಾಜ ಕಲ್ಯಾಣ, ನೆರವು, ಸಬ್ಸಿಡಿಗೆ ಸಂಬಂಧಿಸಿದವು. ಎರಡನೆಯದಾಗಿ ಸರ್ಕಾರಕ್ಕೆ ಅತ್ಯಂತ ಸುಲಭವಾದ ...ಲಸವಾದ ಗುಮಾಸ್ತರು, ಅಧಿಕಾರಿಗಳನ್ನು ನೇಮಿಸಿಕೊಂಡು ಉದ್ಯೋಗ ಕಲ್ಪಿಸಿದ ಭ್ರಮೆಯನ್ನು ...ಹೊಂದಿ ಅದನ್ನೇ ಜನರಿಗೆ ತಿಳಿಸುವುದು. ಮೂರನೆಯದು, ಸರ್ಕಾರವಿರುವುದು ಸರ್ಕಾರಿ ನೌಕರರಿಗಾಗಿ ಎಂಬ ರಾಜಕಾರಣಿಗಳ ನಂಬಿಕೆ.

ಈ ಮೂರರಿಂದಾಗಿ ಕೆಲವು ಅಪಾಯಗಳಾಗಿವೆ. ಭರವಸೆ, ಕನಸು ನೀಡಿದ ಒಂದು ಪಕ್ಷ ಅಧಿಕಾರಕ್ಕೆ ಬಂದೊಡನೆ ಕಾನೂನುಗಳ ಗೊಂಡಾರಣ್ಯ, ಸೀಮಿತವಾದ ಬೊಕ್ಕಸ, ಬೇರೂರಿದ ನೌಕರರ ಸವಲತ್ತುಗಳು–ಇದನ್ನು ಕಂಡು ದಿಗ್ಭ್ರಮೆಗೊಂಡು ಸರ್ಕಾರವೇ ಹಳೇ ಚೌಕಟ್ಟಿಗೇ ಹೊಂದಿಕೊಳ್ಳುತ್ತ ಹೋಗುತ್ತದೆ. ಅರ್ಧ ಭಾಗ ಹಣ ಸಂಬಳಕ್ಕೆ ಹೋದರೆ, ಕಾಲು ಭಾಗ ನೌಕರರ ಸವಲತ್ತಿಗೆ ವ್ಯಯವಾಗುತ್ತದೆ. ಉಳಿದ ಕಾಲುಭಾಗದಲ್ಲಿ ಬಹುಪಾಲು ಕಾಮಗಾರಿ, ಏನನ್ನೂ ಇಲಾಖೆಯ ಲಂಚಕ್ಕೆ ಹೋಗುತ್ತದೆ. ಜನಸಾಮಾನ್ಯರು ಅತೃಪ್ತರಾಗಿಯೇ ಉಳಿಯುತ್ತಾರೆ. ಇವರ ನಡುವೆ ಪರಂಪರಾಗತ ಸರ್ಕಾರವನ್ನ ಹೇಗೆ ಪಳಗಿಸುವುದು ಬಳಸಿಕೊಳ್ಳುವುದು ಎಂಬುದನ್ನರಿತ ಕಂಟ್ರಾಕ್ಟರ್‌ಗಳು, ಹೆಂಡದ ದಣಿಗಳು, ರಾಜಕಾರಣಿಗಳು, ಅಧಿಕಾರಿಗಳೊಂದಿಗೆ ಶಾಮೀಲಾಗಿ ಲಂಚ, ವಂಚನೆಯ ಮೂಲಕ ಸರ್ಕಾರವನ್ನು ಸುಲಿಯುತ್ತಲೇ ಹೋಗುತ್ತಾರೆ. ಐದು ಲಕ್ಷ ಉತ್ಪಾದಕ ಉದ್ಯೋಗ ಕಲ್ಪಿಸುವ ಕಡೆ ಹತ್ತು ಸಾವಿರವನ್ನೂ ಉಂಟು ಮಾಡಲಾಗದೆ ಜನರು ನಿರುದ್ಯೋಗ, ಬಡತನದಲ್ಲಿ ನರಳುತ್ತಾರೆ, ಹೋಗುತ್ತಾರೆ. ಇದರಿಂದಾಗಿಯೇ ಹಳ್ಳಿಗಳಿಗೆ ಇದುವರೆಗೆ ...ಯವ್ಯಯದ ಶೇಕಡ 34 ಭಾಗ ಕೂಡ ದೊರೆಯುವುದಿಲ್ಲ. ಹಾಗೆಯೇ ಉದ್ಯೋಗವೇ ಇಲ್ಲದ ಸ್ಥಿತಿಯಲ್ಲಿ ಪರಿಶಿಷ್ಟರಿಗೆ ಕೂಡ ಉದ್ಯೋಗ ಸಿಗದ ಸ್ಥಿತಿ ಏರ್ಪಟ್ಟು ಸಲ್ಲದ ಮನಸ್ತಾಪ, ಕಚ್ಚಾಟ ಉಂಟಾಗುತ್ತದೆ. ಉದ್ಯೋಗ, ಸಂಪತ್ತು ಹೆಚ್ಚಾದರೆ ಮೀಸಲಾತಿ ಯಾರಿಗೂ ಕಷ್ಟವಾಗಿ ಕಾಣುವುದಿಲ್ಲ.



ಜುಲೈ 17, 1977

ಮೌನಿಗಳು

ಅದೊಂದು ಪುಟ್ಟ ನಗರ, ಅಲ್ಜೀರಿಯಾದ ಸಮುದ್ರ ದಂಡೆಯಲ್ಲಿನ ನಗರ. ಅಲ್ಲಿ ಒಂದು ಕಾರ್ಖಾನೆ. ವೈನ್ ಕೇಸ್‌ಗಳನ್ನು ತಯಾರಿಸುವ ಕಾರ್ಖಾನೆಯೆಂದು ನೆನಪು. ಸುಮಾರು ಇಪ್ಪತ್ತು ಜನ ಕೆಲಸದಲ್ಲಿದ್ದಾರೆ. ಸಂಬಳ ಸಾಲದು. ಮುಷ್ಕರ ಹೂಡುತ್ತಾರೆ. ಕತೆಯ ನಾಯಕ ನಡುವಯಸ್ಸು ತಲುಪಿದ ಕಾರ್ಮಿಕ. ದೇಹದ ಶಕ್ತಿ ಕುಗ್ಗುತ್ತಿದೆ; ಜೀವನದ ಉತ್ಸಾಹ ಕಡಿಮೆಯಾಗುತ್ತಿದೆ. ಈ ಜೀವನಕ್ಕೆ ಹೊಸ ಸಂಪತ್ತು, ಆಶೆ, ಕನಸುಗಳು ಬರುವ ಸಾಧ್ಯತೆ ತುಂಬ ಕಮ್ಮಿ ಇದೆ.

ಮುಷ್ಕರ ಮಾಡಲು ಕಾರ್ಮಿಕರಿಗೆ ಇಷ್ಟವಿಲ್ಲ, ಯಾಕೆಂದರೆ ಕಾರ್ಖಾನೆಯು ಅಷ್ಟೇನೂ ಒಳ್ಳೆಯ ಲಾಭ ಗಳಿಸುತ್ತಿಲ್ಲವೆಂದು ಅವರಿಗೆ ಗೊತ್ತು, ಮಾಲೀಕ ತುಂಬ ಒಳ್ಳೆಯವನು. ಆತ ಕಾರ್ಮಿಕರ ಬೇಡಿಕೆಗಳನ್ನೆಲ್ಲ ನೋಡಿ ಹೇಳಿದ್ದಾನೆ, 'ನೋಡಿ, ನಾನು ನಿಮಗೆ ಇಷ್ಟು ಕೊಡುವುದು ಸಾಧ್ಯ, ಇದಕ್ಕೆ ಒಪ್ಪದಿದ್ದರೆ ಕಾರ್ಖಾನೆಯನ್ನು ತೆರೆಯುವುದಿಲ್ಲ.' ಆತ ಸುಳ್ಳು ಹೇಳುವವನಲ್ಲ; ಅಲ್ಲದೆ ತುಂಬ ಮಾನವೀಯ ವ್ಯಕ್ತಿ. ಒಣ ಭಾವುಕತೆಯಾಗಲಿ, ಕುತಂತ್ರದ ಗುಣವಾಗಲಿ ಇಲ್ಲದ ಮನುಷ್ಯ ಆತ. ಕಾರ್ಮಿಕರಿಗೆ ಇದೆಲ್ಲ ಗೊತ್ತಿದೆ. ಮತ್ತೆ ಕೆಲಸಕ್ಕೆ ಹಿಂದಿರುಗಲು ಸಣ್ಣ ನೆಪಕ್ಕಾಗಿ, ಆತ ಸ್ವಲ್ಪವಾದರೂ ಬಗ್ಗುವುದಕ್ಕಾಗಿ ಕಾಯುತ್ತಿದ್ದಾರೆ. ಆದರೆ ಮಾಲೀಕ ಸುಮ್ಮನೇ ಇರುತ್ತಾನೆ. ಕೊನೆಗೆ ಕಾರ್ಮಿಕರೇ ಆತನ ಶರತ್ತು ಒಪ್ಪಿ ಕೆಲಸಕ್ಕೆ ಹಿಂದಿರುಗುತ್ತಾರೆ.



ಬಹುಕಾಲದಿಂದ ಕೆಲಸ ಮಾಡಿದ ಆ ಜಾಗ ಅವರ ವ್ಯಕ್ತಿತ್ವದ ಭಾಗವೇ ಆಗಿದೆ; ಕೆಲಸಕ್ಕೆ ಹಿಂದಿರುಗಿದ ನೆಮ್ಮದಿ ಅವರಲ್ಲಿದೆ. ಜೊತೆಗೆ ಅವಮಾನ ಅವರನ್ನು ತುಂಬಿದೆ. ಎಲ್ಲರೂ ಸಿಟ್ಟಿನಿಂದ, ಮುಖಭಂಗ ತೋರಿಸದೆ ಕೆಲಸ ಮಾಡುತ್ತಿದ್ದಾರೆ. ಮಾಲೀಕ ಅವರನ್ನು ನೋಡಲು ಬರುತ್ತಾನೆ. ಹುಡುಗನೊಬ್ಬನನ್ನು ಏನನ್ನೋ ಕೇಳುತ್ತಾನೆ. ಆತ ಏನನ್ನೋ ಯೋಚಿಸುತ್ತಿದ್ದು ಉತ್ತರಿಸದೆ ಸುಮ್ಮನಿರುತ್ತಾನೆ. ಮಾಲೀಕ ಸ್ವಲ್ಪ ಹೊತ್ತು ಬಿಟ್ಟು ಇನ್ನೊಬ್ಬನನ್ನು ಮಾತಾಡಿಸುತ್ತಾನೆ. ಆತನಲ್ಲೂ ಉತ್ತರಿಸಲು ಉತ್ಸಾಹವಿಲ್ಲ. ಮಾಲೀಕ ಕೂಡ ಸುಮ್ಮನಾಗುತ್ತಾನೆ. ಮೌನ ಬೆಳೆಯುತ್ತ ಹೋಗುತ್ತದೆ. ಅದು ಉದ್ದೇಶಪೂರ್ವಕ ಮೌನವಲ್ಲ; ಮಾತಾಡಿಕೊಂಡು ಆಚರಿಸುವ ಮೌನವಲ್ಲ, ಬರಬರುತ್ತಾ ಅದನ್ನು ಮುರಿದು ಮಾತಾಡುವುದೇ ಎಲ್ಲರಿಗೆ ಕಷ್ಟವಾಗುತ್ತದೆ. ಮಾತಾಡಬೇಕೆಂದರೂ ಆಗುವುದಿಲ್ಲ, ಅದೇ ಅಭ್ಯಾಸವಾಗಿ ಹೋಗುತ್ತದೆ. ಕೊನೆಗೆ ಮಾಲೀಕನ ಮನೆಯಲ್ಲಿ ಒಂದು ಅಪಘಾತವಾಗಿ ಎಲ್ಲರಿಗೆ ನಾಲಗೆ ಬರುತ್ತದೆ. ವಾತಾವರಣ ತಿಳಿಗೊಳ್ಳುತ್ತದೆ.

ಭಾರತದ ಅನೇಕ ಕಾರ್ಖಾನೆಗಳಲ್ಲಿ ಈ ಪರಿಸ್ಥಿತಿ ಇದೆ. ಕಾರ್ಮಿಕರು, ಮಾಲೀಕರನ್ನು ಮೀರಿದ ಶಕ್ತಿಗಳು ಅವರನ್ನು ದಿಕ್ಕೆಟ್ಟ ಸ್ಥಿತಿಯಲ್ಲಿ ಇಟ್ಟಿರುತ್ತವೆ. ಕಚ್ಚಾವಸ್ತು ದುಬಾರಿ, ಡೀಸೆಲ್ ದುಬಾರಿ, ಮಾಡುವ ವಸ್ತುಗಳಿಗೆ ಮಾರ್ಕೆಟ್ ಇಲ್ಲ, ಯಂತ್ರಗಳು ಹಳೇ ಕಾಲದ ನಿರುಪಯುಕ್ತ ಯಂತ್ರಗಳು, ಜನರಲ್ಲಿ ಉತ್ಸಾಹವಿಲ್ಲ....

ಮೇಲಿನ ಕತೆ ಆಲ್ಬರ್ಟ್ ಕಾಮು ಬರೆದದ್ದು; ಹೆಸರು 'ಸೈಲೆಂಟ್ ಮೆನ್'.


ಎದೆ, ಕಿಬ್ಬೊಟ್ಟೆ

ಕೆಲವು ತಿಂಗಳ ಹಿಂದೆ 'ನ್ಯಾಷನಲ್ ಜಿಯಾಗ್ರಾಫಿಕ್' ಪತ್ರಿಕೆ ಕೇರಳವನ್ನು ಕುರಿತು ಒಂದು ಚಿತ್ರಲೇಖನ ಪ್ರಕಟಿಸಿತು. ಮೋಹಕ ಲೇಖನ. ಕೇರಳದ ಬಗ್ಗೆ ನನಗೆ ಗೊತ್ತಿದ್ದ ವಿರೋಧಾಭಾಸ, ಸೌಂದರ್ಯವೆಲ್ಲ ನೆನಪಾಗತೊಡಗಿತು. ...ಳು ಸಾವಿರ ಅಡಿ ಎತ್ತರದಲ್ಲಿನ ಟೀ ತೋಟಗಳು; ಹುಡುಗಿಯರು, ಹುಡುಗರಿಂದ ಕಿಕ್ಕಿರಿದ ಕಾಲೇಜುಗಳು; ಕಮ್ಯುನಿಸ್ಟ್ ಭಾಷಣ ಮಾಡುವ ನಂಬೂದರಿಪಾದ್; ಎಳ್ಳು ಹಾಕಿದರೆ ನೆಲ ತಲುಪದಷ್ಟು ದಟ್ಟವಾಗಿ ಘೇರಾಯಿಸಿರುವ ಭಕ್ತರು, ದೇವಾಲಯದ ...ದುರು... ಇದೆಷ್ಟು ಸುಂದರ, ಸಜೀವ, ಬೆವರು ವಾಸನೆ, ಮಣ್ಣಿನ ವಾಸನೆಯ ರಾಜ್ಯ. ಹಾಗೆಯೇ ಇದು ಜನಸಂಖ್ಯೆಯಲ್ಲಿ ಮೊದಲನೆಯದು, ಕುಟುಂಬ ಯೋಜನೆಯ ಅನುಷ್ಠಾನದಲ್ಲಿ ಕೂಡ. ರಾಜ್ಯದಲ್ಲಿ ದೊಡ್ಡ ಸಂಖ್ಯೆಯ ಕ್ರಿಶ್ಚಿಯನ್ನರು, ಮುಸ್ಲಿಮರು–ಹಾಗೆಯೇ ...ಮ್ಮ ಅಹಂಕಾರವನ್ನೆಲ್ಲ ಬಿಟ್ಟು ಸರಳಗೊಂಡ ರಾಜರು, ಪಾಳೇಗಾರರು.

ಕೇರಳದ ಫೋಟೋ ಒಂದನ್ನಾದರೂ ಕೊಡಬೇಕೆನ್ನಿಸುತ್ತಿದೆ. ಆದರೆ ...ಪತ್ರಿಕೆಯ ಪುಟ ಹರಿದು ಪಾಸಿಟಿವ್ಸ್ ಮಾಡಿಸಲು ಹಿಂಜರಿಕೆಯಾಗುತ್ತಿದೆ. ...ಆಕಾರದಲ್ಲಿ ದಕ್ಷಿಣ ಅಮೆರಿಕದ ಚಿಲಿಯನ್ನು ಹೋಲುವ ಕೇರಳ ದಕ್ಷಿಣ ಭಾರತದ ಎದೆ, ಕಿಬ್ಬೊಟ್ಟೆಯಂತೆ ಪಶ್ಚಿಮ ಕರಾವಳಿಯಲ್ಲಿ ಹಬ್ಬಿದೆ. ...ಳು ಸಾವಿರ ಅಡಿ ಎತ್ತರದಿಂದ ಸಮುದ್ರದ ಮಟ್ಟದಲ್ಲಿ ಅಲೆಗಳನ್ನು ...ಮುಟ್ಟುತ್ತದೆ; ಇತ್ತೀಚೆಗೆ ಸಮುದ್ರದ ಅಲೆಗಳು ಕೇರಳದ ದಂಡೆ ಕೊರೆದು ...ಲ ನುಂಗುತ್ತಿರುವ ವರದಿಗಳು, ಬರುತ್ತಿವೆ. ಹಾಗೆಯೇ ಕೊರೆಸಿಕೊಳ್ಳುತ್ತಿರುವ ...ಮ್ಮ ಕಾರವಾರದ ಸೌಂದರ್ಯ, ಹಚ್ಚಹಸಿರಿನ ಹೊನ್ನನ್ನು ಮರೆಯದಿರೋಣ.



ಹೆಣ್ಣಿಗೆ ಆನಂದಮಯ ಘಳಿಗೆ ಯಾವುದು?



...ಎಲ್. ಶ್ವೇತಾ, ಹರಪನಹಳ್ಳಿ
...ನ್ನಡದ ಉಳಿವಿಗಾಗಿ ಚಂಪಾರವರ ...ಂಪನಾ? ಅಥವಾ ಕಂಪನಾ?
* 'ಪಂಪ' ಅಂತ claim ಮಾಡಿಕೊಳ್ಳದಿದ್ದರೆ ಸಾಕು.

...ವಿತಾ ಮಧುಸೂದನ್, ದಾವಣಗೆರೆ
...ದ್ಯುತ್ ದರ ಇಳಿಸಿದರೆ ಸಿ.ಎಂ.ಗೇಕೆ ...ಕ್ ಆಗ್ಬೇಕು?
* ರೇವಣ್ಣನ ಸಂಬಳ ಕಡಿಮೆ ಆಗುತ್ತೆ ಅಂತ ಅಂದುಕೊಂಡಿರಬೇಕು.

...ವಕುಮಾರ್, ಶೋರಾಪೂರ
...ಟಿಯರೇಕೆ ತುಂಬಾ ಬೋಲ್ಡಾಗಿ ಕಾಣಿಸುತ್ತಾರೆ?
* ಬೋಲ್ಡ್(bowled) ಆದವರ ಅಭಿಪ್ರಾಯ.

...ಎಲ್.ಚಂದ್ರಿಕಾ, ಹರಪನಹಳ್ಳಿ
...ಡನನ್ನು ಹತೋಟಿಯಲ್ಲಿಡಲು ಕಿವಿಯನ್ನೇ ಯಾಕೆ ...ಡಬೇಕು? ಜುಟ್ಟು ಕೈಯಲ್ಲಿದ್ದರೆ ಸಾಲದೆ?
* ನಾಗರಾಜ್‌ರವರು ಜುಟ್ಟು ಬೆಳೆಸಿರುವುದೇ ತಪ್ಪು ...ತ ನಾವು ಹೇಳಿದ್ವೀ ಅಂತ ಹೇಳಿ.

...ದು ಸಿದ್ದೇಗೌಡ, ಕಬ್ಬೇಹಳ್ಳಿ
...ಕ.ಪತ್ರಿಕೆಯಲ್ಲಿ ಕವಿತಾ-ಏನಿದರ ಗುಟ್ಟು ಚಾರ್ವಾಕರೇ?
* ...ಸಂಬದ್ಧ ಸಂಬ ಬಿಟ್ರೆ ಬರಿ ಅಂತಿದ್ದಾರೆ ಶಿವಸುಂದರ್.

...ದ್ಯಾಶ್ರೀ, ಸುರಪೂರ
...ಜಕಾರಣಿಗಳ ಹೊಟ್ಟೆಯನ್ನು ಕಸ್ಕಂಬಾಡಿ ಕಟ್ಟೆಗೆ ...ಲಿಸುವುದೇಕೆ?
* ಅಪ್ಪು ಹೂಳು ತುಂಬಿಕೊಂಡಿರುತ್ತೆ.

ಇಂದಿರಾ ಶ್ರೀಧರ್, ದಾವಣಗೆರೆ
ಕನ್ನಡ ಚಿತ್ರರಂಗ ಎಕ್ಕುಟ್ಟಿ ಹೋಗಿರುವುದಕ್ಕೆ ಕಾರಣ?
* ಪ್ರೇಕ್ಷಕನ ಜಾಣತನ.

ಎಚ್.ಸಿ. ಭಾಗ್ಯಕುಮಾರ್, ಬೆಂಗಳೂರು
ಮಗ ಪುಂಡ, ಅಪ್ಪ ಭಂಡ, ತಾತ?
* ದಂಡಪಿಂಡ.

ಎಂ.ಶಿವಕುಮಾರ್, ಕುಮಟಾ
'ಲಂಕೇಶ್' ಲೇಖನಗಳಿಗೂ, AK47ಗೂ ಇರುವ ವ್ಯತ್ಯಾಸವೇನು?
* ಇಲ್ಲಿ ನಕಲಿ ಎನ್‌ಕೌಂಟರ್‌ಗಳು ನಡೆಯುವುದಿಲ್ಲ.

ಅ.ರೆಡ್ಡಿ, ಬೆಂಗಳೂರು
ಅಪ್ಪ ಹಳ್ಳಿಯ ಮನೆಯಲ್ಲಿ ಉಂಡರೆ, ಮಗ ಹೋಟೆಲ್‌ನಲ್ಲಿ ಉಣ್ಣುತ್ತಾನಲ್ಲಾ?
* ಅದಕ್ಕೆ ಅನಿತಕ್ಕ ಈಗ 'ಕುಕಿಂಗ್ ಕ್ಲಾಸ್' ಸೇರಿದ್ದಾಳಂತೆ.

ಪಿ.ಅಷ್ಟಣ್ಣ ಪ್ರಭು, ಬೆಂಗಳೂರು
ಅಪರಾಧಿ ಎಂದು ಗೊತ್ತಿದ್ದರೂ ವಕೀಲರು ಅವರ ಪರ ವಾದ ಮಾಡುತ್ತಾರಲ್ಲಾ?
* ಅದು ಅಪರಾಧಿಯ ಕಿಸೆಯನ್ನು ಅವಲಂಬಿಸಿರುವ ಮರ್ಮ.

ಬಸವರಾಜ್ ಬೆಸ್ತರ್, ಗುಲ್ಬರ್ಗಾ
ಕವಿತಾ ಲಂಕೇಶ್‌ರ ಬರಹ ಓಕೆ, ಚೆಡ್ಡಿ ವಿ.ಕ.ದಲ್ಲಿ ಬರೆದದ್ದು ಯಾಕೆ?
* ವಿ.ಕ.ದಲ್ಲಿ ಒಮ್ಮೆ, ಪ್ರಜಾವಾಣಿಯಲ್ಲಿ 'ಮಾತಿನ ಮಲ್ಲಿ'ಯಾಗಿ ಹದಿನೈದು ದಿನಕ್ಕೊಮ್ಮೆ.

ಸುಫಿಯಾ ಬೇಗಂ, ದೇವದುರ್ಗ
ಪ್ರೀತಿಯ ಆಳ ಎತ್ತರಗಳು ಎಷ್ಟು?
* ಬೇಗಂ ಸಾಹಿಬಾ, ಆಳ-ಎತ್ತರ ಗೊತ್ತಿಲ್ಲ, ಆದರೆ ತಾಜ್‌ಮಹಲ್‌ಗಿಂತಲೂ ಸುಂದರ ಅಂತ ಗೊತ್ತು.

ಕೆ.ಶ್ರೀನಿವಾಸ್, ಮಂಡ್ಯ
ಅವಳ 'ಮಿಸ್ಡ್ ಕಾಲ್' ಕಾಟ ಹೆಚ್ಚಾಗಿದೆಯಲ್ಲಾ?
* ಮಿಸೆಸ್ ಆಗುವವರೆಗೂ 'ಮಿಸ್'ಡ್ ಕಾಲ್‌ಗಳು ಹಾಗೇನೆ.

ಎಸ್.ಶಶಿಧರ, ದೊಡ್ಡಬಾತಿ
ರಾಜ್ಯೋತ್ಸವ ಪ್ರಶಸ್ತಿ ಎಲ್ಲಿ ಸಿಗುತ್ತೆ?
* ಎಲ್ಲಾ 'ನ್ಯಾಯ' ಬೆಲೆ ಅಂಗಡಿಯಲ್ಲಿ ವಿತರಿಸುವಂತಾಗಬೇಕು ಎನ್ನುತ್ತಿದ್ದಾರೆ ಎಂ.ಪಿ. ಪ್ರಕಾಶು.

ಪಿ.ಎನ್.ಶ್ರೀವತ್ಸ, ಬೆಂಗಳೂರು
ಮಲಗಿಕೊಳ್ಳುವಾಗ ಆಗುವ ಸಂತೋಷ ಏಳುವಾಗ ಇರಲ್ವಲ್ಲಾ?
* ಹಾಸಿಗೆಯಲ್ಲಿ "ಬೆಚ್ಚ"ಗಿನ ಸಂತೋಷ ಅಷ್ಟು ಚೆನ್ನಾಗಿರುತ್ತೆ.

...ಿ.ಚಂದ್ರೇಗೌಡ, ಬೆಂಗಳೂರು
...ಣ್ಣಿಗೆ ಆನಂದಮಯ ಘಳಿಗೆ ಯಾವುದು?
* ಆ ಜಾಹೀಯರು ಅದೊಂದು ಗುಟ್ಟು, ಬಿಟ್ಟು ...ಟ್ಟಲ್ಲಿ ನೋಡಿ.


ಬಹುಮಾನಿತ ಪ್ರಶ್ನೆ

ಛೀ ತುಂಟಿ!

ಜಾತ್ರೆಯಲ್ಲಿ ತನ್ನ ಹೋರಿಯನ್ನು ಮಾರಲು ರೈತನೊಬ್ಬ ಬಂದಿದ್ದ. ತುಂಬಾ ಚೆನ್ನಾಗಿದ್ದ ಆ ಹೋರಿಯನ್ನು ಕಂಡು ಊರಿನ ಪಟೇಲ "ಏನ್ಲಾ ನಿನ್ನ ಹೋರಿ ತುಂಬಾ ಪಸಂದಾಗೈತಿ?" ಅಂದ.

"ಬರೀ ಪಸಂದಲ್ಲ ಗೌಡ್ರೆ, ಕನಿಷ್ಠ ಐದು-ಆರು ಬಾರಿ ಏರತೈತಿ" ಅಂದ ರೈತ.

ಇದನ್ನು ಪಕ್ಕದಲ್ಲೇ ಇದ್ದ ಪಟೇಲನ ಹೆಂಡತಿ ಕೇಳಿಸಿಕೊಂಡು "ನೀವೂ ಇದ್ದೀರಾ ಒಂದೇ ಬಾರಿಗೆ ಹೈರಾಣಾಗ್ತೀರಿ" ಎಂದು ಕೋಪದಿಂದ ಪಿಸುಗುಟ್ಟಿದಳು. ಪಟೇಲನಿಗೆ ಮುಜುಗರವಾಯಿತು. ಆದರೆ ತಕ್ಷಣವೇ ಚೇತರಿಸಿಕೊಂಡು,



"ಅಲ್ಲಾ ನಿನ್ ಹೋರಿ ಒಂದೇ ದನೀನ ಐದು ಬಾರಿ ಏರತೈತೋ ಅಥವಾ ಬೇರೆ ಬೇರೆ ದನೀನ ಏರತೈತೋ?" ಅಂತ ಕೇಳಿದ.

"ಬೇರೆ, ಬೇರೆ ದನೀನ ಗೌಡ್ರೆ" ಎಂದು ರೈತ ಉತ್ತರಿಸಿದಾಗ, ತನ್ನ ಹೆಂಡತಿಯತ್ತ ತಿರುಗಿದ ಪಟೇಲ, "ಕೇಳಿದ್ಯೇನೇ? ನಾನೂ ಹಂಗೇಯ" ಅಂದ.

ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ವಾರದ ಪ್ರಶ್ನೆ:

ಜನಕಂಟಕ ಸಿಎಂಗೆ ಶೃಂಗೇರಿಯಲ್ಲಿ ಕಟಂಕ ಪರಿಹಾರವಾಯ್ತಂತೆ?

ಈ ಬಾರಿಯ ನಿಮ್ಮ ಉತ್ತರ 'ಟೈ' ಆಗಿದೆ. ಈ ಮೂರೂ ಉತ್ತರಗಳು ಚೆನ್ನಾಗಿರುವುದರಿಂದ ಮೂವರಿಗೂ ಬಹುಮಾನ ನೀಡಲಾಗಿದೆ. ಕಂಗ್ರಾಟ್ಸ್!

ನವೆಂಬರ್ 1ರ ಸಂಚಿಕೆಯ ನಮ್ಮ ಪ್ರಶ್ನೆ: ಕನ್ನಡ ನಿರ್ಮಾಪಕರು ಇನ್ನು ಸಿನಿಮಾ ಮಾಡೋದಿಲ್ಲಂತೆ?

ನಿಮ್ಮ ಉತ್ತರ: 1. ಹಂಗಾದ್ರೆ ಅನಾಸಿನ್ ಕಂಪನಿಗಾಗೋ ನಷ್ಟಕ್ಕೆ ನಿರ್ಮಾಪಕರ ಸಂಘವೇ ಪರಿಹಾರ ನೀಡಲಿ. 2. 'ಎಲ್ಲಾದರೂ ಉಂಟಾ?' 'ಇನ್ನು' ಎಂಬ ಚಿತ್ರವನ್ನು ನಿರ್ಮಿಸುವುದಿಲ್ಲ ಎಂದಿದ್ದಾರೆ ಅಷ್ಟೇ. 3. ಇಷ್ಟು ದಿನ ಮಾಡಿ ಕಡಿದಿದ್ದಾದರೂ ಏನು?

ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು:
1. ರಾಮಚಂದ್ರ ಎಸ್. ಕುಲಕರ್ಣಿ, ಧಾರವಾಡ, 2. ಎ.ಕೆ. ಪದ್ಮನಾಭ, ಬೆಂಗಳೂರು, 3. ಪಿ.ಎನ್. ಶ್ರೀವತ್ಸ, ಬೆಂಗಳೂರು

ಒಬ್ಬ ನಿಷ್ಠ ಸ್ನೇಹಿತ ಸಾವಿರ ಸಂಬಂಧಿಗಳಿಗೆ ಸಮ -ಯುರಿಪಿಡಸ್

ಕೆಪಿಎಸ್‌ಸಿ:
ಕಳ್ಳರ ಕೂಟಕ್ಕೆ ಮತ್ತೆ ಮೂವರು!



ಮೂವರೇ ಮೂವರು ಮಹಾಶಯರು ಆರು ತಿಂಗಳಿಂದ ಇಂಟರ್‌ವ್ಯೂಗಳನ್ನು ಮಾಡುತ್ತಾ ಸರ್ಕಾರಿ ನೌಕರರ ನೇಮಕಾತಿ ಮಾಡುತ್ತಾ ಕುಳಿತಿದ್ದರು. ಕೆಪಿಎಸ್‌ಸಿ ಎಂಬ ಮಾಯಾ'ಬಜಾರ್'ಗೆ ಈಗ ಇನ್ನು ಮೂವರು ಮಹಾಶಯರು ಎಂಟ್ರಿ ಪಡೆದಿದ್ದಾರೆ. ಮತ್ತೆ ಇನ್ನೂ ಎರಡು ಸ್ಥಾನ ಹಾಗೆ ಖಾಲಿ ಬದ್ದಿವೆ.

'ಪಾಲು'ದಾರ ಪಕ್ಷಗಳಾದ ಬಜೆಪಿ, ಜೆಡಿಎಸ್ ತಮ್ಮ ಹಿಂಬಾಲಕರನ್ನು ಕೆಪಿಎಸ್‌ಸಿ ಒಳಕ್ಕೆ ತೂರಿಸಿವೆ. ಅಲ್ಪಸಂಖ್ಯಾತರ ಕೋಟಾದಿಂದ ಜೆಡಿಎಸ್ ರಿಯಾಜ್ ಅಹ್ಮದ್‌ರನ್ನು, ಬಜೆಪಿ ಇತರೆ ಹಿಂದುಳಿದ ವರ್ಗಗಳ ಕೋಟಾದಿಂದ ಡಾ. ಎಂ. ನಾಗರಾಜರನ್ನು, ಲಿಂಗಾಯತರ ಕೋಟಾದಿಂದ ರುದ್ರೇಗೌಡರನ್ನು ಮೆಂಬರ್ಸ್ ಮಾಡಿವೆ. ಇವತ್ತಿಗೂ ಕೆಪಿಎಸ್‌ಸಿಗೆ ಮೆಂಬರ್ ಆಗಲು ಸೂಕ್ತ ಅರ್ಹತೆಯನ್ನು ನಿಗದಿಗೊಳಿಸಿಲ್ಲ! ಆ ಕಾಲದಿಂದಲೂ ರಾಜಕೀಯ ಪಕ್ಷಗಳು ತಮಗೆ ಬೇಕಾದವರನ್ನು ಆರಿಸುತ್ತಾ ಬಂದಿವೆ. ಸಮೃದ್ಧ ಹುಲ್ಲುಗಾವಲಾದ ಕೆಪಿಎಸ್‌ಸಿಯ ಮೆಂಬರ್ ಆಗಲು ಸ್ಪರ್ಧೆಯೇ ನಡೆಯುತ್ತದೆ. ಹಣದ ಥೈಲಿ ಹಿಡಿದು ಬಂದವರಿಗೆ ಮಣೆ ಖಚಿತ. ಅಲ್ಲಿಗೆ ಸಂದರ್ಶನಕ್ಕೆ ಬರುವ ಅಭ್ಯರ್ಥಿಗಳ ಹಣೆಬರಹ ಹೇಗೆ ನಿರ್ಧರಿತವಾಗುತ್ತದೆ ಈ ಮಾಯಾ 'ಬಜಾರ್'ನಲ್ಲಿ ಎಂಬುದು ಎಲ್ಲರಿಗೂ ಗೊತ್ತಿರುವ 'ಗೌಪ್ಯ' ಸತ್ಯ.

ಈಗ ಈ ಮೂವರು ಬಂದೇಟಗೇ ವಿವಾದವೊಂದು ಹುಟ್ಟಿಕೊಂಡಿದೆ. ತರಾತುರಿಯಲ್ಲಿ ನೇಮಕಗೊಂಡ ಹೊಸ ಸದಸ್ಯರು 4 ನೇ ತಾರೀಖು ಸಂಜೆ ಹೊತ್ತಿನಲ್ಲಿ ಪ್ರಮಾಣವಚನ ಸ್ವೀಕರಿಸಿದ್ದಾರೆ. ಈಗ ತೋಟಗಾರಿಕಾ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರ ನೇಮಕಾತಿಗಾಗಿ ನಡೆಯುತ್ತಿರುವ ಸಂದರ್ಶನದಿಂದ ಈ ಮೂವರನ್ನು ಹೊರಗಿಟ್ಟಿದ್ದು ವಿವಾದವಾಗಿದೆ. ಈಗ ಒಕ್ಕಲಿಗರ ಕೋಟಾದಿಂದ ಬಂದ ಅಧ್ಯಕ್ಷ, ಎಚ್.ಎನ್. ಕೃಷ್ಣ ದಲಿತ ಕೋಟಾದ ದಾಸಪ್ಪ, ಹಿಂದುಳಿದ ಕೋಟಾದ ವೆಂಕಟಸ್ವಾಮಿ ಈ ಮೂವರಷ್ಟೇ ಇಂಟರ್‌ವ್ಯೂ ಮಾಡುತ್ತಿದ್ದಾರೆ. ಯಾವ ಜಾತಿಯವರಿಗೂ ಅನ್ಯಾಯವಾಗಬಾರದೆಂದೇ ಎಲ್ಲ ಜಾತಿಗಳಿಗೂ ಪ್ರಾಧಾನ್ಯತೆ ನೀಡಿ ಸದಸ್ಯರನ್ನು ಆರಿಸಲಾಗುತ್ತದೆ. ಈಗ ಮೂವರು ಸದಸ್ಯರನ್ನು ಹೊರಗಿಟ್ಟು ಸಂದರ್ಶನ ನಡೆಸುತ್ತಿರುವುದು ಅನುಮಾನಗಳಿಗೆ ಆಸ್ಪದ ಮಾಡುತ್ತದೆ. ಎಚ್.ಎನ್. ಕೃಷ್ಣ ದಾಸಪ್ಪ, ವೆಂಕಟಸ್ವಾಮಿಗಳು ಈ ಮೊದಲೇ ನೇಮಕಾತಿಯ ದೀಲು ಮುಗಿಸಿಕೊಂಡಿರುವುದರಿಂದ ಹೊಸ ಸದಸ್ಯರನ್ನು ಹತ್ತಿರಕ್ಕೆ ಬಿಟ್ಟುಕೊಂಡಿಲ್ಲ, ಹಸಿವಿನ ಹೊಸ ಸದಸ್ಯರು ಸುಮ್ಮನಿರುತ್ತಾರೆಯೇ? ಅವರು ಬಜೆಪಿಯ ಶಾಸಕರಾದ ಕೆ.ಎಸ್. ಕಿರಣ್‌ಕುಮಾರ್, ಎಂ.ಪಿ. ರೇಣುಕಾಚಾರ್ಯರ ಮೂಲಕ ಇದಕ್ಕೆ ವಿರೋಧ ವ್ಯಕ್ತ ಮಾಡಿದ್ದಾರೆ.


ಆಂದಂತೆ ಈ ಸಲ ಯಡಿಯೂರಪ್ಪನವರ' ಮನುಷ್ಯನಾಗಿ ಒಳಬಂದಿರುವ ಶಿವಮೊಗ್ಗದ ಸಾದರ ಲಿಂಗಾಯತ ರುದ್ರೇಗೌಡ ಬಿಸಿನೆಸ್‌ಮ್ಯಾನ್! ಇದು ಹೊಸ ಸಂಪ್ರದಾಯ! ಒಟ್ಟಿನಲ್ಲಿ ಕೆಪಿಎಸ್‌ಸಿ ಎಂಬ 'ಬಜಾರ್'ನಲ್ಲಿ ಎಂದಿನಂತೆ ಬ್ಯುಸಿನೆಸ್ ಜೋರಾಗಿಯೇ ನಡೆಯಲಿದೆ.

ಉಳಿದ ಸ್ಥಾನಗಳಿಗೆ ಅರ್ಹರನ್ನು ತುಂಬಿ, ನೇಮಕಾತಿಗಳಲ್ಲಿ ಪಾರದರ್ಶಕತೆ ಬರುವಂತೆ ಈ ಸರ್ಕಾರ ಮಾಡುವುದೆಂದು ನಿರೀಕ್ಷಿಸೋದೇ ದಡ್ಡತನ. ಸರ್ಕಾರವೇ ಒಂದು ಕಳ್ಳರ ಗುಂಪಾಗಿರುವಾಗ, ನೇಮಕಾತಿ ಎಂಬುದೇ ಹಲವರಿಗೆ ಆದಾಯವಾಗಿರುವಾಗ ಉದ್ಯೋಗಾಕಾಂಕ್ಷಿಗಳನ್ನು ಕಾಪಾಡುವವರಾರು?

-ಮಲ್ಲಿ


ಕಬಡ್ಡಿ ಬಾಬು ಅಭಿಮಾನಗಳ ಸಂ

ಸದಸ್ಯರಿಂ
ಅಧ್ಯಕ್ಷನ ಹತ್ಯೆ



ಈತನ ಗುರು ಬೊಮ್ಮನ್ ಶ್ರೀನಾಥ್. ಈತ ಕಬಡ್ಡಿ ಬಾಬು ಅಭಿಮಾನಿಗಳ ಸಂಘದ ಅಧ್ಯಕ್ಷ. ಕೊಂದ ರೌಡಿಗಳಾದ ಲೋಕಿ, ದಿನಿ ಮತ್ತು ಕೇಬಲ್ ಮೂರ್ತಿ ಸದ್ಯ ತಲೆ ಮರೆಸಿಕೊಂಡಿದ್ದಾರಾದರೂ ಇವರೆಲ್ಲರೂ ಒಂದಾನೊಂದು ಕಾಲಕ್ಕೆ ಒಟ್ಟಿಗಿದ್ದವರೆ.

ಸದ್ಯ ಹೊಸಕೆರೆ ಹಳ್ಳಿಯ ದತ್ತಾತ್ರೇಯ ನಗರ, ಇಟ್ಟಮಡು, ವೆಂಕಟಪ್ಪ ಲೇಔಟ್, ರಾಘವೇಂದ್ರ ಲೇಔಟ್ ಮುಂತಾದ ಏರಿಯಾಗಳ ದಲಿತರ ಕಾಲೋನಿಗಳೆಲ್ಲ ಆಂಧ್ರದ ಚಿತ್ತೂರು ಮೂಲದ ನೆಲಗಳ್ಳರ ವಸಾಹತುಗಳಂಥಾಗಿವೆ. ಕತ್ರಿಗುಪ್ಪೆ ಮುನಿರಾಜು, ಇಟ್ಟಮಡು ಬಾಬು, ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಇವರ ಬಾಮೈದ ಬಾಬು ನಾಯ್ಡು, ಕೌನ್ಸಿಲರ್ ಶ್ರೀನಿವಾಸ್; ಹೀಗೆ ಆಂಧ್ರ ಮೂಲದ ಭೂಕಂಟಕರಿಗೆಲ್ಲ ಯಾರದೋ ಸೈಟಿಗೆ ಬೇಲಿ ಹಾಕಲು, ಇನ್ನಾರದೋ ಸೈಟನ್ನು ಆಕ್ರಮಿಸಲು ಇಂಥ ಕಾಲೋನಿ ಹುಡುಗರೇ ಕಾಲಾಳುಗಳು. ಸಂಜೆಯಾದರೆ ಬಾರು. ಬೆಳಿಗ್ಗೆಯಾದರೆ ರೋಲ್‌ಕಾಲ್. ಇದೇ ಇವರ ದಿನಚರಿ.



ಈ ಪೈಕಿ ಹೊಸಕೆರೆ ಹಳ್ಳಿ ಕೆರೆಕೋಡಿಯ ಬ್ರಾಹ್ಮಣರ ಪುಂಡ ಶ್ರೀನಾಥ್ ಎಂಬಾತನೇ ಕಬಡ್ಡಿ ಬಾಬು ಪಡೆಯಲ್ಲಿ ಕಾಣಿಸಿಕೊಂಡ ಮೊದಲ ಆಸಾಮಿ. ಈತನ ಜೊತೆ ಗುರು ಎಂಬಾತನೂ ಸೇರಿಕೊಂಡ. ಈತ ತನ್ನ ತಮ್ಮ ನರಸಿಂಹ ಮೂರ್ತಿ ಉರ್ಫ್ ಮೂರ್ತಿಯನ್ನು ಕಬಡ್ಡಿಬಾಬುಗೆ ಪರಿಚಯಿಸಿಕೊಟ್ಟ. ಬರುಬರುತ್ತ ಮೂರ್ತಿಯ ಹಾವಳಿ ವಿಪರೀತವಾಗಿ 2002 ರಲ್ಲಿ ಗಿರಿನಗರ ಪೊಲೀಸರು ಆತನ ರೌಡಿ ಷೀಟ್ ತೆರೆದರು. ಹಾಗಿದ್ದೂ ಮೂರ್ತಿಯನ್ನು ತನ್ನ ಡ್ರೈವರ್ ಆಗಿಟ್ಟುಕೊಂಡೇ ಇದ್ದ ಕಬಡ್ಡಿ ಬಾಬು ಆತನ ಹಾವಳಿ ವಿಪರೀತವಾದಾಗ ಇಲ್ಲಿಗೆ ಆರು ತಿಂಗಳ ಹಿಂದೆ 'ಇನ್ನು ನನಗೆ ಮುಖ ತೋರಿಸಬೇಡ' ಎಂದು ದೂರಕ್ಕಿಟ್ಟಿದ್ದ.

ಈ ಮಧ್ಯೆ ಹೊಸಕೆರೆಹಳ್ಳಿ ಪಕ್ಕದ ವೆಂಕಟಪ್ಪ ಲೇಔಟಿನಲ್ಲಿ ಉಮೇಶ್ ಉರ್ಫ್ ಉಮಿ ಎಂಬ

ಮರಿರೌಡಿ ಚಿಗುರಿಕೊಂಡ. ಈತನ ಶಿಷ್ಯನೇ ಕ
ಮಂಜ. ಇವನಿಗೂ ಮೂರ್ತಿಗೂ ದೋಸ್ತಿ
ಆದೇ ಹೊತ್ತಿಗೆ ಇದೇ ಹೊಸಕೆರೆಹಳ್ಳಿಯ ದತ್ತಾ
ನಗರ ಎಂಬ ಕೊಂಪೆಯಲ್ಲಿ ಮತ್ತೊಬ್ಬ ರೌಡಿ
ಎಂಬಾತ ಹುಟ್ಟಿಕೊಂಡ. ದಿನಿ ಉರ್ಫ್ ದಿನೇಶ
ಘಾತಕ ಮತ್ತು ಕೇಬಲ್ ಸೀನ ಎಂಬ ಕಿಡಿಗೇ
ಈತನ ಎಡಗೈ ಬಲಗೈಗಳಾದರು. ಪ್ರಾರ
ಎಲ್ಲರೂ ಸೇರಿಕೊಂಡೇ ಕಬಡ್ಡಿ ಬಾಬು ಅಭಿಮಾ
ಸಂಘ ಹುಟ್ಟುಹಾಕಿದ್ದಾರಾದರೂ ಒಂದೆರಡು
ಬೇಲಿ ಹಾಕಿದ್ದ ದುಡ್ಡೂ ಕಾಸಿನ ಹಂಚಿಕೆಯಲ್ಲಿ
ಗ್ಯಾಂಗಿಗೂ ಶ್ರೀನಾಥನ ತಂಡಕ್ಕೂ ಹೊಡೆದಾಟವಾ

ಬರುಬರುತ್ತ ಲೋಕಿ, ದಿನಿ ಗ್ಯಾಂಗ್

ಅನಾಹುತಕಾರಿಯ್ಾಯಿತೆಂದರೆ, ನರಗುಂದ ಪಾ
ಕಾಲೇಜಿನ ಎದುರು ಅಡ್ಡೆ ಹಾಕಿ ಹೋಗಿ
ನಾರ್ಥಿ ಹುಡುಗಿಯರನ್ನು ಪೀಡಿಸುತ್ತಿತ್ತು.
ವರ್ಷದ ಹಿಂದೆ ವೆಂಕಟಪ್ಪ ಲೇಔಟಿನ ಮೇಲೆ
ಬಂದ ಲೋಕಿ ತನ್ನನ್ನು ಗುರಾಯಿಸಿದ ಎಂದು
ಶಿಷ್ಯನೊಬ್ಬನನ್ನು ಬಡಿದ.

ಆದಕ್ಕೆ ಉಮಿ ಇಲ್ಲಿಗೆ ತಿಂಗಳ ಹಿಂದೆ ಮೆ
ತುಂಬ ಹುಡುಗರನ್ನು ಹಾಕಿಕೊ
ದತ್ತಾತ್ರೇಯನಗರದ ಮೇಲೆ ದಂಡಯಾತ್ರೆ
ಕೈಗೆ ಸಿಕ್ಕಿದ ಲೋಕಿ ಶಿಷ್ಯ ಪುನೀತ್ ಎಂಬ
ಕೊಂದು ಹಾಕಿದ. ಕೊಲೆ ಕೇಸಿನಲ್ಲಿ ಫಿಟ್ಟಾಗಿ
ಮತ್ತು ಕೊರಂಗು ಮಂಜ ಜೈಲು ಪಾ
ಗೆಳೆಯನ ಸೇಡನ್ನು ತನ್ನ ಕೈಗೆತ್ತಿಕೊಂಡ
ಪದೇ ಪದೇ ದತ್ತಾತ್ರೇಯ ನಗರದ ಮೇ
ಮಾಡಿ ಮೊದಲು ಲೋಕಿಯ ಮನೆ ಖಾಲಿ ಮಾ

ಸೆಕ್ರೆಟರಿ ಕೊಲೆಯಾಗಿದ್ದಾನೆ. ಅಧ್ಯಕ್ಷ ಆಸ್ಪತ್ರೆ ಸೇರಿದ್ದಾನೆ. ಕೊಂದ ಸದಸ್ಯರಿಗಾಗಿ ಪೋಲೀಸರು ಹೊಸಕೆರೆಹಳ್ಳಿ, ಇಟ್ಟಮಡು, ಕತ್ರಿಗುಪ್ಪೆ, ಬನಶಂಕರಿಯ ಗಲ್ಲಿಗಳನ್ನು ಜಾಲಾಡುತ್ತಿದ್ದಾರೆ. ಇದು ಕಬಡ್ಡಿ ಬಾಬು ಅಭಿಮಾನಿಗಳ ಸಂಘದ ಕತೆಯೂ ಹೌದು ದುರಂತವೂ ಹೌದು.

ಕಬಡ್ಡಿ ಬಾಬು ಉರ್ಫ್ ಪ್ರಸಾದ್ ಬಾಬು ಮುಖ್ಯಮಂತ್ರಿಯ ಪರಮಾಪ್ತ. ಅವರ ಹಲವಾರು ವ್ಯವಹಾರಗಳ ನಿಗೂಢ ಪಾರ್ಟ್‌ನರ್. ಹೇಗೂ ಮುಂದಿನ ಚುನಾವಣೆಗೆ ದೇಶದ ಅತಿದೊಡ್ಡ ವಿಧಾನ ಸಭಾ ಕ್ಷೇತ್ರವಾದ ಉತ್ತರಹಳ್ಳಿ ಎರಡಾಗುತ್ತಿದೆ. ಈ ಪೈಕಿ ಉತ್ತರಹಳ್ಳಿ, ಬನಶಂಕರಿ, ಇಟ್ಟಮಡು ಮತ್ತು ಹೊಸಕೆರೆಹಳ್ಳಿ ಭಾಗದ ಒಂದು ಕ್ಷೇತ್ರಕ್ಕೆ ನಿಂತು ಎಮ್ಮೆಲ್ಲೇಯಾಗಿ ಮುಂದೊಮ್ಮೆ ಮಂತ್ರಿಯಾಗುವುದು ಆತನ ಸದ್ಯದ ಗುರಿ. ಜೊತೆಗೆ ಕೇಬಲ್ ಧಂದೆಯಿದೆ. ಬೇಕಾಬಿಟ್ಟಿ ರಿಯಲ್ ಎಸ್ಟೇಟ್ ದೀಲುಗಳಿವೆ. ಇದೆಲ್ಲವನ್ನೂ ಒಟ್ಟೊಟ್ಟಿಗೆ ನಿಭಾಯಿಸುವುದಕ್ಕೆ ಹುಡುಗರ ಹಿಂಡೂ ಇದೆ. ಹಾಗೇ ಕಬ್ಬಡಿ ಬಾಬು ಕೃಪಾಕಟಾಕ್ಷಕ್ಕೆ ಈಡಾದ ಹೊಸಕೆರೆಹಳ್ಳಿಯ ಹುಡುಗರ ಪೈಕಿ ಶ್ರೀನಾಥ, ನಟರಾಜ ಮತ್ತು ನರಸಿಂಹಮೂರ್ತಿ ಎಂಬ ಪರಮ ಭಕ್ತರು ಹುಟ್ಟುಹಾಕಿದ್ದೇ ಕಬಡ್ಡಿಬಾಬು ಅಭಿಮಾನಿಗಳ ಸಂಘ.




ವಿ. ನರಸಿಂಹಮೂರ್ತಿ

ಬಾಬು ಜನಪ್ರಿಯ ನಟನಲ್ಲ. ಎಮ್ಮೆಲ್ಲೆಯಾಗುವುದು ಒತ್ತಟ್ಟಿಗಿರಲಿ ಕೌನ್ಸಿಲರ್ ಕೂಡ ಆಗಲಿಲ್ಲ. ಸ್ವಾತಂತ್ರ ಹೋರಾಟಗಾರನೂ ಅಲ್ಲ, ಅಭಿಮಾನಕ್ಕೆ ಇನ್ನೆಂಥ ಕಾರಣವಿದ್ದೀತು?

ಅದೇ ಕಾರಣಕ್ಕೆ ಸಂಘದ ಕಾರ್ಯದರ್ಶಿ ನರಸಿಂಹಮೂರ್ತಿ ಉರ್ಫ್ ಮೂರ್ತಿ ಎಂಬಾತನನ್ನು ಆಕ್ಟೋಬರ್ 30 ರ ಬೆಳಗ್ಗೆ ಆತನ ವೈರಿ ಗುಂಪು ನಡುರಸ್ತೆಯಲ್ಲಿ ಕೊಚ್ಚಿ ಹಾಕಿದೆ. ಈ ಮೂರ್ತಿ ಗಿರಿನಗರ ಪೊಲೀಸ್ ಠಾಣೆಯ ಹಳೇ ರೌಡಿ ಷೀಟರ್.


96ರ ಜಿಎಸ್‌ಎಸ್ ತಾಯಿ

ನಮ್ಮ ಜಿಎಸ್‌ಎಸ್ ಈಗ ರಾಷ್ಟ್ರಕವಿ. ಈ ಗೌರವ ಸಂದ ಕಾರಣಕ್ಕೆ ಕನ್ನಡ ಸಾಹಿತ್ಯಲೋಕ ಸಂತಸ ವ್ಯಕ್ತಪಡಿಸಿದೆ. ಯಾರೊಬ್ಬರಿಂದಲೂ ಈವರೆಗೆ ಕೊಂಕು ಟೀಕೆ ಪ್ರಕಟವಾಗಿಲ್ಲ. ಈ ಸಮನ್ವಯ ಕವಿಯ ಶಕ್ತಿ ಇರುವುದೇ ಇಲ್ಲ. ಕನ್ನಡದ ಒಂದು ತಲೆಮಾರಿನ ಸತ್ವಶಾಲಿ ಲೇಖಕರೆಲ್ಲಾ ತಮ್ಮ ಮಹತ್ ಕೃತಿಗಳನ್ನು ಜಿಎಸ್‌ಎಸ್‌ಗೆ ಅರ್ಪಿಸಹಿದ್ದಾರೆ. ಹಣ್ಣಾಗುತ್ತಿರುವ ದೇಹದ ಮಾಗಿದ ಅನುಭವದ ಜಿಎಸ್‌ಎಸ್ ಅಭ್ಯುದಯವನ್ನು ನೋಡಿ ಸಂತೋಷಪಡುತ್ತಿರುವ ಅವರ ತಾಯಿ ಶಾಂತ ವೀರಮ್ಮ 96 ವರ್ಷ ತುಂಬದ್ದರೂ ಇನ್ನೂ ಗಟ್ಟಿಮುಟ್ಟಾಗಿದ್ದಾರೆಂದರೆ ಎಲ್ಲರಿಗೂ ಅಚ್ಚರಿಯಾಗಬಹುದು.



ತನ್ನ ಮಗನಿಗಿಂತಲೂ ಗಟ್ಟಿ ಮುಟ್ಟಾಗಿದ್ದು ಹೊಳಪು ಕಣ್ಣಿನಿಂದ ನಗುನಗುತ್ತ ಮಾತನಾಡುವ ಶಾಂತ ವೀರಮ್ಮನವರ ಪ್ರಸ್ತಾಪ ಈವರೆಗೂ ಎಲ್ಲೂ ಆಗಿಲ್ಲ.

96 ರ ಜಿಎಸ್‌ಎಸ್ ತಾಯಿ



ಗುಗ್ಗರಿ ಶಾಂತವೀರಪ್ಪ ಶಿವರುದ್ರಪ್ಪ ತಾಯಿ ಶಾಂತವೀರಮ್ಮರೊಂದಿಗೆ ಭೇಟಿ ಆದದ್ದು ಇಲ್ಲಿದೆ. ಇವತ್ತು ಚಿತ್ರದುರ್ಗದಲ್ಲಿರುವ ಜಿಎಸ್‌ಎಸ್ ಸಹೋದರಿ ಜಿ.ಎಸ್. ಗಿರಿಜಾರ
ಅವರ ತಾಯಿ ಶಾಂತವೀರಮ್ಮರನ್ನು 'ಲಂಕೇಶ್' ಮಾತಾಡಿಸಿತು.

ಮಗನಿಗೆ ಪ್ರಶಸ್ತಿ ಬಂದಿದ್ದನ್ನು ಟೀವಿಯಲ್ಲಿ ನೋಡಿ ತುಂಬ ಖುಷಿ
ಶಾಂತ ವೀರಮ್ಮ 'ಅವರಪ್ಪ ಬದುಕಿದ್ರೆ ತುಂಬಾ ಸಂತೋಷಗ
ಎಂದು ಕ್ಷಣ ಮೌನವಾದರು. ಮೂಲತಃ ಹೊಳಲ್ಕೆರೆಯವರಾದ ಶಾಂತ
ಓದು ಬರಹ ಗೊತ್ತಿಲ್ಲ. ಮಗ ಬರೆದಿದ್ದನ್ನು ಓದಿದ್ದೀರಾ ಎಂದರೆ
ಬರೆದಿದ್ದಾನೊ ಗೊತ್ತಿಲ್ಲ. ಚೆನ್ನಾಗಿ ಬರೀತಾನೆ ಅಂತಾ ಎಲ್ರೂ ಹೇಳ್ತಾರೆ
ಕನ್ನಡಕ ಹಾಕಿಕೊಂಡರು. 'ಚಿಕ್ಕವನಿದ್ದಾಗ ತಮಾಷೆಯಾಗಿ ಏನೇನೋ
ಅದೇನೇನೋ ಬರೀತಾನೂ ಇದ್ದ. ಊರಿಗೆ ಬರ ಬಂದು, ನಮ್ಮ
ಅನ್ನೋದು ಇರಲಿಲ್ಲ. ನಾವು ತುಮಕೂರು ಜಿಲ್ಲೆಯ ಅಕ್ಕಿರಾಮಪು



ಬಿ.ಎಸ್. ಶ್ರೀನಾಥ್

ಆನಂತರ ದಿನಿ ಮತ್ತು ಕೇಬಲ್ ಸೀನನನ್ನೂ ಏರಿಯಾ ಬಿಡಿಸಿದ.

ಮೂರ್ತಿಯ ಕಾಟಕ್ಕೆ ಹೆದರಿ ಮುನೇಶ್ವರ ಬ್ಲಾಕಿನಲ್ಲಿ ಅಡ್ಡೆ ಹಾಕುತ್ತಿದ್ದ ಲೋಕಿ ಗ್ಯಾಂಗಿಗೂ ಮೂರ್ತಿ ಶ್ರೀನಾಥರ ತಂಡಕ್ಕೂ ಇಲ್ಲಿಗೆ ತಿಂಗಳ ಹಿಂದೆ ಚೋಳ ಎಂಬಾತ ರಾಜಿ ಮಾಡಿಸಿದ್ದಾನೆ. ಇಬ್ಬರೂ ಸೇರಿ ಯಾವುದೋ ಲ್ಯಾಂಡ್ ಡೀಲಿಗೆ ಕೈಯಿಟ್ಟಿದ್ದಾರೆ. ಬಂದ ದುಡ್ಡಿನಲ್ಲಿ ಮೂರ್ತಿ ಲೋಕಿಗೆ ನಾಲ್ಕೂವರೆ ಲಕ್ಷ ಕೊಡಬೇಕಿತ್ತು. ಅದಕ್ಕೆಂದು ಲೋಕಿ ತನ್ನ ಹುಡುಗ ತೇಜಸ್‌ನನ್ನು ಮೂರ್ತಿಯ ಜೊತೆಗೇ ಬಿಟ್ಟಿದ್ದ. ಸೋಮವಾರ ಬೆಳಿಗ್ಗೆ ನಾಲ್ಕೂವರೆ ಲಕ್ಷ ಕೊಡಬೇಕಿದ್ದ ಮೂರ್ತಿ ಅದಕ್ಕೂ ಕೈ ಎತ್ತುತ್ತಾನೆಂದು ಲೋಕಿಗೆ ಮಾಹಿತಿ ಸಿಕ್ಕಿದೆ. ಟಾಟಾ ಸುಮೋ ಒಂದರಲ್ಲಿ ಲೋಕಿ, ದಿನಿ, ಕೇಬಲ್ ಮೂರ್ತಿ ಮುಂತಾದವರು ಹೊಸಕೆರೆಹಳ್ಳಿಗೆ ಬಂದಿದ್ದಾರೆ. ಹೇಗೂ ರಾಜಿಯಾಗಿದೆಯಲ್ಲ ಎಂದು ಲೋಕಿ ಹುಡುಗನನ್ನು ತನ್ನ ಬೈಕಿನಲ್ಲಿ ಕೂಡ್ರಿಸಿಕೊಂಡು ಏಕಾಂಗಿಯಾಗಿ ಬರುತ್ತಿದ್ದ ಮೂರ್ತಿಯ ಬೈಕ್‌ಗೆ ಸುಮೋ ಗುದ್ದಿದೆ. ಕೆಳಕ್ಕೆ ಬಿದ್ದ ಮೂರ್ತಿಯನ್ನು ಲೋಕಿ ಗ್ಯಾಂಗ್ ಕೊಚ್ಚಿ ಹಾಕಿದೆ.

ಯಾವತ್ತು ಮೂರ್ತಿ ಕೊಲೆಯಾಗಿದ್ದು ಗೊತ್ತಾಯಿತೋ ಗುರು ಶ್ರೀನಾಥ ನೂರಾರು ಹುಡುಗರನ್ನು ಸೇರಿಸಿ ಇಡೀ ಹೊಸಕೆರೆಹಳ್ಳಿಯಲ್ಲಿ ಧಾಂದಲೆ ಮಾಡಿದ್ದಾನೆ. ಲೋಕಿಯನ್ನು ಬೆಂಬಲಿಸುತ್ತಾನೆಂದು ಪಾಪರಾಜು ಎಂಬ ಜೆಡಿಎಸ್ ಕಾರ್ಯಕರ್ತರನ್ನು ಹೊಡೆಯಲು ಹೋಗಿ ಆತನ ಹುಡುಗರಿಂದ ಒದೆ ತಿಂದು ಈಗ ಶ್ರೀನಾಥನೂ ಆಸ್ಪತ್ರೆ ಸೇರಿದ್ದಾನೆ.

ಕೊಂದ ಅಭಿಮಾನಿ ಸಂಘದ ಸದಸ್ಯರ ಬೆನ್ನು ಹತ್ತಿದ ಪೊಲೀಸರಿಗೆ ಕನ್‌ಫ್ಯೂಜನ್. ಏಕೆಂದರೆ ಕೊಂದವರು ಮತ್ತು ಕೊಲೆಯಾದವನು ಎಲ್ಲರೂ ಕಬಡ್ಡಿ ಬಾಬು ಅಭಿಮಾನಿ ಸಂಘದವರೆ. ಒಂದೇ ಬೋರ್ಡಿನಲ್ಲಿ ಮುಖ್ಯಮಂತ್ರಿ ಕುಮಾರಸ್ವಾಮಿ, ಕಬಡ್ಡಿ ಬಾಬು, ಆಸ್ಪತ್ರೆ ಸೇರಿದ ಶ್ರೀನಾಥ ಮತ್ತು ಕೊಲೆಯಾದ ಮೂರ್ತಿ ಎಲ್ಲರ ಫೋಟೋಗಳೂ ಒಟ್ಟೊಟ್ಟಿಗೇ ಹೊಸಕೆರೆ ರಿಂಗ್ ರಸ್ತೆಯಲ್ಲಿ ನೇತಾಡುತ್ತಿದೆ.

ಕಬಡ್ಡಿ ಬಾಬು ಅಭಿಮಾನಿಗಳ ಸಂಘ ಎಂದರೆ ಇದೇನಾ?

-ರಾ. ಸೋಮನಾಥ್

ಸಿದ್ಧಗಂಗಾಮಠದ ಹೈಸ್ಕೂಲ್‌ಗೆ ಸೇರ್ಸಿದಿವಿ.... ಮೈಸೂರಲ್ಲಿ ಶಿವರುದ್ರಪ್ಪ ಓದುವಾಗ ಅವನ ತಂದೆ 'ಬಹಳ ಚೆನ್ನಾಗಿ ಓದ್ತಾನೆ ನೋಡು' ಎಂದು ಆನಂದಗೊಳ್ಳುತ್ತಿದ್ದರು...' ಎಂದು ಹೇಳಿದರು.

ಮಗನಿಗಿಂತ ನೀವೇ ಗಟ್ಟಿಯಾಗಿದ್ದೀರಲ್ಲ ಎಂದು ಕೇಳಿದೆವು. ಒಂದಿಷ್ಟು ನಕ್ಕು ಮಾತಾಡಿದ ಶಾಂತ ವೀರಮ್ಮ 'ಅವನಿಗೆ 2 ಸಾಲ ಆಪರೇಷನ್ ಆಯ್ತಲ್ಲ... ಅದಕ್ಕೇ... ಹೆಚ್ಚು ತಿರುಗಾಡಬೇಡ ಅಂತಾ ನಾನೇ ಹೇಳಿದ್ದೆ ಅವನಿಗೆ' ಎಂದು ಹೇಳಿ, ತೀರಿಹೋದ ತಮ್ಮ ಇನ್ನೊಬ್ಬ ಮಗ ಜಿ.ಎಸ್. ರಾಜಶೇಖರರನ್ನು ನೆನೆಸಿಕೊಂಡು ಅತ್ತರು.

ಚಿತ್ರದುರ್ಗ, ದಾವಣಗೆರೆ, ಬೆಂಗಳೂರಲ್ಲಿರುವ ಏಳು ಜನ ಹೆಣ್ಣುಮಕ್ಕಳ ಮನೆಗಳಲ್ಲಿ ಶಾಂತ ವೀರಮ್ಮ ವಾಸ್ತವ್ಯ ಮಾಡುತ್ತಾರೆ.

ಎಲ್ಲ ಮಕ್ಕಳಿಗೂ ಓದಿಸಿದ ಹೆಮ್ಮೆ ಅಕ್ಷರಸ್ಥೆ ಶಾಂತವೀರಮ್ಮನವರಿಗಿದೆ. ಅವರೊಂದಿಗೆ ಮಾತನಾಡುತ್ತಲೇ ಇರಬೇಕೆನ್ನಿಸುತ್ತದೆ. ಅವರು ಹೀಗೆ ನಗುನಗುತ್ತಾ ಆರೋಗ್ಯವಾಗಿರಲೆಂದು 'ಲಂಕೇಶ್' ಆಶಿಸುತ್ತದೆ.

-ಅಹೋಬಳಪತಿ

ವಟ್ಟಿಗೆ ಅನ್ನ ತಿನ್ನೋರು ಮಾಡೊ ಕ್ಯಲಸಲ್ಲ ಇದು!



ರಾಜ್ಯೋತ್ಸವ ಪ್ರಶಸ್ತಿ ವಿಷಯದಲ್ಲಿ ಕುಮಾರಸ್ವಾಮಿಗಳು ಏಕಪಕ್ಷೀಯವಾಗಿ ನಡೆದುಕೊಂಡಿದ್ದೂ ಅಲ್ಲದೆ ಒಂದು ಡಜನ್ ಒಕ್ಕಲಿಗರನ್ನೇ ಆಯ್ಕೆ ಮಾಡಿಕೊಂಡಿದ್ದಾರೆಂದು ಎಡೂರಪ್ಪನ ಪರಿವಾರದ ಗೂಡಾರದಲ್ಲಿ ಗದ್ದಲ ಎದ್ದಿದೆ ಯಂತಲ್ಲಾ, ಇದನ್ನು ಕೇಳಿಸಿಕೊಂಡ ಚಲುವರಾಯಸ್ವಾಮಿ, ಮತ್ತೊಮ್ಮೆ ಕುಮಾರಣ್ಣನಿಗೆ ಆತ್ಮೀಯನಾಗಲು ಯತ್ನಿಸುತ್ತಾ "ನೋಡಣ್ಣ ಎಡೂರಪ್ಪ ಏನೇನೊ ಬಾಯಿಗೆ ಬಂದಂಗೆ ಮಾತಾಡ್ತಾಯಿದ್ದನಂತೆ. ಪ್ರಶಸ್ತಿ ವಿಷಯದಲ್ಲಿ ಜಾತಿ ಮಾತಾಡ್ತಾಯಿದ್ದನಂತೆ" ಎಂದ ಕೂಡಲೇ ಕೆಂಡಮಂಡಲವಾದ ಕುಮಾರ ಸ್ವಾಮಿಗಳು "ಅದ್ಯಾವ ಸೀಮೆ ಎಡೂ ರಪ್ಪನ್ರಿ, ಅವನ ಜಾತಿಗೆ ನಾನೇನು ಅನ್ಯಾಯ ಮಾಡಿದ್ದಿನಿ? ರಾಷ್ಟ್ರಕವಿ ಪ್ರಶಸ್ತಿನ ಇವುರ ಜಾತಿಗೆ, ಅದೂ ಇವುರೂರೋರಿಗೆ ಕೊಟ್ಟಿದ್ದಿನಿ. ಅದು ಗೊತ್ತಾ? ನಾವು ಮನಸು ಮಾಡಿದ್ರೆ ನಮ್ಮ ಜಾತಿಗೆ ರಾಷ್ಟ್ರಕವಿ ಪ್ರಶಸ್ತಿ ಕೊಡಬವುದಿತ್ತು. ನಮ್ಮಲ್ಲು ಬೇಕಾದಷ್ಟು ಜನ ರಾಷ್ಟ್ರಕವಿಗಳಿರ ಲಿಲ್ಲವೆ" ಎಂದು ರೇಗಿದರಂತಲ್ಲಾ. ಆಗ ಚೆಲುವರಾಯಸ್ವಾಮಿ "ಹೌದು ಕಣಣ್ಣ ನಮ್ಮಲ್ಲೂ ಇದ್ರು. ಕಾಳೇಗೌಡ, ರಾಜೇ ಗೌಡ, ರಾಮಚಂದ್ರೇಗೌಡ, ನಲ್ಲೂರ್ ಪ್ರಸಾದ್, ಜವರೇಗೌಡ. ಏನು ಪಸಿ ಜನಿದ್ರೆ ಇವುರನ್ನೆಲ್ಲಾ ಬಿಟ್ಟು ನಾವು ಶಿವರುದ್ರಪ್ಪನವರಿಗೆ ಕೊಟ್ರು ಹಿಂಗೆ ತಕರಾರು ತಗಿತರಲ್ಲಾ, ಇನ್ನಮೇಲೆ ನಾವು ಯಾವುದ್ಕೂ ಕೇರ್ ಮಾಡಬಾರ್ದು" ಎಂದು ಕುಮಾರನನ್ನು ಸಮಾಧಾನಪಡಿಸಿದನಂತಲ್ಲಾ, ಥೂತ್ತೇರಿ!

* * * * * *

ನಮ್ಮ ಆರಕ್ಷಕರ ದಕ್ಷ ಮಂತ್ರಿ ಎಂ.ಪಿ. ಪ್ರಕಾಶ್, ಕುಮಾರಸ್ವಾಮಿ ಮಗನ ಕೃತ್ಯವನ್ನು ಬಾಲಾಪರಾಧಕ್ಕೆ ಸೇರಿಸಿ ದೇವೇಗೌಡರ ಮೆಚ್ಚುಗೆಗೆ ಪಾತ್ರರಾಗಿದ್ದಾರಂತಲ್ಲಾ. ಇದೇ ಕೆಲಸವನ್ನು ಮಾಡಿದ ಬಿದ್ದಪ್ಪನ ಮಗನನ್ನು ಬಂಧಿಸಿ ಶಿಕ್ಷಿಸುವಲ್ಲಿ ಹೆಚ್ಚು ಮುತುವರ್ಜಿ ವಹಿಸಿ ದಕ್ಷತೆ, ಪ್ರಾಮಾಣಿಕತೆಯೆಂದು ಮೆರೆದ ಪ್ರಕಾಶ್‌ಗೆ ಬಿದ್ದಪ್ಪನ ಹುಡುಗನ ವಯಸ್ಸಿನ ನಿಖಿಲ್‌ದು ಬಾಲಾಪರಾಧವಾಗಿ ಕಂಡಿರುವುದಕ್ಕೆ ಇಡೀ ಪೊಲೀಸ್ ಇಲಾಖೆ ಬಿದ್ದುಬಿದ್ದು ನಗುತ್ತಿದೆಯಂತಲ್ಲಾ. ಪ್ರಕಾಶ್ ಅಭಿಪ್ರಾಯ ಕೇಳಿದ ಡಿಕೆಶಿ ಕಡೆಯವರು "ಅಲ್ರೀ ಆ ಹುಡುಗ ಈಗಾಗ್ಲೆ ಮಾಡಿರೊ ಕೆಲಸನಾ ವಯಸ್ಕರೂ ಮಾಡಕ್ಕಾಗಲ್ಲ. ಸಮವಯಸ್ಕರನ್ನು ಮೀರಿ, ಕರ್ನಾಟಕದ ಸಮಸ್ಯೆಯಾದ ಹುಡುಗನ ಕೃತ್ಯಗಳನ್ನು ಬಾಲಾಪರಾಧಕ್ಕೆ ಸೇರಿಸಿರುವ ಪ್ರಕಾಶ್‌ಗೆ ಬಾಲಗೃಹ ಕಾಟ ತಪ್ಪಿದಲ್ಲ ಬಿಡಿ" ಎಂದರಂತಲ್ಲಾ, ಥೂತ್ತೇರಿ!!

ಕುಮಾರಸ್ವಾಮಿ ಮಗ ಮಾಡಿದ ಕೆಲಸಕ್ಕೆ ತಮ್ಮ ಮಗನ ಫೋಟೋ ಪ್ರಕಟಿಸಿದ ಮಾಧ್ಯಮದವರ ಮೇಲೆ ರೇವಣ್ಣ ಶ್ಯಾನೇ ಸಿಟ್ಟಾಗಿದ್ದಾರೆಂಬ ವಾರ್ತೆ ಬಂತಲ್ಲಾ, ಕೂಡಲೇ ರೇವಣ್ಣನವರನ್ನು ಸಮಾಧಾನ ಮಾಡಬೇಕೆನಿಸಿ ಫೋನ್ ಮಾಡಿದರೆ ಸಿಕ್ಕಿಬಿಟ್ಟರು!

"ಹಲೋ ಸಾರ್, ನಾನು ಯಾಹೂ ಮಾತಾಡ್ತಯಿ ರೋದು."

"ಅದೆ ಪೇಪರ್‌ನವುರೇನ್ರೀ?"

"ಹೌದು ಸಾರ್."

"ಅಲ್ಲ ಕಂಡ್ರೀ, ವಟ್ಟಗೆ ಅನ್ನ ತಿನ್ನೊ ಮನುಸ್ರು ಇಂತ ಕ್ಯಲಸ ಮಾಡದಿಲ್ಲ."

"ಖಂಡಿತ ನಿಜ ಸಾರ್. ಅನ್ನ ತಿನ್ನೋರು ಮನಿಗೋಗಿ ಒಂದು ಪಾವಕ್ಕಿಯ ಸ್ಟೌಮೇಲಿಟ್ಟು, ಅನ್ನ ಮಾಡಿಕಂಡು, ಉಪ್ಪೊ, ಉಪ್ಪಿನ ಕಾಯನೋ ಹಾಯ್ಕಂಡು ತಿಂದು ಮನಿಕತ್ತರೆ. ಅದು ಬುಟ್ಟು ಪಾಪ ಹೋಟ್ಲು ಸಪ್ಲೆಯರ್‌ಗಳಿಗೆ ವದದು, ತಾನೂ ಗೂಸ ತಿಂದು ಪೊಲೀಸ್ ಸ್ಟೇಷನ್ನಿಗೋಗಿ ಕಂಪ್ಲೇಂಟು ಕೊಡ್ತಿರಲಿಲ್ಲ, ಅಲ್ಲವೆ?"

"ಆದಾಯ್ತಲ್ರೀ ಹೂಸಿದೋಳ್ಯಾರು ಅಂದ್ರೆ ಮಾಸಲ ಸೀರ್‍ಯೊಳು ಅಂದಂಗೆ ಆ ಹುಡುಗ ಮಾಡಿರೊದ್ಕೆ ನಮ್ಮುಡಗನ ಪೋಟಾ ಹಾಕ್ತಿರಲ್ಲಾ, ಇದು ಸರಿನೇನ್ರಿ? ತಪ್ಪಲವೇನ್ರಿ?"

"ತಪ್ಪು ಅಂತ ನಾವಿನ್ನು ಹೇಳಿಲ್ಲ ಸಾರ್."

"ಯಾಕೇಳಿಲ್ಲಾ?"

"ನೀವು ಅಪ್ಪ ಮಕ್ಕಳು, ನಿಖಿಲ್ ಮಾಡಿರದು ತಪ್ಪು ಅಂದಾಗ ನಾವು ಅವುನ ಪೋಟಾ ಬಿಟ್ಟು ಇವುನ ಪೋಟಾ ಹಾಕಿರದು ತಪ್ಪು ಅಂತ ಒಪ್ಪಿಗತ್ತಿವಿ."

"ಇದ್ಯಾವ ಸೀಮೆ ನ್ಯಾಯ ಸ್ವಾಮಿ ನಿಮ್ಮದು? ಮಾಡದೆ ಯಿರೊ ತಪ್ಪ ಮಾಡ್ಯವುನೆ ಅಂತ ಬರಿತಿರಿ. ಅದೂ ನಮ್ಮ ಹುಡುಗನ ಪೋಟಾ ಹಾಕಿ."



"ಅಂಗಾದ್ರೆ ನಿಖಿಲ್ ತಪ್ಪು ಮಾಡಿಲವೆ?"

"ಅಲ್ಲ ಕಂಡ್ರಿ, ಎಷ್ಟು ಸತಿ ಹೇಳಬೇಕು ನಿಮಿಗೆ. ನಿಖಿಲ್ ಊಟ ಮಾಡಿ ಮನಿಗಿದ್ದ. ಯಾವನೊ ಊಟ ಸಿಗದೋನು ಅವುನ್ನ ಎಳಿಸಿಗಂಡೋಗಿ ಹೋಟ್ಲಲ್ಲಿ ಗಲಾಟ ಮಾಡಿದ್ರೆ ಅದು ನಮ್ಮ ಹುಡುಗನ ತಪ್ಪಾ?"

"ಖಂಡಿತ ತಪ್ಪಲ್ಲ ಸಾರ್."

"ಮತ್ತೆ ಅದ್ಯಂಗೆ ನಮ್ಮುಡಗನ ಪೋಟಾ ಹಾಕಿ ಬರದ್ರಿ?"

"ನೋಡಿ ರೇವಣ್ಣನವರೆ, ಅದೇನೊ ಪತ್ರಕರ್ತರಿಗೆ ತುಂಬಾ ಕುತೂಹಲದ ಫ್ಯಾಮಲಿ ನಿಮದು. ಇಲಿತ್ಲಾಡ ಗೊತ್ತೆ ನಿಮಿಗೆ?"

"ಗೊತ್ತು ಕಣೇಳ್ರಿ, ಗದ್ದೆ ವಲದ ಬದಿನಲ್ಲಿರತವೆ."

"ತ್ಲಾಡ ಈಚೆಗೆ ಬಂದು ಇಡೀ ವಲದಲ್ಲೆಲ್ಲ ತಿರುಗಾಡಿ ತೆನೆಗಿನೆ ಹೊತ್ಗಂಡು ಗೂಡಿಗೋದಾಗ ಅದೊಂದೆ ತ್ಲಾಡ ಅಂತ ತಿಳಕೊಂಡಿದ್ವೊ. ಆನಂತರ ಒಂದು ಮರಿನೂ ಜೊತೆಲಿ ಬಂತು. ಓಹ್ ಹೋ, ಒಂದು ಮರಿನೂ ಇದೆ ಅನ್ನಕಂಡೊ. ಅಮ್ಯಾಲೆ ಇನ್ನೊಂದು, ಬತ್ತು ಹಿಂಗೆ, ನಾಕುಮರಿ ಬಂದಾಗ ತ್ಲಾಡನ ಸಂಸಾರ ದೊಡ್ಡದು ಅಂತ ಗೊತ್ತಾಯ್ತು, ಈಗ ನೋಡಿದ್ರೆ ಮರಿಗಳಿಗೆ ಮರಿಗಳು, ಆ ಮರಿಗಳಿಗೆ ಮರಿಗಳು, ಹಿಂಗೆ ಒಂದು ಮಂದೆನೆ ಇದ್ದು, ಹೊಲ ಪೂರಾ ಮೇಯ್ತಾ ಅವೆ ಅಂತ ಗೊತ್ತಾಯ್ತು."

"ಇದ್ಯಾವ ಕತೆನ್ರಿ, ಒಂಚೂರು ಗೊತ್ತಾಯ್ತಾಯಿಲ್ಲಾ?"

"ನಿಮ್ಮನೆ ಕತೆ ಸಾರ್, ಅಷ್ಟೂ ಗೊತ್ತಾಗದಿಲ್ಲವೆ? ದೇವೇಗೌಡ್ರಿಗೆ ರೇವಣ್ಣ ಒಬ್ಬನೇ ಮಗ ಅನ್ನಕಂಡಿದ್ವೊ. ವಿಧಾನಸೌಧದ ಸುತ್ತ ಜನ ಸೇರಿಸಿ, ಹೆಗಡೆ ಕಡಿಕೆ ಮೆಟ್ಟು ಬೀಸಿದಾಗ ಗೊತ್ತಾಯ್ತು ಕುಮಾರಸ್ವಾಮಿ ಅಂತ ಅವುನೆ ಅಂತವ, ಅಮ್ಯಾಲೆ ಬಾಲಕೃಷ್ಣೇಗೌಡವ್ನೆ ಅಂತ ಸುದ್ದಿ ಬತ್ತು, ಅಂಗೆ ರಮೇಶನ ವೃತ್ತಾಂತ ಈಚೆಗೆ ಬತ್ತು."

"ಅದಾಯ್ತಲ್ರೀ, ಈಗ ನೀವು ಮಾಡಿರೊ ತಪ್ಪೇಳ್ರೀ?"

"ಅದೆ ಸಾರ್. ನಿಮ್ಮ ಮನೇಲಿ ಪ್ರಜ್ವಲ್ ಅಂತ ಅವುನೆ, ಅವುನು ಒಳ್ಳೆ ಹುಡುಗ ಅಂತ ನಮಿಗೇನು ಗೊತ್ತು? ಈಗ ನೀವು ಮಾಡಬೇಕಾಗಿರೋದೇನು ಅಂದ್ರೇ, ಸಚಿವ ಸಂಪುಟದ ಪೋಟಾ ಹಾಕ್ತರಲ್ಲ ಅಂಗೆ ನಿಮ್ಮ ಮಕ್ಕಳ ಪೋಟಾ ಪೆಪ್ರಿಗಾಕ್ಸಿ ಯಾರು ಯಾರ್ಯಾರ ಮಕ್ಕಳು, ಅವು ಏನು ಮಾಡ್ತವೆ ಅಂತ ಬಯೋಡೇಟಾ ಪ್ರಕಟಿಸಿದ್ರೆ, ಪಾಪ ಪ್ರಜ್ವಲನಿಗಾದ ಅನ್ಯಾಯ ಯಾರಿಗೂ ಆಗದಿಲ್ಲ. ಆ ಪ್ರಜ್ವಲನ ತಾಯಿ ತುಂಬಾ ಒಳ್ಳೆ ಹೆಣ್ಣುಮಗಳಂತೆ. ಆಕೆ ಒಳ್ಳೆಯವಳಾದ ಕಾರಣಕ್ಕೆ ಒಳ್ಳೆ ಮಗ ಹುಟ್ಟಿದಾನಂತೆ."

"ಅಂಗಾದ್ರೆ ಅವುರಪ್ಪ ನಾನು ಕೆಟ್ಟೋನೇನ್ರಿ?"

"ನೀವು ಕೆಟ್ಟೋರು ಅಂತ ನಾನೆಲ್ಲೇಳಿದೆ ಸಾರ್?

"ಮತ್ತೆ ನನ್ನೆದ್ರಿ ಮಾತ್ರ ಒಳ್ಳೊಳು, ಅದ್ಕೆ ಪ್ರಜ್ವಲ ಒಳ್ಳೆ ಹುಡುಗ ಅಂತ ನನಿಗೆ ಕೇಳಂಗೆ ಹೇಳ್ತಾಯಿದ್ದಿರಲ್ರೀ?"

"ನಿಜ ಸಾರ್, ಈಗ್ಲು ಅದೇ ಮಾತೇಳ್ತಿನಿ. ಆದ್ರೆ ನನ್ನ ಬಾಯಿಲಿ ಬರೊ ಮಾತು ದೇವೇಗೌಡ್ರ ಬಾಯಿಲಿ ಬಂದಿಲ್ಲ."

"ನಮ್ಮ ತಂದೆ ವಿಷಯ ಯಾಕ್ರಿ ಈಗ?"

"ಗೌಡ್ರ ಮೂಲವ್ಯಾಧಿ ಪರಿಣಾಮ ಸಾರ್ ಇವೆಲ್ಲಾ, ಅವುರು ನೀವೆಲ್ಲಾ ಕೆಟ್ಟವರು ಅಂತ ಒಪ್ಪಿಗಂಡಾಗಿದೆ."

"ಎಲ್ಲೊಪ್ಪಿಗಂಡವುರೆ?"

"ಮಹಾತ್ಮರ ಮನೆಲಿ ಇಂತವೆಲ್ಲಾ ಸಾಮಾನ್ಯ ಘಟನೆ ಅಂತ ಮಹಾತ್ಮಾಗಾಂಧಿ ಮಗನೆ ಕುಡಿತಿದ್ದ ತಿಂತಿದ್ದ, ಗಾಂಧಿಗೆ ತಿರುಗಿಬದ್ದಿದ್ದ ಅಂತ ಹೇಳಿ ತಮ್ಮನ್ನ ಮಹಾತ್ಮಾ ಗಾಂಧಿಗೆ ಒಲಿಸಿ ಕೊಂಡವುರೆ ಗೊತ್ತ?"

"ಒಲಿಸಿಕೊಳ್ಳಿ ಬಿಡ್ರಿ, ನಮ್ಮಪ್ಪ ತಂದೆ ಪ್ರಧಾನಿಯಾಗಿದ್ರು. ಗಾಂಧಿಮುತ್ತ ಏನಾಗಿದ್ರು? ಕಾಂಗ್ರೆಸ್ ಪ್ರಸಿಡೆಂಟೂ ಆಗಿರಲಿಲ್ಲ!"

"ಥೂತ್ತೇರಿ!!!"

-ಯಾಹೂ

ಹಕ್ಕಿಗೆ ಗೂಡಿದ್ದಂತೆ, ಜೇಡಕ್ಕೆ ಬಲೆಯಿದ್ದಂತೆ, ಮನುಷ್ಯನಿಗೆ ಸ್ನೇಹ...-ಲಾರ್ಡ್ ಬೈರನ್

ತೋಪು!

ನಟರ ನಖರ-ನಿರ್ಮಾಪಕ ಪೆಕರ-ಪ್ರೇಕ್ಷಕ ಬಖರ!

ಹಿರಿಯ ನಟ ರವಿಚಂದ್ರನ್‌ಗೇ ಆಟಕಾಯಿಸಿಕೊಂಡು ಹಿಂಸೆ ಕೊಟ್ಟಿರುವ ರೀಮೇಕ್ ನಿರ್ಮಾಪಕರಾದ ಮೈಸೂರಿನ ಗಣೇಶ ಹಾಗೂ ಹಾಸನದ ಪ್ರವೀಣ ಇವರಿಬ್ಬರೂ ರವಿಚಂದ್ರನ್ ಅಭಿಮಾನಿಗಳಿಂದ ಗೂಸಾ ಬೀಳುವುದು ಸ್ವಲ್ಪದರಲ್ಲೇ ತಪ್ಪಿಹೋಗಿದೆ.

ಶನಿವಾರ ಬೆಳಗ್ಗೆ ಗಾಂಧಿನಗರದಲ್ಲಿದ್ದ ಗಣೇಶ್ ಆಫೀಸಿಗೆ ನುಗ್ಗಿದ ನೂರಾರು ರವಿ ಅಭಿಮಾನಿಗಳು ಕೈಗೆ ಸಿಕ್ಕಿದ್ದನ್ನೆಲ್ಲಾ ರವಿ ಸ್ಟೈಲಿನಲ್ಲೇ ಪೀಸ್ ಪೀಸ್ ಮಾಡಿ ಹೋಗಿದ್ದಾರೆ.

ತಮ್ಮ ಗಾಂಚಾಲಿಗಳೇ ಇದಕ್ಕೆ ಕಾರಣ ಎಂದು ಚೆನ್ನಾಗಿ ಗೊತ್ತಿದ್ದರೂ ಸಹ ಗಣೇಶ ಈಗ 'ಕಾರ್ಮಿಕರ ಸಂಘದ ಅಶೋಕ್ ಕೆಲಸ ಇದು' ಎಂದು ಚೀರಿಕೊಳ್ಳುತ್ತಿದ್ದಾನೆ. ಈ ಘಟನೆಗೆ ಕೆಲ ಸಮಯ ಮೊದಲೇ ಅಶೋಕ್ 'ಚಲನಚಿತ್ರ ಕಾರ್ಮಿಕರ ಮೇಲೆ ನಿತ್ಯ ದೌರ್ಜನ್ಯ ನಡೆಸುತ್ತಿರುವ ಹತ್ತು ಜನ ನಿರ್ಮಾಪಕರ ಸಿನಿಮಾಗಳಲ್ಲಿ ನಾವು ಕೆಲಸ ಮಾಡಲ್ಲ' ಎಂದು ಏಕಪಕ್ಷೀಯ ಬಹಿಷ್ಕಾರ ಅನೌನ್ಸ್ ಮಾಡಿಬಿಟ್ಟಿದ್ದರು. ಇನ್ನು ಹೇಳಬೇಕೆಂದರೆ ಅಶೋಕ್ ಹೀಗೆ ಹೇಳುವ ಸ್ವಲ್ಪ ದಿನ ಮೊದಲು ಬಹಿಷ್ಕಾರಕ್ಕೊಳಗಾದ ಇದೇ

ಬಳಿದಾಳೆ ಈಶ

ಹತ್ತು ನಿರ್ಮಾಪಕರು 'ನಾವು ಇನ್ನು ಒಂದು ವರ್ಷ ಯಾವುದೇ ಸಿನಿಮಾ ನಿರ್ಮಿಸಲ್ಲ' ಎಂದು ಘೋಷಿಸಿ ಬಿಟ್ಟಿದ್ದರು. ಆದರೆ ಕನ್ನಡ ಪ್ರೇಕ್ಷಕ ಮನರಂಜನೆಗೆ ಸಿನಿಮಾ ನೋಡುತ್ತಿದ್ದನೇ ವಿನಃ ಜನಸಾಮಾನ್ಯರ ಹೊಟ್ಟೆಬಟ್ಟೆ ಪ್ರಶ್ನೆ ಸಿನಿಮಾ ಜೊತೆ ಲಿಂಕ್ ಆಗಿಲ್ಲವಲ್ಲ, ಹಾಗಾಗಿ ಜನ ನಿರ್ಮಾಪಕರ ಗೋಳುಗಳ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ.

ಅವರು ನಿರ್ಮಿಸಿದ್ದ ಡಜನ್‌ಗಟ್ಟಲೇ ರೀಮೇಕ್ ಸಿನಿಮಾಗಳು ಸಾಲುಸಾಲಾಗಿ ತೋಪಾಗಿದ್ದೇ ಅವರ ಈ ತೀರ್ಮಾನಕ್ಕೆ ಕಾರಣವಾಗಿತ್ತು. ಕೇವಲ 2006 ರ ಲೆಕ್ಕಾಚಾರದಲ್ಲಿ ಹೇಳಬೇಕೆಂದರೂ, ತೋಪಾಗಿರುವ ಸಿನಿಮಾಗಳು ಒಟ್ಟಾರೆ ಇಂಡಸ್ಟ್ರಿಗೆ 50 ಕೋಟಿ ಲಾಸು ಮಾಡಿವೆ.

ಆದರೆ ಇದಕ್ಕೆ ಯಾರು ಹೊಣೆ? ಏನು ಕಾರಣ ಎಂದು ಚೆಕ್ ಮಾಡಿಕೊಳ್ಳುವಷ್ಟು ಸಹನೆ ಯಾರಲ್ಲೂ



ಕನ್ನಡ ಸಿನಿಮಾಗಳು ಸಾಲುಸಾಲಾಗಿ ತೋಪಾಗುತ್ತಿವೆ. ಇದಕ್ಕೆ ಹೀರೋಗಳೇ ಕಾರಣ ಎನ್ನುತ್ತಿದ್ದಾರೆ ರೀಮೇಕ್ ನಿರ್ಮಾಪಕರು. ತಲೆ-ಬುಡ ಇದರ ಕತೆ ಆರಿಸುವ ನಿರ್ಮಾಪಕರೇ ಹೊಣೆ ಎಂಬ ವಾದ ನಟರದ್ದು. ಆದರೆ ಅಸಲಿ ವಿಷಯ ಇವೆರಡರಿಂದಾಚೆ ಇದೆ. ನಖರಾ ಮಾಡುವ ನಟರು, ಪೆಕರು ನಿರ್ಮಾಪಕರ ರಾದ್ಧಾಂತದಲ್ಲಿ ಬಖರಾ ಆಗಲು ಒಪ್ಪದ ಪ್ರೇಕ್ಷಕ ಪ್ರಭುವೇ ಇದಕ್ಕೆ ಕಾರಣ, ಅರ್ಥಾತ್ ಕೆಟ್ಟ ರೀಮೇಕ್ ಚಿತ್ರಗಳನ್ನು ಕನ್ನಡ ಪ್ರೇಕ್ಷಕ ಮುಲಾಜಿಲ್ಲದೆ ತಿರಸ್ಕರಿಸುತ್ತಾನೆ.





ಪ್ರವೀಣ್ ಮತ್ತು ಗಣೇಶ್

ಕಂಡುಬರುತ್ತಿಲ್ಲ.

ಇನ್ನು ಫಿಲಂ ಚೇಂಬರ್‌ನಲ್ಲಿ ಈಗ ನಿರ್ಮಾಪಕ ರದ್ದೇ ಮೇಲು ಆಗಿರುವುದರಿಂದ ಸಮಸ್ಯೆ ಬಗೆ ಯುವ ಬದಲಾಗಿ ಇನ್ನಷ್ಟು ಬಿಗ ಯಿಸಿಕೊಳ್ಳುವಂತೆ ಕಾಣುತ್ತಿದೆ.

ಊಟಿಯಲ್ಲಿ ಯುಗಾದಿ ಗಲಾಟೆ

ಪಾಂಡುರಂಗ ವಿಠಲ ನಿರ್ಮಿ ಭಾರಿ ಲಾಸ್ ಮಾಡಿಕೊಂಡ ಗಣೇಶ-ಪ್ರವೀಣ ಹೇಗಾದರೂ ಮಾ ಕಳಕೊಂಡಿದ್ದ ದುಡ್ಡನ್ನು ಸಿನಿಮಾದ ದುಡಿಯಲು ನಿರ್ಧರಿಸಿ ಯುಗಾ ಶುರು ಮಾಡಿದ್ದರು. ಈ ಸಿನಿಮಾಗ ಸೌಂದರ್ಯ ಕನ್‌ಸ್ಟ್ರಕ್ಷನ್‌ನ ಜಗದೀ ಹಾಗೂ ಫೈನಾನ್ಸರ್ ಸ್ವಸ್ತಿಕ್ ಶಂಕ ಹತ್ತಿರ ಗಣೇಶ್-ಪ್ರವೀಣ ಮೊದ ಕಂತಿನಲ್ಲೇ ಐವತ್ತು ಲಕ್ಷ ಸಾ ಈಸಿಕೊಂಡು ತಂದಿದ್ದರು. ಆದರೆ ಹೀರೋ ರವಿಚಂದ್ರನ್‌ಗೆ ಒಪ್ಪಿಕೊಂಡಿ ದ್ದಷ್ಟು ದುಡ್ಡು ಕೊಡದೆ ಊಟಿಗೆ ಶೂಟಿಂಗ್‌ಗೆ ಬರು ದುಂಬಾಲು ಬಿದ್ದಿದ್ದರು. ಅಕ್ಟೋಬರ್ 24 ರಿಂದ ಶುರುವಾಗಬೇಕಿದ್ದ ಯುಗಾದಿ ಶೂಟಿಂಗ್ ಈ ದುಡ್ಡಿನ ಜಗ್ಗಾಟಕ್ಕೆ ಸಿಕ್ಕು ಕೊನೆಗೆ ರವಿ ಊಟಿಗೆ ಹೊರಟದ್ದು 25 ಆದರೆ '27 ರ ಬೆಳಗ್ಗೆ 9 ಗಂಟೆಗೆ ನಾನು ಚೆನ್ನೈಗೆ ಹೋಗಲೇಬೇಕು ಎಂದು ರವಿ ಮೊದಲೇ

ನಟರ ನಖರಾಗಳು

ಕೆಲವು ಕನ್ನಡ ಸಿನಿಮಾ ಹೀರೋಗಳ ಅಹಂ ಎಷ್ಟಿದೆಯೆಂದರೆ ಕತೆ ಏನು, ಸಿನಿಮಾ ಹೇಗೆ ಬರಬೇಕು, ನಿರ್ಮಾಪಕನಿಗಿರುವ ರಿಸ್ಕ್ ಎಷ್ಟು... ಒಂದೂ ಕೇರ್ ಮಾಡಲ್ಲ. ಜೊತೆಗೆ ಸ್ಟೇಟಸ್ಸು, ಇಮೇಜ್, ಲೆವೆಲ್ಲುಗಳೆಂಬ ನಖರಾಗಳು ಬೇರೆ.

ಉಪ್ಪಿಗೆ 'ರುಪೀಸ್' ನಿರ್ಮಾಪಕರಿಗೆ ಚೊಂಬು

ಈ ಉಪೇಂದ್ರನ್ನೇ ತಗೊಳ್ಳಿ. ಸಿನಿಮಾ ಒಂದಕ್ಕೆ ನಲವತ್ತು ಲಕ್ಷದ ತನಕ ಡಿಮ್ಯಾಂಡ್ ಮಾಡುವ ಉಪ್ಪಿ ಕಳೆದ ಎರಡು ಮೂರು ವರ್ಷದಲ್ಲಿ ಒಂದು ಡಜನ್ ತೋಪು ಸಿನಿಮಾ ಕೊಟ್ಟಿದ್ದಾನೆ. ನಿರ್ದೇಶಕನ ಕೆಲಸದಲ್ಲಿ ಮೂಗು ತೂರಿಸೋದು, ಡೈಲಾಗ್ ಬದಲಾಯಿಸೋದು, ತಿಕ್ಕಲು ತಿಕ್ಕಲು ಐಡಿಯಾಗಳನ್ನು ಹುಡುಕಿ ನಿರ್ಮಾಪಕನ ತಲೆ ಬೋಳಿಸೋದರಲ್ಲಿ ಉಪ್ಪಿ ಪ್ರವೀಣ. ಧನರಾಜ್ H_2O ಗೆ ಹಣ ಹಾಕಿ ಲಾಸಾದರಲ್ಲ, ಆ ಸಿನಿಮಾ ಮಾಡಲು ದೂರದ ರಾಜಸ್ಥಾನಕ್ಕೆ ಹೋಗಿದ್ದ ಉಪ್ಪಿ ನೂರಾರು ಕುದುರೆ, ಭಾರಿ ಪ್ಲಾನುಗಳು, ನೂರಾರು ಎಕ್ಸ್‌ಟ್ರಾಗಳನ್ನೆಲ್ಲಾ ರಾಶಿ ಹಾಕಿಕೊಂಡು ಧನರಾಜ್‌ಗೆ ಕೋಟಿಗಟ್ಟಲೆ ಖರ್ಚು ಮಾಡಿಸಿಬಿಟ್ಟರು. ಆದರೆ H_2O ನೆಲಕಚ್ಚಿತು. ಇದರಿಂದ ಧನರಾಜ್ ದಿವಾಳಿಯಾದರೂ ಉಪ್ಪಿಗಂತೂ ಲಾಭವೇ ಆಯಿತು. ಪ್ರಿಯಾಂಕ ಸಿಕ್ಕಳು. ಹಾಗೇನೇ ನಿರ್ಮಾಪಕರ ಜೇಬು ಖಾಲಿ ಮಾಡಿಸಿದ ದುಡ್ಡಲ್ಲೇ 'ಸುಮ್ಮನೆ' ಎಂಬ ಮನೆ 'ರುಪ್ಪೀಸ್' ಎಂಬ ರೆಸಾರ್ಟ್ ಕಟ್ಟಿಸಿಕೊಂಡು ಉಪ್ಪಿ ಹಾಯಾಗಿದ್ದಾನೆ. ಉಪ್ಪಿ ಮಾತು ಕೇಳಿದ ಬಹುತೇಕ ನಿರ್ಮಾಪಕರು ಇವತ್ತು ದಿವಾಳಿಯಾಗಿದ್ದಾರೆ. ಉಪ್ಪಿ ಪ್ರತಿಭೆ ಬಗ್ಗೆ ಇನ್ನೊಂದು ಸಿಕ್ರೇಟ್ ಇದೆ. ಉಪ್ಪಿ ಜೊತೆ ಡಾಕ್ಟರ್ ಮಿತ್ರನೊಬ್ಬನಿದ್ದು ಆತ ಇರೋವರೆಗೂ ಉಪ್ಪಿ ಮುಟ್ಟಿದ್ದೆಲ್ಲಾ ಚಿನ್ನವಾಗಿತ್ತು. ಅವನ ಸತ್ತ ನಂತರ ಉಪ್ಪಿ ಈಗ ಮುಟ್ಟಿದೆಲ್ಲಾ ಮಣ್ಣೆ. ಹಾಗಾಗಿ ಉಪ್ಪಿಗೆ ನಿಜಕ್ಕೂ ಸ್ವಂತ ಟ್ಯಾಲೆಂಟ್ ಇತ್ತಾ-ಇಲ್ಲವಾ ಎಂಬ ಬಗ್ಗೆ ಉದ್ಯಮದವರಿಗೇ ಡೌಟು ಬಂದುಬಿಟ್ಟಿದೆ.



ಬೋರಿಂಗ್ ಫಿಲಾಸಫರ್

ನಿರ್ಮಾಪಕರನ್ನು ಆಟ ಆಡಿಸುವ ನಟರಲ್ಲಿ ವಿಷ್ಣು ಸಹ ಇದ್ದಾರೆ. ಮಾತಿಗೆ ಮುನ್ನ ಬೋರಿಂಗ್ ಫಿಲಾಸಫಿ ತೊದಲುವ ವಿಷ್ಣು ಶೂಟಿಂಗ್‌ಗೆಂದು ಹೊರಟರೆ ಬೆಂಜ್ ಕಾರೇ ಬೇಕು ಎನ್ನುತ್ತಾರೆ. ದಿನ ಎಂಟು ಸಾವಿರ ಬಾಡಿಗೆ ಕೊಟ್ಟು, ವಿಷ್ಣುವನ್ನು ಬೆಂಜ್‌ನಲ್ಲಿ ಒಂದು ತಿಂಗಳು ಓಡಾಡಿಸಿದರೆ ಅವರ ಖರ್ಚೇ ಎರಡೂವರೆ ಲಕ್ಷ ದಾಟುತ್ತದೆ. ಇಷ್ಟು ಸಾಲದೆಂಬಂತೆ ಡ್ರೈವರ್ ಬಾಟಾ, ಮೇಕಪ್ಪು, ಕಾಸ್ಟ್ಯೂಂ ಡಿಸೈನರ್ ವಿಷ್ಣುನ ಮಗಳಾದ್ದರಿಂದ ಅವಳ ಖರ್ಚು ಸಪರೇಟ್ ಎಂತಲೂ ನಿರ್ಮಾಪಕರಿಗೆ ಕತ್ತರಿ ಬೀಳುತ್ತದೆ.





ದುಡ್ಡು ಕೊಟ್ರೆ ಕಾಚಾದಲ್ಲೂ ನಿಲ್ತೀನಿ

ಚಿತ್ರವೊಂದಕ್ಕೆ 50 ಲಕ್ಷದ ತನಕ ಡಿಮ್ಯಾಂಡ್ ಮಾಡುವ ದರ್ಶನ ಕೇಸು ಬೇರೆ ತರದ್ದು. "ದುಡ್ಡು ಕೊಟ್ರೆ ಕಾಚಾದಲ್ಲೂ ನಟಿಸ್ತೀನಿ" ಎಂದು ಓಪನ್ ಆಫರ್ ಕೊಟ್ಟಿದ್ದ ದರ್ಶನ್‌ಗೆ ದುಡ್ಡು ಬಿಟ್ಟರೆ ಸಿನಿಮಾ ಕ್ವಾಲಿಟಿ, ಇಂಡಸ್ಟ್ರಿಯ ಆರೋಗ್ಯ, ಬೆಳವಣಿಗೆ ಒಂದೂ ಬೇಕಾಗಿಲ್ಲ. ಕೇಳಿದಷ್ಟು ದುಡ್ಡು ಕೊಟ್ಟು ನೀನು ಹೇಗೆ ಬೇಕಾದ್ರೂ ರೀಲ್ ಸುತ್ಕೊ ಎನ್ನುವ ಪೈಕಿ ದರ್ಶನ್.

ಸಖತ್ ಕಿರಿಕ್ ನಟ

ಸುದೀಪ್‌ದು ಇನ್ನೊಂತರಾ ವಿಚಿತ್ರ ಈಗೊ. ಬರೀ ಹೀರೋ ಆಗಿರುವಾಗಲೂ ಡೈರೆಕ್ಟರ್ ತರ ಆಡುವ ಸುದೀಪ್‌ದು ಕಿರಿಕ್ ಜಾಸ್ತಿ ಎಂತಲೇ ಮಾತಿದೆ. ಕತೆ ಹೇಗೇ ಇರಲಿ ಪ್ರತಿ ಫ್ರೇಂನಲ್ಲೂ ತನ್ನ ಮುಖ ಕಾಣಲೇಬೇಕು ಎಂಬ ದುರಾಸೆ ಸುದೀಪ್‌ಗೆ. ಯಾಕೆ ಹೀಗೆ ಎಂದು ಕೇಳಿದರೆ ನಾನು ನನ್ನ ಫೀಲಂನ ಪ್ರೀತಿಸ್ತೀನಿ ಎಂಬ ರೆಡಿ ಡೈಲಾಗ್. ಹಾಗಂದ್ರೆ ನಿರ್ಮಾಪಕ-ನಿರ್ದೇಶಕರು ಅವರ ಫಿಲಂನಾ ದ್ವೇಷಿಸಿಕೊಂಡು ತಯಾರಿಸುತ್ತಿರುತ್ತಾರಾ?




ಸುದೀಪ್‌ಗೆ ಇದೆಲ್ಲಾ ಗೊತ್ತಾಗಬಾರದಾ?

ಹಾಗೆ ಹೇಳಬೇಕೆಂದರೆ ಯಾರಿಗೂ ತೊಂದರೆ ಕೊಡದೆ, ನಖರಾ ಮಾಡದೆ ಸಿನಿಮಾದಲ್ಲಿ ಇನ್‌ವಾಲ್ವ್ ಆಗುವ ಹೀರೋ ಎಂದರೆ ಅದು ಶಿವರಾಜ್‌ಕುಮಾರ್ ಮಾತ್ರ. ಶಿಸ್ತು, ಸಮಯಪಾಲನೆ ಎಲ್ಲದರಲ್ಲೂ ಶಿವಣ್ಣ ಓಕೆ. ಅಷ್ಟೇ ಅಲ್ಲ ಶಿವಣ್ಣ ಎಂತಾ ಉದಾರಿಯೆಂದರೆ ವಿಷ್ಣು ದರ್ಶನ್ ತರ ಡ್ರೈವರ್ ಬಾಟಾ, ಅದು ಇದು ಅಂತಾ ನಿರ್ಮಾಪಕರನ್ನು ಸುಲಿಯುತ್ತಿಲ್ಲ.

ಇವತ್ತಿನ ಕನ್ನಡ ಸಿನಮಾಗೆ ಬಡಿದುಕೊಂಡಿರುವ ಲತ್ತೆ ತೊಲಗಬೇಕೆಂದರೆ ನಮ್ಮ ಹೀರೋಗಳು ಸರಿ ಹೋಗಬೇಕಿದೆ. ನೆಲದ ಮೇಲೆ ಓಡಾಡುವುದನ್ನು, ನಿಂತು ಯೋಚಿಸುವುದನ್ನು ಕಲಿಯಬೇಕಿದೆ.

ರವಿಚಂದ್ರನ್ ಹಾಕಿದ್ದರು. ಆದರೆ ಶೂಟಿಂಗ್ ಶುರುವಾಗಿದ್ದೇ ಒಂದು ದಿನ ತಡವಾಗಿ. ಇದಕ್ಕೆ ನಿರ್ಮಾಪಕರನ್ನಲ್ಲದೆ ರವಿಚಂದ್ರನ್‌ನ್ನು ದೂಷಿಸಲಾದೀತೆ?

ಅಂದುಕೊಂಡಿದ್ದಂತೆ ಅಕ್ಟೋಬರ್ 27 ರ ಬೆಳಗ್ಗೆ 9 ಕ್ಕೆ ರವಿ ಹೊರಡುವಷ್ಟರಲ್ಲಿ ಬೆಂಗಳೂರಿನಿಂದ ಓಡೋಡಿ ಬಂದಿದ್ದಾರೆ ಗಣೇಶ-ಪ್ರವೀಣ. ಇವರೊಂದಿಗೆ ಉಮೇಶ್ ಬಣಕಾರನೆಂಬ ಇನ್ನೊಬ್ಬ ಎಳಸು ನಿರ್ಮಾಪಕನೂ ಇದ್ದ. ಯೂನಿಟ್ ಹುಡುಗರು ಹೇಳುತ್ತಿರುವ ಪ್ರಕಾರ ಹೋಟೆಲ್ ಲಾಬಿಯಲ್ಲಿ ರವಿ ಹಾಗೂ ಪ್ರವೀಣ್ ಮಾತಾಡಿ ಆಚೆ ಬಂದ ಮೇಲೆ ರವಿ ಮುಖ ಸಿಟ್ಟಿನಿಂದ ಕುದಿಯುತ್ತಿತ್ತಂತೆ. ಈ ಪ್ರವೀಣ ಎಂತಾ ಪೊಗರಿನವನೆಂದರೆ "ರವಿ ಅದು ಹೇಗೆ ಊಟ ಬಿಟ್ಟು ಹೋಗ್ತಾನೋ ನಾನೂ ನೋಡ್ತೀನಿ" ಎಂದೆಲ್ಲಾ ಯೂನಿಟ್ ಹುಡುಗರ ಎದುರೇ ಕೂಗಾಡಿದ್ದಾನೆ. ಅವತ್ತು ಈ ಗಲಾಟೆ ಏನಾದರೂ ಹಾಗೇ ಮುಂದುವರೆದಿದ್ದರೆ ಹುಡುಗರೆಲ್ಲಾ ಸೇರಿ ಗಣೇಶ-ಪ್ರವೀಣನಿಗೆ ನಾಲ್ಕು ತದುಕಿ ಕಳಿಸು ತ್ತಿದ್ದುದು ನಿಜ.



ಕೊಬ್ಬರಿ ಮಂಜು



ಮುನಿರತ್ನಂ

ಆಮೇಲೇ ನಾಯಿತು ನೋಡಿ.

ರವಿ ಮೇಲಿನ ದೌರ್ಜನ್ಯದ ಸುದ್ದಿ ಬಹಿರಂಗವಾದ ನಂತರವೂ ನಿರ್ಮಾಪಕರ ದಂಡು ಗಣೇಶ ಪ್ರವೀಣರ ಪರವಾಗಿ ಪರೋಕ್ಷವಾಗಿ ನಿಂತರೇ ವಿನಃ ಅವರ ತಲಹರಟೆಗಳನ್ನು ಖಂಡಿಸಲಿಲ್ಲ.

ಗಣೇಶ್ ಆಫೀಸನ್ನು ರವಿ ಅಭಿಮಾನಿಗಳು ಚಿಂದಿ ಮಾಡಿದ್ದೇ ಈ ಕಾರಣಕ್ಕೆ. ರವಿಚಂದ್ರನ್‌ಗೆ ಎರಡು ಅಭಿಮಾನಿ ಸಂಘಗಳಿವೆ. ರಾಮಮೂರ್ತಿ ಹಾಗೂ ಚಂದ್ರಶೇಖರ್ ಸಂಘಗಳು 'ಹೌದು ನಾವೇ ಹೋಗಿ ಚಿಂದಿ ಮಾಡಿದ್ದೀವಿ. ಪ್ರವೀಣ ಸಿಕ್ಕರೆ ಅವನಿಗೂ ನಾಲ್ಕು ಬಿಡ್ತೀವಿ' ಎಂದು ಶನಿವಾರ ಫಿಲಂ ಚೇಂಬರ್ ಎದುರಿಗೆ ಜಮಾಯಿಸಿ ಅವಾಜ್ ಹಾಕುತ್ತಿದ್ದರೆ, ಇಂಡಸ್ಟ್ರಿಯ ದೊಡ್ಡವರೆಲ್ಲಾ ಮುಗುಂ ಆಗಿ ಬಿಟ್ಟಿದ್ದರು.

ಯುಗಾದಿ ಸಿನಿಮಾ ಗಲಾಟೆಗೆ ಕಾರಣ ರವಿಚಂದ್ರನ್ನೋ ಇಲ್ಲಾ ನಿರ್ಮಾಪಕರೋ ಎಂಬುದು ಒಂದು ವಿಚಾರ. ಆದರೆ ಇಡೀ ಸಿನಿಮಾ ಉದ್ಯಮದ ಪರದಾಟಗಳೇನೆಂದು ನೋಡಿದರೆ ಕನಿಕರವಾಗುತ್ತದೆ.

ಸಾಲ ಸೋಲ ಮಾಡಿ ಸಿನಿಮಾ ನಿರ್ಮಿಸಲು ಹೊರಡುವ ಕೆಲವು ರೀಮೇಕ್ ಪ್ರೊಡ್ಯೂಸರ್‌ಗಳಿಗೆ ಕತೆ ಏನು, ನಟರ್‍ಯಾರು, ಸಂಗೀತ- ಹಾಡುಗಳು ಹೇಗಿರಬೇಕೆಂಬ ಬಗ್ಗೆ ಐಡಿಯಾಗಳೇ ಇರಲ್ಲ, ಜನ ಏನನ್ನು ಇಷ್ಟಪಡುತ್ತಾರೆಂದು ಗಮನಿಸಿಕೊಂಡಿರಲ್ಲ.

ದುಡ್ಡಿನ ದರ್ದು, ಆರ್ಜೆನ್ಸಿ, ಸಾಲ ಇವೇ ರೀಮೇಕ್, ರೀಮಿಕ್ಸ್ ಸಿನಿಮಾಗಳಿಗೆ ಕಾರಣ ವಾಗುತ್ತಿವೆ.

'ಒಂದು ವರ್ಷ ಸಿನಿಮಾ ತೆಗೆಯಲ್ಲ' ಎಂದು ಅಬ್ಬರಿಸಿಕೊಂಡು ಕೂಗುತ್ತಿರುವ ಸಂದೇಶ್ ನಾಗರಾಜರನ್ನೇ ತೆಗೆದುಕೊಳ್ಳಿ. ರವಿಚಂದ್ರನ್ ಸಂದೇಶ್ ನಾಗರಾಜ್‌ಗೆ ಎರಡೋ-ಮೂರೋ ಕೋಟಿ ಸಾಲ ಕೊಡಬೇಕಿತ್ತಂತೆ. ಆಗ ರವಿ 'ಈಗ ದುಡ್ಡಿಲ್ಲ, ಬೇಕಿದ್ರೆ ಕಾಲ್‌ಶೀಟ್ ಕೊಡ್ತೀನಿ' ಅಂದರೂಂತ ಸಂದೇಶ್ 'ಹಠವಾದಿ' ನಿರ್ಮಿಸಿದರು.

ಬರೇ 29 ದಿನದಲ್ಲಿ ಸುತ್ತಿದ ಸಿನಿಮಾ ಅದು. ಆದರೆ 20 ದಿನವೂ ಓಡದೆ ತೋಪಾಯಿತು. ಹೀಗಾಯಿತಲ್ಲ ಎಂದು ರೋಸಿ ಹೋದ ಸಂದೇಶ್ ಚೆನ್ನೈಗೆ ಓಡಿಹೋಗಿ ತಮಿಳು ಸಿನಿಮಾ ಒಂದರ ರೀಮೇಕ್ ರೈಟ್ಸ್ ಖರೀದಿಸಿ ತಂದರು. ಸಾಲದ ಕಮಿಟ್‌ಮೆಂಟ್ ಇದ್ದ ರವಿ ಮತ್ತೆ ಸಂದೇಶ್‌ಗೆ ಕಾಲ್ ಶೀಟ್ ಕೊಟ್ಟರು. ಅದೂ ತೋಪಾಯಿತು. ರವಿ ಹತ್ತಿರ ಸಾಲ ವಸೂಲಿ ಮಾಡಲು ಎರಡು ಪಿಕ್ಚರ್ ತೆಗೆದ ಸಂದೇಶ್ ಮತ್ತೆ ಮೂರು ಕೋಟಿ ಕಳೆದುಕೊಂಡರು.



ಸಂದೇಶ್ ನಾಗರಾಜ್

ಯಾವ ಕಾರಣಕ್ಕೂ ರವಿ ಇದಕ್ಕೆ ಹೊಣೆಯಲ್ಲ, ಏಕೆಂದರೆ ಈ ಸಿನಿಮಾಗಳು ರೆಡಿಯಾಗುತ್ತಿರುವಾಗಲೇ "ಒಳ್ಳೇ ಕತೆ ತರೋದಲ್ವೇನ್ರಿ, ಹೋಗಲಿ ಹಾಡುಗಳಾದ್ರೂ ಚೆನ್ನಾಗಿ ಮಾಡೋಣ, ಅರ್ಜೆಂಟ್ ಮಾಡಬೇಡಿ" ಎಂದೆಲ್ಲಾ ರವಿ ಬುದ್ದಿವಾದ ಹೇಳಿದ್ದಾರೆ.

ಆದರೆ ಕೇಳಿಸಿಕೊಳ್ಳುವ ತಾಳ್ಮೆ ಸಂದೇಶ್‌ಗೆ ಇರಲಿಲ್ಲ. ಸ್ವತಹ ಹಠವಾದಿ ತರ ಹಠ ಮಾಡಿದ ಅವರು ಇನ್ನೂ ಮೂರು ಕೋಟಿ ಲಾಸು ಮಾಡಿಕೊಂಡು ಈಗ ಕಣ್ಣುಕಣ್ಣು ಬಿಡುತ್ತಿದ್ದಾರೆ. ತಮಿಳು-ತೆಲುಗಿನಲ್ಲಿ ಹಿಟ್ ಆಗಿದೆಯೆಂದು ಅದೇ ಸಿನಿಮಾಗಳನ್ನು ಕನ್ನಡದಲ್ಲೂ ಮಾಡಲು ಹೋಗಿ ಲಾಸು ಮಾಡಿಕೊಂಡಿರುವವರ ಪೈಕಿ ಸಂದೇಶ್ ನಾಗರಾಜ್ ಒಬ್ಬರೆ ಇಲ್ಲ, ಮುನಿರತ್ನಂ, ಕೆ. ಮಂಜು, ರಾಮು, ರಮೇಶ್ ಯಾದವ್, ಕನಕಪುರ ಶ್ರೀನಿವಾಸ್, ಎಸ್. ರಮೇಶ್, ಆಟೋ ಮೋಹನ್, ರಾಕ್‌ಲೈನ್ ಎಲ್ಲರೂ ಇಂತಾ ಎಡವಟ್ಟು ಮಾಡಿಕೊಂಡಿರುವವರೇ.

ತಮಿಳಿನ ಪುರಾತನ ಯಶಸ್ವಿ ಚಿತ್ರ ತೇವರ್ ಮಗನ್ ತಂದು ತಂದೆಗೆ ತಕ್ಕ ಮಗ ಮಾಡಿ ಲಾಸಾದ ಎಸ್. ರಮೇಶ್ ಈಗಿಲ್ಲವಾದರೂ ಅವರ ಮನೆ ಹರಾಜಿಗೆ ಬಂದಿದೆ. ಅಣ್ಣಾಮಲೈ ಹಿಟ್ ಆಯಿತೆಂದು ಉಪೇಂದ್ರ ಸ್ವಂತ ಬ್ಯಾನರಿನಲ್ಲಿ ಗೋಕರ್ಣ ನಿರ್ಮಿಸಿ ಕಾಸು ಕಳೆದುಕೊಂಡರು. ವಿಜಯಕುಮಾರ್ ತಮಿಳಿನ ನಾಟಾಮೆ ತಂದು ಸಿಂಹಾದ್ರಿಯ ಸಿಂಹ ಮಾಡಿದರು. ಸಾಹಸ ಸಿಂಹ ವಿಷ್ಣು ಇದ್ದರೂ ಈ ಸಿಂಹ ಎದ್ದು ಗರ್ಜಿಸದೆ ಬಾಲ ಮುದುಡಿಕೊಂಡಿತು. ಸುರೇಶ್ ಕೃಷ್ಣ



ಅಶೋಕ್

ಮಲೆಯಾಳಿ ಕತೆ ಕದ್ದು ಕದಂಬ ರೆಡಿ ಮಾಡಿದರು. ಜನ ಥಿಯೇಟರ್ ಕಡೆ ಸುಳಿಯಲಿಲ್ಲ.

ಈ ರೀಮೇಕ್ ನಿರ್ಮಾಪಕರ ತಿಕ್ಕಲುತನ ಹೇಗಿದೆಯಂದರೆ ಹಿಟ್ ಆಗಿರುವ ತಮಿಳು-ತೆಲುಗು ಸಿನಿಮಾಗಳೆಲ್ಲಾ ಕರ್ನಾಟಕದಲ್ಲಿ ಅದರಲ್ಲೂ ಬೆಂಗಳೂರಿನಲ್ಲಿ ಕನಿಷ್ಠ 50 ದಿನ ಓಡಿರುತ್ತವೆ. ಆಮೇಲೆ ಕನ್ನಡದವರು ಅದೇ ಸಿನಿಮಾ ರೀಮೇಕ್ ಮಾಡಿದರೆ ಜನ ಯಾಕೆ ನೋಡುತ್ತಾರೆ.

ಒಂದು ಕೋಟಿ ಕಳೆದುಕೊಂಡೆ ಎಂದು ಈಗ ಗೋಳಾಡುತ್ತಿರುವ ಕುಮಾರ್ ಅದರ ಬದಲಾಗಿ 'ಭಜನಿ' ಮತ್ತು 'ಮನ್ಮಥುಡು'ಗಳ ರೀಮಿಕ್ಸ್ ಆದ 'ಐಶ್ವರ್ಯ' ಸಿನಿಮಾಗೆ ಕೈಹಾಕಿರದಿದ್ದರೆ ಇಂತಾ ದುಸ್ಥಿತಿ ಬರುತ್ತಿರಲಿಲ್ಲ.

'ಬೊಮ್ಮರಿಲ್ಲು' ಉದಾಹರಣೆಯನ್ನೇ ನೋಡಿ. ತೆಲುಗಿನ ಈ ಸೂಪರ್ ಹಿಟ್ ಸಿನಿಮಾದಲ್ಲಿ ಪ್ರಕಾಶ್ ರೈನ ತಂದೆ ಪಾತ್ರ ಸಖತ್ತಾಗಿದೆ. ಅದು ಕನ್ನಡಕ್ಕೆ ಬಂದರೆ ತಂದೆ ಪಾತ್ರಕ್ಕೆ ಕಠಿಣ ಮುಖಭಾವ ತೋರಿಸಬಲ್ಲ ಅವಿನಾಶ್ ಅಥವಾ ದೇವರಾಜ್ ಸರಿ ಹೋಗುತ್ತಾರೆಯೇ ವಿನಃ ಸಾಫ್ಟ್ ಮುಖದ ಅನಂತ್‌ನಾಗ್ ಅಲ್ಲಾ ತಾನೆ. ಆದರೆ ರೀಮೇಕ್ ನಿರ್ಮಾಪಕ ರಮೇಶ್ ಯಾದವ್ ರೈ ಸ್ಥಾನದಲ್ಲಿ ಅನಂತೇ ಇರಲಿ ಎನ್ನುತ್ತಿದ್ದಾರೆ. ಒಂದು ಸಿನಿಮಾ ಕತೆ ಏನು, ಯಾವ ಪಾತ್ರಕ್ಕೆ ಯಾವ ಕಲಾವಿದ ಸರಿ ಎಂಬ ಮೊದಲ ಪಾಠಗಳೂ ಗೊತ್ತಿರದ ಇವರಿಂದಲೇ ಕನ್ನಡ ಸಿನಿಮಾ ಎಕ್ಕುಟ್ಟಿ ಹೋಗಿರುವುದು.

ಮೊದಲು ಇದನ್ನೆಲ್ಲಾ ರಿಪೇರಿ ಮಾಡಿಕೊಳ್ಳುವುದನ್ನು ಬಿಟ್ಟು ಹೀರೋಗಳ ಸಂಭಾವನೆ ಜಾಸ್ತಿ ಕಾರ್ಮಿಕರ ಕಿರುಕುಳ ಎಂದೆಲ್ಲಾ ಯಾರ್‍ಯಾರ ಮೇಲೊ ಗೂಬೆ ಕೂರಿಸಿ ಬಿಟ್ಟರೆ ನಿರ್ಮಾಪಕರ ಸಮಸ್ಯೆ ಬಗೆಹರಿಯು ವುದಿಲ್ಲ.

'ಒಂದು ವರ್ಷ ಸಿನಿಮಾ ತಯಾರಿಸಲ್ಲ' ಎಂಬ ಮಾತಿರಲಿ, ಇನ್ನು ಹತ್ತು ವರ್ಷ ಸಿನಿಮಾ ಮಾಡಲ್ಲಾ ಎಂದರೂ ಜನ ಕೇರ್ ಮಾಡಲ್ಲ ಎಂಬುದು ಈ ರೀಮೇಕ್ ನಿರ್ಮಾಪಕರಿಗೆ ಗೊತ್ತಿರಲಿ.

ಹಳಸಲು ಸಿನಿಮಾಗಳ ಪಟ್ಟಿ

ಕನ್ನಡದ ಕೆಲವು ಸಿನಿಮಾ ನಿರ್ಮಾಪಕರು ಎಂತಾ ಅಳ್ಳೆದೆಯವರೆಂದರೆ ಇವರಿಗೆ ಒರಿಜಿನಲ್ ಕತೆ ಇಟ್ಟುಕೊಂಡು ಸಿನಿಮಾ ಮಾಡುವುದಕ್ಕಿಂತಾ ಬೇರೆ ಭಾಷೆಯಲ್ಲಿ ಹಿಟ್ ಆದ ಸಿನಿಮಾಗಳನ್ನೇ ಇಲ್ಲೂ ರೆಡಿ ಮಾಡಿಬಿಡುತ್ತಾರೆ; ರೀಮೇಕ್ ಹಕ್ಕು ಖರೀದಿಸಿ ಇಲ್ಲಾ ಕದ್ದು.

ಕಳೆದ ಒಂದೆರಡು ವರ್ಷದಲ್ಲಿ ಬಂದಿರುವ ಒರಿಜಿನಲ್ ಅಲ್ಲದ ತೋಪು ಸಿನಿಮಾಗಳ ಲಿಸ್ಟ್ ನೋಡಿ

1. ಉಪೇಂದ್ರ- ಗೌರಮ್ಮ, ತಂದೆಗೆ ತಕ್ಕ ಮಗ, ನ್ಯೂಸ್, ಗೋಕರ್ಣ, ನಾಗರಹಾವು, ಐಶ್ವರ್ಯ, ಕುಟುಂಬ, ಉಪ್ಪಿದಾದಾ ಎಂಬಿಬಿಎಸ್

   ಗೆದ್ದಿರುವ ರೀಮೇಕ್‌ಗಳೆಂದರೆ ರಕ್ತ ಕಣ್ಣೀರು, ಪ್ರೀತ್ಸೆ

2. ಸುದೀಪ್- ಕಾಶಿ ಫ್ರಂ ವಿಲೇಜ್, ನಲ್ಲ, ತಿರುಪತಿ, ಸ್ವಾತಿಮುತ್ತು

   ಹಣ ಮಾಡುವಲ್ಲಿ ಓಕೆ ಅನ್ನಿಸಿಕೊಂಡ ರೀಮೇಕ್‌ಗಳೆಂದರೆ ಹುಚ್ಚ, ಮೈ ಆಟೋಗ್ರಾಫ್

3. ದರ್ಶನ್- ತಂಗಿಗಾಗಿ, ಇತ್ಯಾದಿ ತೋಪಾದರೂ ಬಿ.ಸಿ. ಸೆಂಟರ್‌ನಲ್ಲಿ ಗ್ಯಾರಂಟಿ ಹಣ ಮಾಡುವ ದರ್ಶನ್ ಕೆಲ ಒರಿಜಿನಲ್ ಸಿನಿಮಾದಲ್ಲಿ ನಟಿಸಿದ್ದರೂ ನಿನಗೋಸ್ಕರ, ನನ್ನ ಪ್ರೀತಿಯ ರಾಮು ಸೋತಿವೆ.

4. ವಿಷ್ಣು-ಇತ್ತೀಚೆಗೆ ವಿಪರೀತ ವೇದಾಂತ ಮಾತಾಡುವ ವಿಷ್ಣುವರ್ಧನ್ ರೀಮೇಕ್ ಫೀಲ್ಡ್‌ನಲ್ಲಿ ನಟಿಸುವುದನ್ನೇ ಫುಲ್‌ಟೈಂ ಕೆಲಸ ಮಾಡಿಕೊಂಡುಬಿಟ್ಟಿದ್ದಾರೆ.

   ಸಿರಿವಂತ, ಕದಂಬ, ಆಪ್ತಮಿತ್ರ, ಯಜಮಾನ, ಸಿಂಹಾದ್ರಿಯ ಸಿಂಹ, ಜಮೀನ್ದಾರ್ರು, ಜೀವನದಿ, ನೀನೆಲ್ಲೊ ನಾನಲ್ಲೆ....

   ಹೇಳಿಕೊಳ್ಳಲು ವಿಷ್ಣು ಕನ್ನಡದ ಸೀನಿಯರ್ ನಟ, ಆದರೇನು ತೆಲುಗು-ತಮಿಳಿನ ಕತೆಗಳನ್ನು ಎರವಲು ತರುತ್ತಿರುವುದರಿಂದ ಅವರದಿರು ಜೂನಿಯರ್ ಆಗಿ ಹೋಗಿದ್ದಾರೆ.

5. ರವಿಚಂದ್ರನ್-ಸಾಹುಕಾರ, ಹಠವಾದಿ, ರವಿಶಾಸ್ತ್ರಿ, ಒಡಹುಟ್ಟಿದವಳು, ಯಾರೇ ನೀನು ಚೆಲುವೆ, ಎಲ್ಲಾ ರೀಮೇಕೆ, ಬಹಳಷ್ಟು ತೋಪೆ!

6. ಪುನೀತ್- ರಾಕ್‌ಲೈನ್ ನಿರ್ಮಾಣದ 'ಮೌರ್ಯ' ತಮಿಳು, ತೆಲುಗಿನಲ್ಲಿ ಬಂದು ಹೋಗಿದ್ದ ಕತೆ.

ಉಳಿದಂತೆ ಶಿವರಾಜ್‌ಕುಮಾರ್ ಹೇಗೂ ರೀಮೇಕ್ ಸಿನಿಮಾಗಳಲ್ಲಿ ನಟಿಸುತ್ತಿಲ್ಲ ಆದ್ದರಿಂದ ಅವರು ಈ ಲಿಸ್ಟ್‌ಗೆ ಬರುತ್ತಿಲ್ಲ.

ಈಗ ಹೇಳಿ, ಇವೆಲ್ಲಾ ಯಾವ ಮಹಾನ್ ಸಿನಿಮಾಗಳೆಂದು ಕನ್ನಡಿಗರು ಹೋಗಿ ನೋಡುತ್ತಾರೆ. ಒಂದು ಹೊಸ ಕತೆ ಹುಡುಕಲಾಗದವರು, ಸ್ವಂತ ಕ್ರಿಯೇಟಿವಿಟಿ ಇರದ ಕನ್ನಡ ರೀಮೇಕ್ ನಿರ್ಮಾಪಕರು ಸಿನಿಮಾ ತೋಪಾದಾಗೆಲ್ಲಾ "ಕನ್ನಡಿಗರಿಗೆ ಕನ್ನಡದ ಬಗ್ಗೆ ಅಭಿಮಾನ ಇಲ್ಲ" ಎಂದು ಗೋಳಾಡುತ್ತಿರುತ್ತಾರೆ.

ಇವರ ಗೋಳು-ಪರದಾಟ ಪರಿಹರಿಸುವಷ್ಟು ಪಹನೆ-[illegible] ಜನಕ್ಕೆಲ್ಲಿಂದ ಬರಬೇಕು.

[illegible]

ಕಾರ್ಮಿಕರ ತಪ್ಪೇನಿದೆ

'ಎತ್ತಿಗೆ ಜ್ವರ ಬಂದರೆ ಕೋಣನಿಗೆ ಬರೆ ಎಳೆದ್ರಂತೆ' ಎಂಬ ಸ್ಥಿತಿ ಸಿನಿಮಾ ಕಾರ್ಮಿಕರದ್ದು.

ತಾವು ನಿರ್ಮಿಸಿದ ಸಿನಿಮಾಗಳೆಲ್ಲಾ ತೋಪಾಗುತ್ತಿರುವುದನ್ನು ನೋಡಿ ಕಂಗಾಲಾಗಿರುವ ರೀಮೇಕ್ ನಿರ್ಮಾಪಕರು ಕೆಲವೊಮ್ಮೆ ಹೀರೋಗಳನ್ನು ದೂಷಿಸುತ್ತಾರಾದರೂ ಯಾವಾಗಲೂ ಜಗಳಕ್ಕೆ ಬೀಳುವುದು ಸಿನಿಮಾಗಳಲ್ಲಿ ದುಡಿಯುವ ಕಾರ್ಮಿಕರ ಮೇಲೆ.

ಹತ್ತು ಜನ ನಿರ್ಮಾಪಕರ ಸಿನಿಮಾಗಳಲ್ಲಿ ಕೆಲಸ ಮಾಡುವುದಿಲ್ಲ ಎಂದು ಚಲನಚಿತ್ರ ಕಾರ್ಮಿಕರ ಒಕ್ಕೂಟ [illegible] ತೀರ್ಮಾನ ತೆಗೆದುಕೊಂಡಿದೆ ಎಂಬ [illegible] ಆ ತೀರ್ಮಾನ [illegible] ಕೆಲ ನಿರ್ಮಾಪಕರೇ ಕಾರಣರಾಗಿದ್ದಾರೆ. ಚಲನಚಿತ್ರ ಕಾರ್ಮಿಕರದ್ದು [illegible] ಕೆಲಸ. [illegible] ಇದರಿಗೇ [illegible] ಕೆಲಸ ಮುಗಿಸಿದ ನಂತರ ಕೂಲಿ [illegible] ಎಂಬ ಸ್ಥಿತಿ [illegible]

[illegible] ಹಳೆ, ದೌರ್ಜನ್ಯಗಳ [illegible] ಕೆಲಸ ಮಾಡಬೇಕಾದ [illegible]

ಕನಕಪುರ ಶ್ರೀನಿವಾಸ್ 'ಶ್ರೀರಾಮ್' ನಿರ್ಮಿಸುತ್ತಿರುವಾಗ ಭೋಜ ಎಂಬ ಡ್ರೈವರ್ ಮೇಲೆ ಹಲ್ಲೆ ನಡೆಸಿದ್ದರು. ರಾಕ್‌ಲೈನ್ ಸಹೋದರ ಇನ್ನೊಬ್ಬ ಡ್ರೈವರ್ ಶ್ರೀನಿವಾಸ್‌ಗೆ ಹೊಡೆದಿದ್ದರು. ಈ ಕಾರ್ಮಿಕರ ವಿಚಾರ ಬಿಡಿ, ಪಾಂಡುರಂಗ ವಿಠಲ ಚಿತ್ರದ ನಿರ್ದೇಶಕರಾಗಿದ್ದ ಡಿ. ರಾಜೇಂದ್ರ ಬಾಬು ಮನೆಗೇ ನುಗ್ಗಿ ಹೊಡೆದು ಬಂದಿದ್ದವರು ಇದೇ ಗಣೇಶ-ಪ್ರವೀಣ್ ಜೋಡಿ.

ಕಾರ್ಮಿಕರ ಒಕ್ಕೂಟ ಪ್ರಬಲವಾದರೆ ಅವರು ಕೇಳುವ ಸವಲತ್ತನ್ನೆಲ್ಲಾ ಕೊಡಬೇಕಾಗುತ್ತದೆಂದು ಒಕ್ಕೂಟವನ್ನೇ ವಿಭಜಿಸುವ ಪಿತೂರಿಯೂ ಹಿಂದೊಮ್ಮೆ ನಡೆದಿತ್ತು. ಈಗಲೂ ಕೂಡ ಬಹಿಷ್ಕಾರ ಬೆದರಿಕೆ ಹಿಂದಕ್ಕೆ ಪಡೆಯದಿದ್ದರೆ ಬೇರೊಂದು ಕಾರ್ಮಿಕ ಒಕ್ಕೂಟ ಹುಟ್ಟು ಹಾಕುವುದಾಗಿ ಕೆಲ ನಿರ್ಮಾಪಕರು ಬೆದರಿಕೆ ಹಾಕಿದ್ದಾರೆ. ಪರಿಸ್ಥಿತಿ ಹೀಗೆ ಬಿಗಡಾಯಿಸಿಕೊಂಡು ಹೋಗಲು ರಾಜೇಂದ್ರಸಿಂಗ್ ಬಾಬುವೇ ಕಾರಣ ಎಂದು ಕಾರ್ಮಿಕ ಮುಖಂಡ ಅಶೋಕ್ ಹಲ್ಲು ಕಡಿಯುತ್ತಿದ್ದಾರೆ. ಸದ್ಯಕ್ಕೆ ನಿರುದ್ಯೋಗಿಯಾಗಿರುವ ಸಿಂಗ್ ಬಾಬು ಇಂತಾ ಕಿತಾಪತಿಗಳಲ್ಲಿ ಎತ್ತಿದ ಕೈ.

ಫಿಲಂ ಚೇಂಬರ್ ಈಗಲಾದರೂ ನಿರ್ಮಾಪಕರು, ಕಲಾವಿದರ ನಡುವಿನ ವೈಮನಸ್ಸನ್ನು ಪರಿಹರಿಸುವಾಗ ಕಾರ್ಮಿಕರ ಬಗ್ಗೆಯೂ ಗಮನ ಹರಿಸಬೇಕಿದೆ. ಕನ್ನಡ ಸಿನಿಮಾ ನಿರ್ಮಾಪಕರೆಲ್ಲಾ ಮರ್ಯಾದಾ ಪುರುಷೋತ್ತಮರೇನಲ್ಲ, ಒಪ್ಪಿಕೊಂಡ ಸಂಬಳ ಕೊಡದೆ ಸತಾಯಿಸುವುದು, ಕಳಪೆ ಊಟ ಕೊಡುವುದು ಎಲ್ಲಾ ಮಾಮೂಲಿಯಾಗಿ ಹೋಗಿದೆ.

ಅಂತಾ ನಿರ್ಮಾಪಕರನ್ನು ಕರೆಸಿ ಛೀಮಾರಿ ಹಾಕಿದ ಒಂದು ಉದಾಹರಣೆಯೂ ಇಲ್ಲ. ಜಿಪುಣ ನಿರ್ಮಾಪಕರ ಇಂತಾ ಐನಾದಿ ಬುದ್ಧಿ ನೋಡಿ ನೋಡಿ ಸಾಕಾದ ಕಾರ್ಮಿಕರು ಈಗ ವಾರಕ್ಕೊಮ್ಮೆ ಸಂಬಳ ಪಡೆಯುವ ಬದಲಾಗಿ 3 ದಿನಕ್ಕೊಮ್ಮೆ ಹಣ ತೆಗೆದುಕೊಳ್ಳುತ್ತಿದ್ದಾರೆ. ಬಹುಶಃ ಕಾರ್ಮಿಕರ ಹೊಟ್ಟೆಗೆ ಹೊಡೆಯದ ಒಂದೇ ಸಂಸ್ಥೆಯಂದರೆ ವಜ್ರೇಶ್ವರಿ

36 ಕೋಟಿ ಆಸ್ತಿ ವಹಿವಾಟು

ನ್ಯಾಯಾಧೀಶರ ವರ್ಗಾ ಯತ್ನ ವಿಫಲ!

ಮತ್ತೆ ಮತ್ತೆ ಕರ್ನಾಟಕದ ಹಾಲಿ ರಾಜವಂಶದ ಇತಿಹಾಸ ಕೆದಕುವುದು ಕಿರಿಕಿರಿಯ ವಿಚಾರವೇ, ನಿಜ. ಆದರೆ ಕ್ಷಣಕ್ಷಣಕ್ಕೂ ತಮ್ಮ ಅಧಿಕಾರಬಲ, ಧನಬಲ ಮತ್ತು ಜಾತಿಬಲದ ನಗ್ನ ಪ್ರದರ್ಶನಕ್ಕಿಳಿದಿರುವಾಗ ಸಾರ್ವಜನಿಕ ಹಿತಾಸಕ್ತಿಯ ರಕ್ಷಣೆಗೋಸ್ಕರವಾದರೂ ಈ ಕುತೂಹಲಕರ ವಿದ್ಯಾಮಾನಗಳತ್ತ ವಾಚಕರ ಗಮನ ಸೆಳೆಯಬೇಕಾಗಿದೆ....



ವೈಟ್‌ಫೀಲ್ಡ್‌ನಲ್ಲಿ 36 ಕೋಟಿ ರೂ.ಗೆ ಹೈಟೆಕ್ ವಾಣಿಜ್ಯ ಸಂಕೀರ್ಣವೊಂದನ್ನು ಖರೀದಿಸಿದ್ದ ದೇವೇಗೌಡರ ಪರಿವಾರದ "ಅರಿಸಿನ ಕುಂಕುಮ" ಆಸ್ತಿ ವಿವಾದ ಚೆನ್ನೈನ ಕೇಂದ್ರೀಯ ನ್ಯಾಯಮಂಡಳಿಯ ಮುಂದೆ ಚರ್ಚೆಗೊಳಗಾಗಿತ್ತಲ್ಲವೇ... ಕಳೆದ ಸೆಪ್ಟೆಂಬರ್ 25 ರ ಗಡುವು ನೀಡಿದ್ದ ಮಂಡಳಿಯ ಚೇರ್ಮನ್ ನ್ಯಾಯಮೂರ್ತಿ ಬಾಲು ಸದರಿ ಆಸ್ತಿಯನ್ನು ಗೌಡರ ಕುಟುಂಬಕ್ಕೆ ಪರಭಾರೆ ಮಾಡಿಸಿದ್ದ ಪ್ರೀತಮ್‌ಸೇನ್ ಎಂಬ ಚಾಲಾಕು ಆಸಾಮಿಗೆ ಅದರ ಅಸಲಿ ಮಾಲೀಕತ್ವ ತನ್ನದೇ ಎಂಬುದನ್ನು ಸಾಬೀತುಗೊಳಿಸುವಂತಹ ಪುರಾವೆ ಮಂಡಿಸಲು ಕಟ್ಟಕಡೆಯ ಅವಕಾಶ ನೀಡಿದ್ದರು....


ಇನ್ನೇನು ಸೆ. 25ರ ನಿಗದಿತ ಗಡುವು ಮುಕ್ತಾಯಗೊಳ್ಳಲಿದೆ ಅನ್ನುವಷ್ಟರಲ್ಲಿ ಸೆ. 23 ರಂದೇ ನ್ಯಾಯಮಂಡಳಿಯ ಅಧ್ಯಕ್ಷರಾದ ನ್ಯಾ. ಬಾಲುರನ್ನೇ ಎತ್ತಂಗಡಿ ಮಾಡುವ ಟ್ರಾನ್ಸ್‌ಫರ್ ಆರ್ಡರ್ ಜಾರಿ ಯಾಗಿಬಿಟ್ಟಿತು!

ತಮಿಳ್ನಾಡಿನ ನ್ಯಾಯಾಂಗೀಯ ಅಧಿಕಾರಿವಲಯ ದಲ್ಲೇ ಅಚ್ಚರಿ ಮೂಡಿಸಿದ ಈ ಹಠಾತ್ ವರ್ಗಾ ಆದೇಶದ ಹಿನ್ನೆಲೆಯಲ್ಲಿ ಯಾವುದೋ 'ಬಲಿಷ್ಠ ಕೈಗಳ' ಕರಾಮತ್ತು ನಡೆದಿರಲೇಬೇಕೆಂಬ ಸಂಶಯ ದಟ್ಟವಾಗಿ ಹಬ್ಬಿಬಿಟ್ಟಿತು....



ಅನಿತಾ ಕುಮಾರಸ್ವಾಮಿ

ಕರ್ನಾಟಕದ ಹಾಲಿ ಮುಖ್ಯಮಂತ್ರಿಯ ಕುಟುಂಬದ ಬಹುತೇಕ ಮಹಿಳಾ ಸದಸ್ಯರುಗಳ ಪಾಲುದಾರಿಕೆಯಿರುವ ಈ 36 ಕೋಟಿ ರೂ. ಆಸ್ತಿ ವಹಿವಾಟನ ವ್ಯಾಜ್ಯಕ್ಕೆ ಸಂಬಂಧಿಸಿದಂತೆ ಅತ್ಯಂತ ನಿಷ್ಠುರವಾದ ಆದರೆ ನಿಷ್ಪಕ್ಷಪಾತವಾದ ಮನೋಧರ್ಮ ಪ್ರಕಟಿಸುತ್ತ ಬಂದಿದ್ದ ನ್ಯಾ. ಬಾಲುರವರ ದಿಢೀರ್ ಸ್ಥಾನ ಪಲ್ಲಟದ ವಿಷಯ ದೆಹಲಿಯ ಯುಪಿಎ ಸರ್ಕಾರದ ಮಟ್ಟದಲ್ಲಿಯೇ ಕಂಪನಗಳನ್ನೆಬ್ಬಿಸಿಬಿಟ್ಟಿತು...



ಅಂತಿಮವಾಗಿ ಕೇಂದ್ರ ಕಾನೂನು ಸಚಿವ ಭಾರದ್ವಾಜ್‌ರವರೇ ಈ ವಿಷಯದಲ್ಲಿ ತಮ್ಮ ಇಲಾಖಾ ಮೂಲಗಳಿಂದ ತುರ್ತು ಮಾಹಿತಿ ಸಂಗ್ರಹಿಸಿ ಕಾರ್ಯೋನ್ಮುಖರಾದರು... ಚೆನ್ನೈನ ನ್ಯಾಯಮಂಡಳಿಯ ಅಧ್ಯಕ್ಷಗಿರಿಯಿಂದ ವರ್ಗಾಯಿಸಲ್ಪಟ್ಟಿದ್ದ ನ್ಯಾ. ಬಾಲುರವರಿಗೆ ಸಂಬಂಧಿಸಿದ ಆಜ್ಞೆಯನ್ನು ರದ್ದುಗೊಳಿಸಿ ಮತ್ತೆ ಅದೇ ಹುದ್ದೆಗೆ ಮರುನೇಮಕ ಮಾಡಿದರು.....

ನ್ಯಾಯಮಂಡಳಿಯ ಚೇರ್ಮನ್‌ಗಿರಿಗೆ ಮರಳಿದ ನ್ಯಾ. ಬಾಲು ಮೊನ್ನೆ ನವೆಂಬರ್ 3 ರಂದು ದೇವೇಗೌಡ ಕುಟುಂಬದ ಆಸ್ತಿ ಖರೀದಿ ವಿವಾದದ ವಿಚಾರಣೆಯನ್ನು ಮತ್ತೆ ಪುನರಾರಂಭಿಸಿದರು.... ಆದರೆ ಯಥಾಪ್ರಕಾರ ಪ್ರತಿವಾದಿಗಳ ಪರ ವಕೀಲರು ಮತ್ತಷ್ಟು ಕಾಲಾವಕಾಶ ಕೋರಿದಾಗ ನವೆಂಬರ್ 8 ಕ್ಕೆ ಮುಂದೂಡಿದರು. ಯಾವುದೇ ಕಾರಣಕ್ಕೂ ಇನ್ನುಮುಂದೆ ಗಡವು ವಿಸ್ತರಣೆ ಸಾಧ್ಯವಿಲ್ಲವೆಂಬ ಎಚ್ಚರಿಕೆಯನ್ನು ನೀಡಿದರು!!

ಗೌಡ್ರ ಪರಿವಾರಕ್ಕೆ ಫಜೀತಿ ತಂದಿಟ್ಟ ಪ್ರೀತಮ್ ಸೇನ್!

ಕವಿತಾ ಬಾಲಕೃಷ್ಣ ಅನಿತಾ ಕುಮಾರಸ್ವಾಮಿ, ಭವಾನಿ ರೇವಣ್ಣ ಶೈಲಜಾ ಚಂದ್ರಶೇಖರ್ ಮುಂತಾದ ದೇವೇಗೌಡ ವಂಶದ ಹೆಣ್ಣುಮಕ್ಕಳ ಹೆಸರಲ್ಲಿ ಖರೀದಿಸಲಾದ ವೈಟ್‌ಫೀಲ್ಡ್ ಆಸ್ತಿಯ ವಹಿವಾಟು ಚೆನ್ನೈ ನ್ಯಾಯಮಂಡಳಿಯೆದುರು ವಿವಾದಕ್ಕೊಳಗಾಗಲು ಕಾರಣನಾದ ವ್ಯಕ್ತಿ ಪ್ರೀತಮ್ ಸೇನ್ ಎಂಬಾತ....

ರಾಜಧಾನಿಯ ಸುಪ್ರಸಿದ್ಧ RMZ ಬಿಲ್ಡರ್ಸ್‌ನವರೊಂದಿಗೆ ಪಾಲುದಾರಿಕೆ ಮಾಡಿಕೊಂಡು ಪೆರಿವಾಲ್ ಗ್ರೂಪ್ ಆಫ್ ಇಂಡಸ್ಟ್ರೀಸ್ ಹೆಸರಲ್ಲಿದ್ದ ಪ್ರಶ್ನಿತ ಆಸ್ತಿಗೆ ತಾನೇ ವಾರಸುದಾರನೆಂದು ಘೋಷಿಸಿಕೊಂಡ ಪ್ರೀತಮ್ ಸೇನ್ ಅದನ್ನು ಗೌಡರ ಕುಟುಂಬಕ್ಕೆ ಪರಭಾರೆ ಮಾಡಿಸಿಬಿಟ್ಟ....

ಕೊಲ್ಕತ್ತಾದ ಮೂಲದ ಪೆರಿವಾಲ್ ಕುಟುಂಬದ ಆಶ್ರಯದಲ್ಲೇ ಬೆಳೆದು ಅವರ ಕಂಪನಿಯ ಮ್ಯಾನೇಜ್‌ಮೆಂಟ್ ನಿಭಾಯಿಸಲೆಂದು ಬೆಂಗಳೂರಿಗೆ ಬಂದ ಪ್ರೀತಮ್ ತನ್ನ ಆಶ್ರಯದಾತರಿಗೇ ಕೈಕೊಟ್ಟು ಆಸ್ತಿ ಲಪಟಾಯಿಸಲೆತ್ನಿಸಿದ ದುಸ್ಸಾಹಸಿ ಎಂಬ ಹಿನ್ನೆಲೆ ಗೌಡರ ಪರಿವಾರಕ್ಕೆ ಗೊತ್ತಿತ್ತೋ ಇಲ್ಲವೋ, ಅಂತೂ ಆತನೊಂದಿಗೆ ಬಿಸಿನೆಸ್ ಸಂಬಂಧಕ್ಕಿಳಿದು ನ್ಯಾಯಮಂಡಳಿಯ ಕಟಕಟೆಯಲ್ಲಿ ನಿಲ್ಲುವಂತಾಯ್ತು.

ಕಳೆದ ವರ್ಷ (2005) ಸೆಪ್ಟೆಂಬರ್‌ನಿಂದಲೂ ಚೆನ್ನೈನಲ್ಲಿ ಈ ಕಾನೂನು ಹೋರಾಟ ನಡೆಸಿರುವ ಪೆರಿವಾಲ್ ಕುಟುಂಬದ ಅಸಲಿ ವಾರಸುದಾರ ಪಿಯೂಷ್ ಪೆರಿವಾಲ್ ಮತ್ತಿತರರು ಹೂಡಿರುವ ಕೇಸಿನಲ್ಲಿ ಇದುವರೆಗೂ ವೈಟ್‌ಫೀಲ್ಡ್ ಆಸ್ತಿ ತನ್ನದೇ ಎನ್ನಲು ಯಾವುದೇ ದಾಖಲೆ ನೀಡಲಿಕ್ಕಾಗದೆ ಪರದಾಡುತ್ತಿರುವ ಈ ಪ್ರೀತಮ್ ಸೇನ್ ಎಂಬ ಘಟಿಂಗನ ಕಣ್ಣಾಮುಚ್ಚಾಲೆ ಆಟ ಇದೀಗ ಗೌಡ-ಕುಮಾರಣ್ಣ ಪರಿವಾರಕ್ಕೆ ನುಂಗಲಾರದ ತುತ್ತಾಗಿಬಿಟ್ಟಿದೆ....



ಕವಿತಾ

ಅರ್ಜಿದಾರರೀಗ ಪ್ರಶ್ನಿತ ಆಸ್ತಿ ಖರೀದಿಸಿದ ಗೌಡರ ಕುಟುಂಬದ ಮಹಿಳಾ ಸದಸ್ಯರನ್ನು ಕೇಸಿನಲ್ಲಿ ಸಹ-ಪ್ರತಿ ವಾದಿಗಳೆಂದು implead ಮಾಡಲು ನ್ಯಾಯಪೀಠದಿಂದ ಪರವಾನಗಿ ಪಡೆದದ್ದೂ ಆಗಿದೆ! ಅಂದಹಾಗೆ ಸದರಿ ಪ್ರೀತಮ್ ಸೇನ್‌ನ ಒಬ್ಬ ಸಹೋದರ ಪ್ರೋಮಿತ್ ಸೇನ್‌ನ ವಿರುದ್ಧ ಆತನ ಪತ್ನಿ ವರದಕ್ಷಿಣೆ-ಹಿಂಸೆಯ ಮೊಕದ್ದಮೆ ದಾಖಲಿಸಿದ್ದು ಅದರಲ್ಲಿ ಪ್ರೀತಮ್‌ನನ್ನು ಸಹ ಆರೋಪಿ ಎಂದು ಹೆಸರಿಸಲಾಗಿದೆ....

ಹಾಗೆಯೇ ಇದೇ ಪ್ರೀತಮ್‌ನ ಮತ್ತೊಬ್ಬ ಸೋದರ ಪ್ರಿಯಮ್ ಎಂಬ ಅನಿವಾಸಿ ಭಾರತೀಯನ ವಿರುದ್ಧ ಅಮೆರಿಕಾದ ಹಿರಿಯ ಮಹಿಳಾ ನಾಗರಿಕರೊ[...] ತಮ್ಮ ಬಹುಮಹಡಿ ಕಟ್ಟಡದ ವಹಿವಾಟನಲ್ಲಿ ವ[...] ಮಾಡಿದ ಮೊಕದ್ದಮೆ ಹೂಡಿದ್ದಾರೆ. ಹೇಗಿದೆ ನೋ[...] ಈ ಸೇನ್ ಫ್ಯಾಮಿಲಿ ತ್ರಿವಳಿ ಸಹೋದರರ ಆಮೋ[...] ಹಿನ್ನೆಲೆ....

–ರವೀಂದ್ರ ರೇ[...]

ಬೆಳವಾಡಿಯಲ್ಲಿ ಕುಮಾರಣ್ಣನ ಗ್ರಾಮವಾಸ್ತವ್ಯದ ಪಡಿಪಾಟಲು!

ಮೊನ್ನೆ ಚಿಕ್ಕಮಗಳೂರು ಮಾರ್ಗವಾ[...] ಬೆಳವಾಡಿ ಎಂಬ ಗ್ರಾಮದಲ್ಲಿ ತಮ್ಮ ಸುಪ್ರಸಿದ್ಧ 'ಗ್ರಾಮ ವಾಸ್ತವ್ಯ' ಮುಕ್ಕಾಂ ಮಾಡಲಿದ್ದ ಮುಖ್ಯಮಂತ್ರಿ ಕುಮಾರಣ್ಣನವರು ಎದುರಿಸಬೇಕಾಗಿ ಬಂದ ಮುಜು[...]ಗರದ ವೃತ್ತಾಂತವಿದು...

ರಾತ್ರಿ 8 ಗಂಟೆಯಷ್ಟೊತ್ತಿಗೆ ಚಿಕ್ಕಮಗಳೂರ[...] ಟೌನ್ ತಲುಪಿದ ಕುಮಾರಣ್ಣನವರಿಗೆ ಸ್ಥಳೀಯ[...] ಜೆಡಿಎಸ್ ಮುಖಂಡ ಭೋಜೇಗೌಡರ ಮನೆಯಲ್ಲಿ[...] ಅದ್ಧೂರಿ ಆತಿಥ್ಯದ ಏರ್ಪಾಟಾಗಿತ್ತು. ಅದನ್ನು ನಿರಾಕ[...]ಸಲಿಕ್ಕಾಗದ ಸಿ.ಎಂ. ಸಾಹೇಬ್ರು ಅಲ್ಲಿಯೇ ಡ್ರಿಂಕ್ಸ್[...] ಡಿನ್ನರ್ ಪೂರೈಸಿಕೊಂಡು ಲೋಕಾಭಿರಾಮವಾ[...] ಹರಟುತ್ತ ಕೊಂಚ ವಿಶ್ರಾಂತಿ ಅನುಭವಿಸಿದರು....

ಹಾಗೇ ನಿದ್ರೆಗೆ ಜಾರಿದ ಕುಮಾರಣ್ಣ ತಡಬಡಾಯಿ[...]ಸುತ್ತ ಎಚ್ಚರಗೊಂಡಾಗ ಆಗಲೇ ಮಧ್ಯರಾತ್ರಿ ದಾಟಿತ್ತು[...] ನಿಗದಿತ ಗ್ರಾಮ ವಾಸ್ತವ್ಯದತ್ತ ಪ್ರಯಾಣಿಸಿ ಬೆಳವಾಡಿ ಗ್ರಾಮದ[...] ತಿಗಳರ ಜನಾಂಗದ ಹಿರಿಯರೊಬ್ಬರ ನಿವಾಸ ತಲುಪಿದಾ[...] ಆಗಲೇ ಬೆಳಗಿನ ಜಾವ 3 ಗಂಟೆ ಯಾಗಿತ್ತು!

ಸಿ.ಎಂ. ಸಾಹೇಬ್ರಿಗೆಂದೇ ಅಪಾರ ಕಾಳಜಿಯಿಂದ ಸಿದ್ಧಪಡಿಸಲಾಗಿದ್ದ ಮುದ್ದೆಯೂಟದ ಸಂಭ್ರಮಕ್ಕೆಂದು ಕಾದಿದ್ದ ಆತಿಥೇಯ ಕುಟುಂಬ ಅವರ ತಟ್ಟೆಯ[...] ಕಿಂಗ್‌ಸೈಜ್ ಮುದ್ದೆ ಹಾಗು ಸೊಗಸಾದ ಸಾ[...] ಬಡಿಸಿಯಾಯ್ತು... ಆದ್ರೆ ಪಾಪ ಕುಮಾರಣ್ಣನವ[...]ಗಲೇ ಭೋಜೇಗೌಡರ ಮನೆಯ ಮೋಜವಾ[...] ತೀರಿಸಿಕೊಂಡು ಬಂದಿದ್ದರಿಂದ ಮತ್ತೆ ಊಟ ಮಾಡ[...]ವಂತಿರಲೇ ಇಲ್ಲ....

ಹಾಗೂಹೀಗೂ ಒಂದೆರಡು ತುತ್ತು ಗಂಟಲಿಗಿ[...] "ಯಾಕೋ ಇವತ್ತು ಹೊಟ್ಟೆ ಸರಿಯಿಲ್ಲ ಬ್ರದರ್[...]" ಎಂಬ ನೆಪ ಹೇಳುತ್ತ ಮೇಲಕ್ಕೆದ್ದ ಕುಮಾರ[...] ಅಷ್ಟೊತ್ತಿಗಾಗಲೇ ತಮ್ಮನ್ನು ಹಿಂಬಾಲಿಸಿಕೊಂಡು ಬಂದಿದ್ದ ಸುದ್ದಿ ಮಾಧ್ಯಮಗಳ ಫೋಟೋಗ್ರಾಫ[...]ಗಳಿಗೆ ಗ್ರಾಮವಾಸ್ತವ್ಯದ ಪೋಜು ಕೊಟ್ಟಾಗಿತ್ತಷ್ಟೆ!

ಬಂಧನದಿಂದ ಮಹಿಳಾ ಪೊಲೀಸ್ ಇನ್ಸ್‌ಪೆಕ್ಟರ್ ಪರಾರಿ


ಇದು ಉಲ್ಟಾಪಲ್ಟಾ ಕೇಸ್. ಆರೋಪಿಗಳನ್ನು ಬಂಧಿಸಿ ಕಂಬಿ ಹಿಂದೆ ತಳ್ಳುವ ಪೊಲೀಸ್ ಇನ್ಸ್‌ಪೆಕ್ಟರೇ ಬಂಧನಕ್ಕೊಳಗಾಗಿ, ಕೆಲಸಮಯ ಕಂಬಿ ಎಣಿಸಿದ್ದಲ್ಲದೆ ತನ್ನನ್ನು ಬಂಧಿಸಿದ ಮಹಿಳಾ ಪೊಲೀಸರಿಗೆ ತಪರಾಕಿ ನೀಡಿ, ಪರಾರಿಯಾಗಿ, ಪೊಲೀಸರೊಂದಿಗೆ ಕಣ್ಣಾಮುಚ್ಚಾಲೆ ಆಡಿದ ವಿಚಿತ್ರ ಪ್ರಕರಣ ಮೈಸೂರಿನಲ್ಲಿ ನಡೆದಿದೆ. ಇಂಥ ದಾಂಧಲೆ ನಡೆಸಿ ಭಾರೀ ಸುದ್ದಿ ಮಾಡಿದವರು ಮಹಿಳಾ ಪೊಲೀಸ್ ಇನ್ಸ್‌ಪೆಕ್ಟರ್ ನಿರ್ಮಲ ಹರೀಶ್.



ಪೊಲೀಸರ ವಶಕ್ಕೆ

ಹಾಲಿ ರೈಲ್ವೆ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಆಗಿ ಎರವಲು ಸೇವೆಯಲ್ಲಿರುವ ನಿರ್ಮಲಾ ಹರೀಶ್, ಇದಕ್ಕೆ ಮುನ್ನ ನಗರದ ಮಹಿಳಾ ಪೊಲೀಸ್ ಠಾಣೆಯಲ್ಲಿದ್ದರು. ಆ ಸಮಯದಲ್ಲಿ ಇವರೇ ದಾಖಲಿಸಿದ್ದ ವರದಕ್ಷಿಣೆ ಕಿರುಕುಳ ಪ್ರಕರಣದಲ್ಲಿ ನಿರ್ಮಲಾ ಹರೀಶ್ ಸಾಕ್ಷಿ ಹೇಳಬೇಕಿತ್ತು, ಈ ಸಂಬಂಧ ನಗರದ ಮೂರನೇ ಸಿ.ಜೆ.ಎಂ. ನ್ಯಾಯಾಲಯ 9 ಬಾರಿ ಸಮನ್ಸ್ ಜಾರಿ ಮಾಡಿದ್ದರೂ ಇನ್ಸ್‌ಪೆಕ್ಟರ್ ನಿರ್ಮಲಾ ಹರೀಶ್ ನ್ಯಾಯಾಲಯಕ್ಕೆ ಹಾಜರಾಗಿರಲಿಲ್ಲ, ಅಂತಿಮವಾಗಿ ನ್ಯಾಯಾಧೀಶ ಎಂ. ಮಹದೇವಯ್ಯನವರು ಅರೆಸ್ಟ್ ವಾರೆಂಟ್ ಜಾರಿ ಮಾಡಿದರು.

ಅರೆಸ್ಟ್ ವಾರೆಂಟ್ ಜಾರಿಯಾದ ಸುದ್ದಿ ತಿಳಿಯುತ್ತಿದ್ದಂತೆ ನವೆಂಬರ್ 2 ರಂದು ನಿರ್ಮಲಾ ಹರೀಶ್ ನ್ಯಾಯಾಲಯಕ್ಕೆ ಧಾವಿಸಿ ಬಂದರು. ಆದರೆ ಪೊಲೀಸ್ ಅಧಿಕಾರಿಯೇ ನ್ಯಾಯಾಲಯದ ಆದೇಶಕ್ಕೆ ಬೆಲೆ ಕೊಡದಿದ್ದರಿಂದ ಸಿಟ್ಟಿಗೆದ್ದಿದ್ದ ನ್ಯಾಯಾಧೀಶರು, ನಿರ್ಮಲಾ ಹರೀಶ್‌ರವರನ್ನು ನವೆಂಬರ್ 11 ರವರೆಗೆ ನ್ಯಾಯಾಂಗ ಬಂಧನಕ್ಕೆ ನೀಡಿ ಆದೇಶ ಹೊರಡಿಸಿಬಿಟ್ಟರು. ನ್ಯಾಯಾಧೀಶರ ಆದೇಶ ಹೊರಡುತ್ತಿದ್ದಂತೆ ಮಹಿಳಾ ಪೇದೆಗಳಾದ ನಾಗಮ್ಮ ಮತ್ತು ಚಂದ್ರಕುಮಾರಿ ಇನ್ಸ್‌ಪೆಕ್ಟರ್ ನಿರ್ಮಲಾರವರನ್ನು ನ್ಯಾಯಾಲಯದ ಆವರಣದಲ್ಲೇ ಇರುವ ತಾತ್ಕಾಲಿಕ ಲಾಕಪ್‌ಗೆ ಸ್ಥಳಾಂತರಿಸಿಬಿಟ್ಟರು.



ಪೊಲೀಸ್ ಲಾಕಪ್‌ನಲ್ಲಿ

ಇದರಿಂದ ವಿಚಲಿತರಾದ ನಿರ್ಮಲ ತಮ್ಮನ್ನು ಬಂಧಿಸಿದ ಮಹಿಳಾ ಪೇದೆಗಳಾದ ಚಂದ್ರಕುಮಾರಿ ಮತ್ತು ನಾಗಮ್ಮನ ಮೇಲೆ ಹರಿಹಾಯ್ದು ನಿಘಂಟಿನಲ್ಲಿಲ್ಲದ ಪದಗಳನ್ನೆಲ್ಲಾ ಬಳಸಿ ವಾಚಾಮಗೋಚರವಾಗಿ ಬೈಯಲಾರಂಭಿಸಿದರು. ಗಲಾಟೆ ಕೇಳಿದ ನ್ಯಾಯಾಧೀಶರು ತಕ್ಷಣವೇ ನಿರ್ಮಲಾರನ್ನು ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರಿಸುವಂತೆ ಸೂಚನೆ ನೀಡಿದರು. ಹೀಗೆ ನ್ಯಾಯಾಲಯದಿಂದ ಹೊರಬಂದ ಇನ್ಸ್‌ಪೆಕ್ಟರ್ ನಿರ್ಮಲ, ಅಲ್ಲಿ ಕರ್ತವ್ಯದಲ್ಲಿದ್ದ ಲಕ್ಷ್ಮಿಪುರಂ ಇನ್ಸ್‌ಪೆಕ್ಟರ್ ಟಿ.ಕೆ. ಧರ್ಮೇಶ್‌ರೊಂದಿಗೆ ಮಾತನಾಡಿ, "ಮನೆಗೆ ಹೋಗಿ ಯೂನಿಫಾರ್ಮ್ ಬದಲಿಸಿ ಬರುತ್ತೇನೆ" ಎಂದು ಹೇಳಿ ತಮ್ಮದೇ ಜೀಪಿನಲ್ಲಿ ಮಹಿಳಾ ಪೇದೆಗಳನ್ನು ಹತ್ತಿಸಿಕೊಂಡು ಹೋದರು. ಹೀಗೆ ಹೋದವರು ಈಗ ಬರಬಹುದು, ಆಗ ಬರಬಹುದು ಎಂದು ಕಾದು ಕೂತಿದ್ದ ಇನ್ಸ್‌ಪೆಕ್ಟರ್ ಧರ್ಮೇಶ್, ಇನ್ನೇನು ನಿರ್ಮಲ ಮನೆಗೆ ಹೊರಡಬೇಕು ಎನ್ನುವಷ್ಟರಲ್ಲಿ, ಬಂದರು ನೋಡಿ ಪೇದೆಗಳಾದ ನಾಗಮ್ಮ ಮತ್ತು ಚಂದ್ರಕುಮಾರಿ. ಹ[...] ಮೋರೆ ಹಾಕಿಕೊಂಡು ಬಂದಿದ್ದ ಇವರಿಬ್ಬರನ್ನು ವಿಚಾ[...]ದಾಗ "ಇನ್ಸ್‌ಪೆಕ್ಟರ್ ನಿರ್ಮಲ ಮಾರ್ಗ ಮಧ್ಯ[...] ನಮಗೆ ಬೈದು- ಹೊಡೆದು ಜೀಪಿನಿಂದ [...] ಹೊರಟು ಹೋದರು" ಎಂದು ಉ[...]ದರು. ಅಲ್ಲಿಂದ ಪೊಲೀಸರ ದ[...] ಇನ್ಸ್‌ಪೆಕ್ಟರ್ ನಿರ್ಮಲ ಮನೆ[...] ದೌಡಾಯಿಸಿತು. ಅಲ್ಲಿ ನೋಡಿ[...] ಇನ್ಸ್‌ಪೆಕ್ಟರ್ ನಿರ್ಮಲಾನೂ [...] ಜೀಪೂ ಇಲ್ಲ, ಆನಂತರ ನಡೆದ[...] ರಹಸ್ಯ ಕಾರ್ಯಾಚರಣೆ.

ಮೈಸೂರಿನಲ್ಲಿ ರೋಚಕ ಪ್ರಸಂಗ



ಜೀಪಿನಲ್ಲಿ ಪರಾರಿ

ಇನ್ಸ್‌ಪೆಕ್ಟರ್ ನಿರ್ಮಲ ಜೀಪಿನ ಸಮೇತ ಪ[...]ಯಾಗಿ ಎಲ್ಲಿಗೆ ಹೋಗಿದ್ದರು? ಆನಂತರ ಮಧ್ಯ[...] ಅವರಿಗೆ ಹೇಗೆ ಜಾಮೀನು ಸಿಕ್ಕಿತು? ಸರ್ಕಾರಿ ವ[...]ರೊಂದಿಗೆ ಮಾತನಾಡಿದವರು ಯಾರು? ಎಂಬು[...] ಇನ್ಸ್‌ಪೆಕ್ಟರ್ ಟಿ.ಕೆ. ಧರ್ಮೇಶ್ ಹೇಳಬೇಕು. ಒಟ್ಟಿ[...] ಮಹಿಳಾ ಪೊಲೀಸ್ ಅಧಿಕಾರಿಯೊಬ್ಬರು ಹೀಗೆ ಯಾ[...] ಕ್ರಿಮಿನಲ್ ತರ ಜೈಲಿಗೆ ಹೋದರೆ ಇಡೀ ಮೈಸೂ[...] ಪೊಲೀಸರ ಮರ್ಯಾದೆಯೇ ಹೋಗುತ್ತದೆ. [...] ಕೊಂಡು ನಗುವವರ ಮುಂದೆ ಎಡವಿ ಬಿದ್ದಂತಾಗ[...] ಎಂದು ನಿರ್ಧರಿಸಿದ ಮೈಸೂರಿನ ಪೊಲೀಸ್ ವ[...] ನ್ಯಾಯಾಧೀಶರ ಮುಂದೆ ಅಂಗಲಾಚಿ ಬೇಡಿಕೊ[...] ಇನ್ಸ್‌ಪೆಕ್ಟರ್ ನಿರ್ಮಲಾರಿಂದ ಕ್ಷಮೆ ಕೇಳಿಸಿ, ಮಧ್ಯ[...] ಜಾಮೀನು ಪಡೆದುಕೊಂಡರಂತೆ.

–ಎಂ.ಎಸ್. ಸತಿ[...]

ಒಳ್ಳೆಯ ಕನ್ನಡಿ ಎಂದರೆ ಹಳೆಯ ಸ್ನೇಹಿತ -ಜಾರ್ಜ್ ಹರ್ಬರ್ಟ್

ಪೈಪ್‌ಲೈನ್ ಅನಿಲನ ದುರಂತ

ರಿವೇಂಜ್ ಕಿಲ್ಲಿಂಗ್ಸ್ 3

ರಾ. ಸೋಮನಾಥ್

ಒಬ್ಬ ಹಕ್ಕಿರಾಮು ಮುಗಿದ ಮಾತ್ರಕ್ಕೇ ಹುಲ್ಲುಛತ್ರ ತಣ್ಣಗಾಗುತ್ತದೆ ಎಂಬುದು ಸುಳ್ಳಾಗಿತ್ತು.

ಕೊರಂಗು ಅಣ್ಣ ಪಾಲಿಕೆ ಕಂಟ್ರಾಕ್ಟರ್ ಮುನಿಯಪ್ಪನನ್ನು ಮಿನರ್ವಾ ಸರ್ಕಲ್ಲಿನ ಕಾರ್ಪೊರೇಷನ್ ಕಚೇರಿಗೇ ನುಗ್ಗಿ ಕತ್ತರಿಸಿದ್ದ ಹಕ್ಕಿರಾಮನಿಗೆ ಕೊಡಬೇಕಿದ್ದ ಸೈಟು ಮತ್ತು ಜೊತೆ ಹಣ ಎರಡನ್ನೂ ವಂಚಿಸಿದ್ದ ಮತ್ತೊಬ್ಬ ಕಂಟ್ರಾಕ್ಟರ್ ಭಗವಾನ್ ಅಂತಿಮವಾಗಿ 'ಬಾ ಸೈಟು ಕೊಡ್ತೇನೆ' ಎಂದು ಹಕ್ಕಿರಾಮನನ್ನು ಕರೆಸಿಕೊಂಡು ಬರ್ಬರವಾಗಿ ಕತ್ತರಿಸಿ ಮೂಟೆ ಕಟ್ಟಿದ್ದ. ಮುಂದೆ ಭಗವಾನ್ ತಮ್ಮ ಸಂಪತ್ತು ಹತ್ಯೆ ಅನಂತರ ಶೇಖ್ರಿಯ ಕೊಲೆ, ತದನಂತರ ಹುಲ್ಲುಛತ್ರದ ರೌಡಿ ಅನಿಲನಿಗೂ ಕೊರಂಗು ತಂಡಕ್ಕೂ ನಡೆದ ಬೀದಿ ಕಾಳಗಗಳು ಮತ್ತು ಈಗ ಬನಾಯ್ಸ್ ರಾಜೇಂದ್ರನ ಶಿಷ್ಯ ಶಿವಮೊಗ್ಗ ನಾಗ ಕೊರಂಗು ಮೇಲೆ ನಡೆಸಿದ ಪ್ರತೀಕಾರಗಳೆಲ್ಲಕ್ಕೂ ಹಕ್ಕಿ ರಾಮನ ಹತ್ಯೆಯೇ ಮುನ್ನುಡಿಯಾಯಿತು.

ಸಾಮಾನ್ಯವಾಗಿ ಒಬ್ಬ ರೌಡಿಯನ್ನು ಆತನ ಎದುರಾಳಿ ಗ್ಯಾಂಗ್ ಮುಗಿಸಿದಾಕ್ಷಣ ಸತ್ತವನ ಶಿಷ್ಯರು ಪ್ರತೀಕಾರಕ್ಕಿಳಿಯುವುದು ಬೆಂಗಳೂರಿನ ಮಟ್ಟಿಗೆ ತೀರ ಅಪರೂಪವೆ. ಹತ ರೌಡಿಗೆ ದೊಡ್ಡಮಟ್ಟದ ಆದಾಯಮೂಲ ಅಥವಾ ಹಫ್ತಾ ಇದ್ದರಷ್ಟೇ ಅದನ್ನು ಉಳಿಸಿಕೊಳ್ಳುವುದಕ್ಕಾಗಿ ಆತನ ಬಂಟರು ಪ್ರತೀಕಾರದ ನೆಪದಲ್ಲಿ ಒಂದಷ್ಟು ರಕ್ತ ಹರಿಸುತ್ತಾರೆ.

ಆದರೆ ಹುಲ್ಲುಛತ್ರದ ವಿಷಯದಲ್ಲಿ ಉಲ್ಟಾ ಹೊಡೆದಿತ್ತು. ರಿವೆಂಜಿಗೆ ಬಿದ್ದ ಹಕ್ಕಿರಾಮನ ಬಂಟರ ಒಂದು ತಂಡ ಮೊದಲು ಭಗವಾನ್‌ನ ತಮ್ಮ ಸಂಪತ್ತನ್ನು ಕೊಂದು ಜೈಲು ಪಾಲಾದರೆ, ಎರಡನೇ ತಂಡ ಭಗವಾನ್‌ನ ಇನ್ನಿಬ್ಬರು ಶಿಷ್ಯರನ್ನು ಮಲ್ಲೇಶ್ವರದ ಆರ್.ಎಂ. ಬಾರ್ ಎದುರಿಗೇ ಕತ್ತರಿಸಿತ್ತು. ಆ ಹೊತ್ತಿಗೆ ಹಕ್ಕಿರಾಮನ ಬಂಟರ ನಾಯಕನಂತಿದ್ದವನು ಹುಲ್ಲುಛತ್ರದ ಶೇಖ್ರಿ. ಜೈಲಲ್ಲಿದ್ದಷ್ಟೂ ದಿನ ಕೊರಂಗು ಆತಿಥ್ಯದಲ್ಲೇ ಇದ್ದ ಆತ ಬರುಬರುತ್ತ ಕೊರಂಗು ಜೊತೆಗೇ ಹೆಚ್ಚು ಕಾಣಿಸಿಕೊಂಡಿದ್ದು ಹುಲ್ಲುಛತ್ರದ ಹುಡುಗರ ಜಾಯಮಾನಕ್ಕೆ ತೀರ ವ್ಯತಿರಿಕ್ತವಾಗಿತ್ತು.

ಇವತ್ತಿಗೂ ಅಷ್ಟೇ. ಮಲ್ಲೇಶ್ವರದ ಹುಲ್ಲುಛತ್ರದ ಹುಡುಗರೆಂದರೆ ಅಕ್ಕಪಕ್ಕದ ಕೋದಂಡರಾಂಪುರ, ಪೈಪ್‌ಲೈನ್, ಗುಟ್ಟಳ್ಳಿ, ನಾಗಪ್ಪ ಬ್ಲಾಕ್ ಮತ್ತು ಶ್ರೀರಾಂಪುರಗಳ ದೊಡ್ಡ ರೌಡಿಗಳೂ ಥರಗುಡುತ್ತಾರೆ. ಹುಲ್ಲುಛತ್ರದ ಹಕ್ಕಿರಾಮನ ಪಡೆಯಲ್ಲಿದ್ದ ತುತ್ತೂರಿ, ಎಳನೀರ್ ಮಂಜ, ಆಟೋ ಮಂಜ, ಮತ್ತೊಬ್ಬ ಮಂಜ, ಸ್ವಿಮ್ಮರ್ ಸೂರಿ, ಶಂಕ್ರ, ಆತನ ತಮ್ಮ ಮಂಜ, ವೆಂಕಟೇಶ, ಕುಳ್ಳಾಮೂರ್ತಿ, ಕೇಬಲ್ ಮೂರ್ತಿ, ಆತನ ತಮ್ಮರಾಜ ಮುಂತಾದವರೆಲ್ಲಾ ಇವತ್ತಿಗೂ ಹುಲ್ಲುಛತ್ರದಲ್ಲೇ ಇದ್ದಾರಾದರೂ ಅವರ್‍ಯಾರೂ ಹೆಸರಾಂತ ರೌಡಿಗಳಲ್ಲ. ಇವರ ನಂತರದ ಪೀಳಿಗೆಯ ಸತ್ತಿ, ಪ್ರಕಾಶ, ಕುಳ್ಳಿ, ಶಂಕ್ರ, ನಾರಾಯಣಿ ಮುಂತಾದ ಪಡ್ಡೆಹುಡುಗರ ಮತ್ತೊಂದು ಪಡೆ ಹುಲ್ಲುಛತ್ರದಲ್ಲಿ ರೆಡಿಯಾಗಿದೆ. ಜನ ಇದನ್ನು 'ಬ' ಟೀಮ್ ಎನ್ನುತ್ತಾರೆ.


ಈ ಪೈಕಿ ಪ್ರತಿಯೊಬ್ಬರ ಬೆನ್ನಿಗೂ ಕನಿಷ್ಠ ಐದು ಮಂದಿ ಹುಡುಗರ ಗ್ಯಾಂಗಿದೆ. ಕೆಲವರದು ಮೀಟರ್ ಬಡ್ಡಿ ದಂಧೆ. ಇನ್ನೂ ಕೆಲವರು ಲಗ್ಗೆರೆ, ಹೆಸರುಘಟ್ಟ ರಸ್ತೆಯ ಬಗಲಗುಂಟೆಯವರೆಗೆ ಹೋಗಿ ಕೇಬಲ್ ದಂಧೆ ನಡೆಸುತ್ತಿದ್ದಾರೆ. ಒಂದಿಬ್ಬರು ಅಕ್ಕಪಕ್ಕದ ಗೀತಾಂಜಲಿ, ಕಾವೇರಿ ಥಿಯೇಟರ್‌ಗಳನ್ನೇ ಅಡ್ಡೆ ಮಾಡಿಕೊಂಡು ಅಲ್ಲಿ ಹುಡುಗರನ್ನಿಟ್ಟು ಬ್ಲಾಕ್ ಟಿಕೆಟ್ ಮಾರಿಸುತ್ತಾರೆ. ಪ್ರತಿಯೊಬ್ಬರಿಗೂ ಅಷ್ಟಿಷ್ಟು ಬಾಡಿಗೆ ಬರುತ್ತದೆ. ಮೂಲತಃ ಕುಣಿಗಲ್-ನಾಗಮಂಗಲದ ಕಡೆಯ ಹುಲ್ಲುಛತ್ರದ ಹುಡುಗರ ವಿಚಿತ್ರ ಸ್ವಭಾವವೆಂದರೆ; ಅವರೊಳಗೇ ಅದೆಷ್ಟೋ ಕಿತ್ತಾಟಗಳಿದ್ದರೂ ಬೇರೆ ಏರಿಯಾದ ಯಾವುದೇ ರೌಡಿಯೊಬ್ಬನ ವಿರುದ್ಧ ಇವರೆಲ್ಲರೂ ಒಟ್ಟಾಗಿಬಿಡುತ್ತಾರೆ. ಅದು ಹುಲ್ಲುಛತ್ರದ ಹುಡುಗರ ಬುದ್ಧಿ.

ಇದೇ ಹುಲ್ಲುಛತ್ರದಲ್ಲಿದ್ದ ಮತ್ತೊಬ್ಬ ರೌಡಿ ಅನಿಲನ ಜೊತೆಗಾಗಲಿ, ಪಕ್ಕದಲ್ಲೇ ಇದ್ದ ರೌಡಿ ಕೊರಂಗು ಸಂಗಡವಾಗಲಿ ಇವರಿಗೆ ದುಷ್ಮನಿಯೂ ಇಲ್ಲ, ಗೆಳೆತನವೂ ಬೇಕಿಲ್ಲ. ಇದನ್ನು ಮೊದಲ ಬಾರಿಗೆ ಮುರಿದವನು ಹಕ್ಕಿರಾಮನ ಬಂಟ ಶೇಖ್ರಿ. ಕುಡಿದನೆಂದರೆ ಜೊತೆಗಿದ್ದವರನ್ನೇ ಹೊಡೆದುಬಿಡುತ್ತಿದ್ದ ಒಟ್ಟಿನಲ್ಲಿ ಆತನಿಗೆ ತಾನೊಬ್ಬ ರೌಡಿ ಎನ್ನಿಸಿಕೊಳ್ಳುವ ಖಯಾಲಿ. ಹಕ್ಕಿರಾಮನ ಹತ್ಯೆಗೆ ಎಲ್ಲರೂ ಸೇರಿಯೇ ಪ್ರತೀಕಾರ ತೀರಿಸಿದ್ದರಾದರೂ ಬರುಬರುತ್ತ ತನ್ನ ಜೊತೆಗಿದ್ದವರನ್ನೇ ಶೇಖ್ರಿ ಹೆದರಿಸತೊಡಗಿದ. ಹಕ್ಕಿ ರಾಮನ ಅಕ್ಕನ ಮಗ ಶಂಕ್ರನನ್ನೇ ಹಿಡಿದು ಹೊಡೆದ.

ಅಲ್ಲಿಗೆ ಮೊದಲ ಬಾರಿಗೆ ಹುಲ್ಲುಛತ್ರದ ಹುಡುಗರಲ್ಲಿ ಬಿರುಕು ಬಂದಿತ್ತು. ಪರಿಣಾಮ ಕೂಡ ಭಯಾನಕವಾಗಿತ್ತು. ಶಂಕ್ರ, ತುತ್ತೂರಿ, ನಟರಾಜ, ಎಳನೀರ್ ಮಂಜ ಮುಂತಾದವರೆಲ್ಲ ಜೊತೆಗೂಡಿ 1998 ರ ಫೆಬ್ರವರಿಯಲ್ಲಿ ಹುಲ್ಲುಛತ್ರದ ಎದುರಿಗೇ ಶೇಖ್ರಿಯನ್ನು ಇರಿದು ಕೊಂದರು. ತನ್ನ ಸ್ನೇಹಿತನ ಹತ್ಯೆಗಾಗಿ ಹುಲ್ಲುಛತ್ರದ ಹುಡುಗರ ಮೇಲೆ ಸೇಡು ಸಾಧಿಸುವಷ್ಟು ಹಿಮ್ಮತ್ತಾಗಲಿ ತಾಕತ್ತಾಗಲಿ ಸ್ವತಃ ಕೊರಂಗುಗೇ ಇರಲಿಲ್ಲ. ಏಕೆಂದರೆ ಅದೇ ವೇಳೆಗೆ ಇದೇ ಹುಲ್ಲುಛತ್ರದ ಅನಿಲ ಮತ್ತು ಕೊರಂಗು ಮಧ್ಯೆ ಎಂಥಾ ವೈಷಮ್ಯ ಭುಗಿಲೆದ್ದಿತ್ತೆಂದರೆ ಹಾಗೊಮ್ಮೆ

ತಾನೇನಾದರೂ ಹುಲ್ಲುಛತ್ರದ ಹುಡುಗರ ಮೇಲೆ ಬಿದ್ದರೆ ಅವರೆಲ್ಲ ಸಾರಾಸಗಟಾಗಿ ಅನಿಲನ ಬೆನ್ನಿಗೆ ನಿಂತು ಬಿಡುವ ಭೀತಿ ಕೊರಂಗುವನ್ನು ಕಾಡುತ್ತಿತ್ತು.

ಪಾಲಿಕೆ ಟೆಂಡರ್ ಮಾಫಿಯಾ ಹುಟ್ಟುಹಾಕಿದ ರೌಡಿಗಳ ಪೈಕಿ ಇವತ್ತಿನ ಬನಾಯ್ಸ್-ಕೊರಂಗು ನಡುವಿನ ಹಣಾಹಣಿಗಿಂತಲೂ ಸುದೀರ್ಘ ಯುದ್ಧ ಅಂತ ನಡೆದದ್ದು ಕೊರಂಗು -ಅನಿಲನ ನಡುವೆಯೇ.





ಪೈಪ್‌ಲೈನ್ ಅನಿಲ


ಜನ ಅವನನ್ನು ಪೈಪ್‌ಲೈನ್ ಅನಿಲ ಎಂದೇ ಕರೆಯುತ್ತಿದ್ದರು. ಘನಂಧಾರಿ ಆಳೇನಲ್ಲದ ಆದರೆ ಮಹಾನ್ ಕಿಲಾಡಿಯಾಗಿದ್ದ, ಸಣ್ಣಗೆ ಕುರುಚಲು ಗಡ್ಡಬಿಟ್ಟಿದ್ದ, ಚುರುಕು ಕಂಗಳ, ಯಾವತ್ತೂ ತುಂಬು ತೋಳಿನ ಶರ್ಟು ಧರಿಸುತ್ತಿದ್ದ ಅನಿಲನಿಗೂ ಕೊರಂಗುವಿಗೂ 1996 ರಿಂದ 2000 ದ ಜುಲೈ ತನಕ ಕಮ್ಮಿಯೆಂದರೂ ಐದು ಬಾರಿ ನಡುರಸ್ತೆ ಮಾರಾಮಾರಿ ನಡೆದಿತ್ತು. ಇಡೀ ಬೆಂಗಳೂರಿನ ಕ್ರೈಂ ಜಗತ್ತು ಒಂದೋ ಅನಿಲನ ಕೈಯಲ್ಲಿ ಕೊರಂಗು ಕೊಲೆಯಾಗುತ್ತಾನೆ ಅಥವಾ ಕೊರಂಗು ಅನಿಲನನ್ನೇ ಮುಗಿಸುತ್ತಾನೆಂದು ನಿರೀಕ್ಷೆಯಿಟ್ಟುಕೊಂಡಿತ್ತು.


ಅದು ಹಕ್ಕಿ ಜೂಜಿನ ಸಣ್ಣ ಜಗಳ ಮತ್ತು ಅದಕ್ಕೆ ನೀರೆರೆದದ್ದು once again ಇದೇ ಕಾರ್ಪೊರೇಷನ್ ಟೆಂಡರ್ ಮಾಫಿಯಾ. 1996 ರ ಹೊತ್ತಿಗೆ ಉಪ್ಪಿ ನಿರ್ದೇಶನದಲ್ಲಿ ಶಿವರಾಜ್‌ಕುಮಾರ್ ರೌಡಿಯಾಗಿ 'ಓಂ' ಚಿತ್ರ ಬಿಡುಗಡೆಯಾಗಿತ್ತು. ಅದರ ಪ್ರಾರಂಭದಲ್ಲಿ ಏನೋ ಜ್ಞಾನೋದಯವಾದರಂತೆ ಚಿಕ್ಕನ್ ಕಣ್ಣು ರಾಜೇಂದ್ರ, ತನ್ವೀರ್ ಮತ್ತು ಕೊರಂಗು ಥರದ ರೌಡಿಗಳು ತಮಗಿನ್ನು ಗೂಂಡಾಗಿರಿ ಸಾಕು ಎಂದು ಮಚ್ಚನ್ನು ಎತ್ತಿ ಬಿಸಾಡುವ ದೃಶ್ಯವಿತ್ತು. ಆ ಹೊತ್ತಿಗೆ ಜೇಡರಹಳ್ಳಿ ಕೃಷ್ಣಪ್ಪನ ಬಲಗೈ ಬಂಟನಂತಿದ್ದ ಕೊರಂಗು ಸಿನಿಮಾದಲ್ಲೇನೋ ರೇಜರ್ ಬಿಸಾಕಿದ್ದನಾದರೂ ವಾಸ್ತವವಾಗಿ ಬಾಂಬ್ ಕೈಗೆತ್ತಿಕೊಂಡುಬಿಟ್ಟಿದ್ದ.

ಅದಕ್ಕಿದ್ದ ಏಕೈಕ ಕಾರಣವೇ ಈ ಪೈಪ್‌ಲೈನ್ ಅನಿಲ. ಹುಲ್ಲುಛತ್ರದ ಒಳಗೇ ಈತನ ಮನೆಯಿತ್ತು. ಈತನ ತಂದೆ ಮುನಿಯಪ್ಪ ಕೂಡ ಕಮ್ಮಿ ಆಸಾಮಿಯೇನಲ್ಲ. ಆ ಕಾಲಕ್ಕೇ ಮೆಜೆಸ್ಟಿಕ್‌ನ ಕುಖ್ಯಾತ ಜುಗಾರಿ ಅಡ್ಡೆಗಳಲ್ಲೊಂದಾದ ಬ್ಲೂಸ್ಟಾರ್ ಇಸ್ಪೀಟ್ ಕ್ಲಬ್ಬಿಗೆ ಪಾಲುದಾರನಾಗಿದ್ದ. ದುಡಿಯದೇ ಜೀವನವಿಡೀ ಕುಂತು ಉಣ್ಣಬಹುದಾದಷ್ಟು ಅನುಕೂಲಸ್ಥನಾಗಿದ್ದ ಅನಿಲ ಪದೇಪದೇ ತನ್ನ ಐಷಾರಾಮಿ ಕಾರುಗಳನ್ನು ಬದಲಿಸುತ್ತಿದ್ದ. ಮಲ್ಲೇಶ್ವರದ ಸ್ವಿಮ್ಮಿಂಗ್ ಪೂಲ್ ಬಡಾವಣೆಯಲ್ಲಿ ತನ್ನದೇ ಟ್ರಾವಲ್ಸ್ ಅಡ್ಡೆಯೊಂದನ್ನು ನಡೆಸಿಕೊಂಡಿದ್ದ. ಆತನ ಸುತ್ತ ಯಾವತ್ತೂ ಕನಿಷ್ಠ ಐವತ್ತು ಮಂದಿ ಹುಡುಗರ ಹಿಂದಿರುತ್ತಿತ್ತು.









ಆತನ ಅಣ್ಣ ಸುರೇಂದ್ರ ಹೇಳಿಕೇಳಿ ಬೆಂಗಳೂರು ಕಾರ್ಪೊರೇಷನ್ನಿಗೆ ಕಂಟ್ರಾಕ್ಟರ್ ಆಗಿದ್ದ, ಮತ್ತೊಬ್ಬ ಚಂದ್ರ ಕೂಡ ಅಣ್ಣನ ಬೆಂಗಾವಲಿಗಿರುತ್ತಿದ್ದ.

ಒಂದಾನೊಂದು ಕಾಲಕ್ಕೆ ಕೊರಂಗು ಮತ್ತು ಅನಿಲ ಇಬ್ಬರೂ ಡಾನ್ ಜೈರಾಜ್ ಪಡೆಯಲ್ಲಿದ್ದವರೆ. ಅದಕ್ಕೂ ಮುನ್ನ ದಿವಾಕರ ಹೆಗಡೆಯ ಅನುಯಾಯಿಯಾಗಿ ಬೆಂಗಳೂರಿನ ವಿದ್ಯಾರ್ಥಿ ರಾಜಕಾರಣದ ಮುಂಚೂಣಿಯಲ್ಲಿದ್ದ ಅನಿಲನ ಕೈಗೆ ಮಚ್ಚು ಕೊಟ್ಟವನು ಬಲರಾಮ. ಅವತ್ತು ಕೊತ್ವಾಲ್ ರಾಮಚಂದ್ರನನ್ನು ಮುಗಿಸಲು ಜಯರಾಜ್ ಜೊತೆ ಕೈ ಜೋಡಿಸಿದ್ದ ದಿವಾಕರ ಹೆಗಡೆ

ತನಗೆ ನಂಬಿಕಸ್ಥ ಡ್ರೈವರ್ ಆಗಿಟ್ಟುಕೊಂಡಿದ್ದು ಇದೇ ಅನಿಲನನ್ನು. ಆರ್.ವಿ. ಹರೀಶ್ ಶಿಷ್ಯ ತಂಬು ಗಾಂಧಿನಗರದ ಕುರುಬರ ಹಾಸ್ಟೆಲಿನ ಮೆಟ್ಟಿಲುಗಳ ಮೇಲೆ ದಿವಾಕರ್ ಹೆಗಡೆಯನ್ನು ಕೊಚ್ಚಿ ಕೊಂದ ನಂತರ ಅನಿಲ ರೌಡಿ ಬಲರಾಮನ ಜೊತೆ ಬಿದ್ದ. ಹೈಲ್ಯಾಂಡ್ ಹೋಟೆಲಿನ ಆವರಣದಲ್ಲಿ 1987 ರಲ್ಲಿ ಬಲರಾಮನ ಮೇಲೆ ಚಿಕ್ಕನ್‌ಕಣ್ಣು ರಾಜೇಂದ್ರನ ಗ್ಯಾಂಗ್ ಅಟ್ಯಾಕ್ ಮಾಡಿದಾಗ ಅವತ್ತು ಬಲರಾಮನ ಜೊತೆಗಿದ್ದವನು ಇದೇ ಅನಿಲ. ಕೊತ್ವಾಲ್‌ನನ್ನು ಆತನ ಜೊತೆಗಿದ್ದವರೇ ಕೊಂದು ಹಾಕಿದಾಗ ಅವನ ಹೆಣವನ್ನು ಅನಿಲನೇ ಸಾಗಿಸಿ ತಂದಿದ್ದ. ಕೊತ್ವಾಲ್ ಕೊಲೆ ಕೇಸಿನಲ್ಲಿ ಜೈಲು ಸೇರಿದ ಅನಿಲ ಹೊರಬರುತ್ತಿದ್ದಂತೆ ಮಲ್ಲೇಶ್ವರದ ಪ್ರಭ ಕೊಲೆಯಾದ. ಇದರಲ್ಲಿ ಅನಿಲನ ಪಾತ್ರವೇನೂ ಇಲ್ಲದೇ ಹೋದರೂ ಪೊಲೀಸರೂ ಕೊರಂಗು ಜೊತೆ ಅನಿಲನನ್ನು ಫಿಟ್ ಮಾಡಿ ಜೈಲಿಗೆ ಹಾಕಿಬಿಟ್ಟರು. ಅಲ್ಲಿಯತನಕ ಅನಿಲ ಮತ್ತು ಕೊರಂಗು ಚಡ್ಡಿದೋಸ್ತ್‌ಗಳೇ.

ಕೋದಂಡರಾಂಪುರದ ಪಾಲಿಕೆ ಟೆಂಡರ್ ಮಾಫಿಯಾಕ್ಕೂ ಪೈಪ್‌ಲೈನಿನ ಪಾರಿವಾಳದ ಜೂಜಿಗೂ ಅದ್ಯಾವ ಬಾದರಾಯಣ ಸಂಬಂಧವಿತ್ತೊ? ಇಲ್ಲಿ ರೌಡಿಗಳ ಮಧ್ಯೆ ವೈಷಮ್ಯ ಹುಟ್ಟಿಕೊಳ್ಳುವುದು ಹಕ್ಕಿ ಜೂಜಿನಲ್ಲಾದರೆ ಅದು ಅಂತ್ಯಗೊಳ್ಳುವುದು ಕಾರ್ಪೊರೇಷನ್ನಿನ ಭೋಗಸ್ ಬಿಲ್ ದಂಧೆಯಲ್ಲಿ. ಹಾಗೇ 1995 ರ ಸುಮಾರಿಗೆ ಪಾರಿವಾಳದ ಜೂಜಿನಲ್ಲಿ ಅನಿಲ ಮತ್ತು ಕೊರಂಗು ಮಧ್ಯೆ ಹುಟ್ಟಿಕೊಂಡ ಜಗಳ ಕ್ರಮೇಣ ಇಡೀ ಕೋದಂಡರಾಂಪುರವನ್ನೇ ತಲ್ಲಣಿಸಿತ್ತು. ಕೊರಂಗು ನಡುರಸ್ತೆಯಲ್ಲೇ ಅನಿಲನ ಮೇಲೆ ಅಟ್ಯಾಕ್ ಮಾಡಿದನೆಂದು ಕೊರಂಗುವನ್ನು ಹಿಡಿದು ಅನಿಲ ಬಡಿದ. ಆವತ್ತು ಕೂಡ ಕೊರಂಗುನ ಬದ್ಧ ವೈರಿಗಳಾಗಿದ್ದ ಬನಾಯಸ್ ಮತ್ತು ಆತನ ಗುರು ಪಾಲಿಕೆ ಕಂಟ್ರಾಕ್ಟರ್ ಲೊಡ್ಡೆ ಚಂದ್ರನ ಗ್ಯಾಂಗ್ ಅನಿಲನ ಬೆಂಬಲಕ್ಕೆ ನಿಂತಿತ್ತು.

ಹಕ್ಕಿರಾಮನನ್ನು ಕೊಂದ ಭಗವಾನ್ ಅನಿಲನನ್ನು ಬೆಂಬಲಿಸುತ್ತಿದ್ದಾನೆಂದು ಕೊರಂಗು ಆತನ ಮನೆ ಮೇಲೆಯೇ ಬಾಂಬ್ ಹಾಕಿದ್ದ. ಕೊರಂಗು ಅಣ್ಣ ಮುನಿರತ್ನಂ ಆ ಹೊತ್ತಿಗೆಲ್ಲ ಬಿಡುವಿಲ್ಲದ ಪಾಲಿಕೆ ಕಂಟ್ರಾಕ್ಟರ್. ಮುನಿಯನನ್ನೇ ಮುಗಿಸಿಬಿಟ್ಟರೆ ಕೊರಂಗುನ ಅರ್ಧ ಅಟ್ಟಹಾಸ ಮುಗಿದಂತೆಯೇ ಎಂದು ಭಾವಿಸಿ ಮುನಿಯನನ್ನೇ ತೆಗೆದುಬಿಡಲು ಅನಿಲ ಸ್ಕೆಚ್ ಹಾಕಿದ್ದಾನೆಂಬ ಸುದ್ದಿ ಬಂದಿದ್ದೇ ತಡ ಹುಷಾರಾದ ಚಿಕ್ಕನ್‌ಕಣ್ಣು ರಾಜೇಂದ್ರ ಮುನಿ ಮತ್ತು ಅನಿಲನ ಮಧ್ಯೆ ರಾಜಿ ಮಾಡಿಸಿದ್ದ.

ಆವತ್ತು ಮುನಿ 'ಅವನುಂಟು ನೀನುಂಟು, ನಾನು ಮಾತ್ರ ನಿಮ್ಮಿಬ್ಬರ ಯಾವ ಜಗಳಕ್ಕೂ ಕೈ ಹಾಕೋಲ್ಲ' ಎಂದೇ ಕೈಮುಗಿದಿದ್ದ. ಆದರೆ ಕೊರಂಗು ಮಾತ್ರ ಅನಿಲನ ವಿರುದ್ಧ ಯಾಕಾಟ ತಲೆ ಕೆಡಿಸಿಕೊಂಡಿದ್ದನೆಂದರೆ, 1995 ರಲ್ಲಿ ಫಸ್ಟ್ ಬ್ಲಾಕ್ ರಾಜಾಜಿನಗರದ ಗುಂಡ್ರು ವೆಂಕಟೇಶನ ಹೋಲ್‌ಸೇಲ್ ಲಿಕ್ಕರ್ [illegible] ಅನಿಲ ಕೂತಿದ್ದಾನೆಂಬ ಸುದ್ದಿ ಸಿಕ್ಕಿದ್ದೇ, ಸಣ್ಣದೊಂದು ಟೀಮ್ ಕಟ್ಟಿಕೊಂಡು ಹೋಗಿ ಅದರ ಮೇಲೆ ಒಂದರ ಮೇಲೊಂದರಂತೆ ಐದು ಕೈಬಾಂಬುಗಳನ್ನು ಎಸೆದಿದ್ದ. ನಿಜಕ್ಕೂ ಅನಿಲ ಅಲ್ಲಿ ಇರಲೇ ಇಲ್ಲ. ಹಾಗೇ ಬಾಂಬ್

ಹಾಕಿ ತನ್ನ ಜೊತೆ ರಾಂಗ್ ಓಡಿದ ಒಂದಿಬ್ಬರು ಜೀನ್ಸ್‌ಧಾರಿ ಹುಡುಗಿಯರಷ್ಟೂ ಕರೆತಂದಿದ್ದ ಕೊರಂಗು ಅಲ್ಲಿಂದ ನೇರವಾಗಿ ಮತ್ತೆ ಕೋದಂಡರಾಂಪುರಕ್ಕೆ ಬಂದು ಮನೆ ಹೊಸ ಎಸ್ಟೀಮ್ ಕಾರ್ ಕಿತ್ತುಕೊಂಡಿದ್ದ ಅಂದ್ರಕ್ಕೆ ಪರಾರಿಯಾಗಿದ್ದ.

ಆಗ ಮಹಾಲಕ್ಷ್ಮಿ ಲೇಔಟ್ ಪೊಲೀಸ್ ಠಾಣೆಗೆ ಇನ್ಸ್‌ಪೆಕ್ಟರ್ ಆಗಿದ್ದ ಸ. ಹನುಮಂತಪ್ಪ ಭಾರೀ ಸಾಹಸ ಮಾಡಿಯೇ ಕೊರಂಗುನನ್ನು ಹಿಡಿದು ತಂದರು. ಹಾಗೆ ಜೈಲು ಸೇರಿದ ಕೊರಂಗು ಅಷ್ಟಕ್ಕೇ ಸುಮ್ಮನಾಗಲಿಲ್ಲ. ಬಾಂಬ್ ಕೇಸಿಗೆಂದು ಕೋರ್ಟಿಗೆ ಬಂದವನು ತನ್ನ ಎಸ್ಕಾರ್ಟಿಗಿರುತ್ತಿದ್ದ ಪೊಲೀಸರ ಸಮೇತ ಕೋದಂಡರಾಂಪುರಕ್ಕೆ ಬಂದು ಎಲ್ಲೆಂದರಲ್ಲಿ ವಸೂಲಿ ಮಾಡಿಕೊಂಡು ಹೋಗುತ್ತಿದ್ದ. ಇದು ಹೇಗೋ ಅನಿಲನಿಗೆ ಗೊತ್ತಾಯಿತು. ಹಾಗೇ ಕಾವಲಿಗಿದ್ದ ಪೊಲೀಸರ ಸಮೇತ ವಸೂಲಿ ಮಾಡಿಕೊಂಡು ತನ್ನ ಮನೆಗೂ ಬಂದು ವಾಪಸ್ಸು ಹೋಗುತ್ತಿದ್ದ ಕೊರಂಗು ಮೇಲೆ ಅನಿಲನ ಗ್ಯಾಂಗ್ ದೊಡ್ಡ ಮಟ್ಟದಲ್ಲೇ ದಾಳಿ ನಡೆಸಿತು. ಜೊತೆಗಿದ್ದ ಪೊಲೀಸರಿಗೂ ಪೆಟ್ಟು ಬಿತ್ತಾದರೂ ಅವತ್ತು ಕೊರಂಗು ಯಾರದೋ ಬೈಕ್ ಕಿತ್ತುಕೊಂಡಿದ್ದೇ ಎಸ್ಕೇಪಾಗಿಬಿಟ್ಟ.

ಇದಾದ ನಂತರ ಕೊರಂಗು ಬೆಂಬಲಿಗರಿಬ್ಬರನ್ನು ಅನಿಲ ನಡುರಸ್ತೆಯಲ್ಲೇ ಕತ್ತರಿಸಿದ್ದ. ಇದು ಬೆಂಗಳೂರಿನ ಪೊಲೀಸರ ಪಾಲಿಗೆ ಎಂಥಾ ತಲೆನೋವಾಯಿತೆಂದರೆ; ವೈಯಾಲಿಕಾವಲ್, ಮಲ್ಲೇಶ್ವರ ಮತ್ತು ಶೇಷಾದ್ರಿಪುರದ ಪೊಲೀಸರಂತೂ ಇಬ್ಬರಲ್ಲೊಬ್ಬರು ಕೊಲೆಯಾಗುವುದೇ ಇದಕ್ಕೆ ಅಂತಿಮ ಪರಿಹಾರ ಎಂಬ ನಿರ್ಧಾರಕ್ಕೆ ಬಂದು ಬಿಟ್ಟಿದ್ದರು.

ಆದರೆ ವಿಧಿಯ ಲೆಕ್ಕಾಚಾರವೇ ಬೇರೆಯಿತ್ತು. ಕೇಸಿಗೆಂದು ಬಂದು ಕೋದಂಡರಾಂಪುರದಲ್ಲಿ ಅನಿಲನ ಹುಡುಗರಿಂದ ಬಚಾವಾಗಿದ್ದೇ ಕೊನೆ ಮತ್ತೆಂದೂ ಅನಿಲ ಮತ್ತು ಕೊರಂಗು ಮುಖಾಮುಖಿಯಾಗಲೇ ಇಲ್ಲ. ಜೈಲಿಂದ ಹೊರಬಿದ್ದ ಕೊರಂಗು ಅನಿಲನ ಪೌರುಷಕ್ಕೆ ಹೆದರಿಕೊಂಡೇ ಆಂಧ್ರ ಸೇರಿಕೊಂಡ.

ಬಹುಶಃ ಅನಿಲ ಬದುಕಿದ್ದರೆ ಈ ಹೊತ್ತಿಗೆ ಬೆಂಗಳೂರು ಅಂಡರ್‌ವರ್ಲ್ಡ್‌ನ ಚಿತ್ರಣ ಏನಾಗಿರುತ್ತಿತ್ತೊ! ಪಾರಿವಾಳದ ಕ್ಷುಲ್ಲಕ ಕಿತ್ತಾಟದಲ್ಲಿ ಶುರುವಾದ ವೈಷಮ್ಯ ಇಡೀ ಬೆಂಗಳೂರನ್ನೇ ನಡುಗಿಸುವಂಥ ಮಾರಾಮಾರಿಗೆ ಕಾರಣವಾಗಿತ್ತು. ಇಷ್ಟೆಲ್ಲದರ ನಡುವೆಯೂ ಕೊರಂಗು ಮುಗಿಸಲ್ಲು ಸಕಲ ತಯಾರಿ ನಡೆಸಿಕೊಂಡೇ ಇದ್ದ ಅನಿಲನ ದೌರ್ಭಾಗ್ಯವೋ ಏನೋ; 1999 ರ ಆಗಸ್ಟ್ ಹೊತ್ತಿಗೆ ಇದ್ದಕ್ಕಿದ್ದಂತೆ ಆತನ ಆರೋಗ್ಯ ಹದಗೆಟ್ಟಿತು. ಸಣ್ಣಗೆ ಶುರುವಾದ ಜ್ವರ ಬಿಡಲೇ ಇಲ್ಲ, ಬರುಬರುತ್ತ ಅನಿಲ ತನ್ನ ಗಾತ್ರದ ನಾಲ್ಕನೇ ಒಂದು ಭಾಗಕ್ಕೆ ಕುಗ್ಗಿಹೋದ.

ಬಹುಶಃ ತನಗಿದ್ದ ಆ ನಿಗೂಢವ್ಯಾಧಿ ಯಾವುದೆಂದು ಅನಿಲನಿಗೆ ಗೊತ್ತಿದ್ದರಿಂದಲೇ ಆತ ವಯಸ್ಸು ಮೂವತ್ನಾಲ್ಕಾದರೂ ಮದುವೆಯಾಗಿರಲಿಲ್ಲವೋ, ಅಥವಾ ತನ್ನ ವೈರಿ ಕೊರಂಗುವನ್ನು ಕೊಂದ ನಂತರವೇ ಮದುವೆಯಾಗುತ್ತೇನೆಂಬ ಹಠಕ್ಕೆ ಬಿದ್ದಿದ್ದನೋ ಗೊತ್ತಿಲ್ಲ. ಹೇಗಿದ್ದರೂ ಸಾಯುತ್ತೇನೆಂದು ಆತನಿಗೆ ಮೊದಲೇ ಗೊತ್ತಿರಬೇಕು. ಇಲ್ಲದಿದ್ದರೆ ಅಷ್ಟೊಂದು ತಲೆ ಕೆಡಿಸಿಕೊಂಡು ಆತ ಪದೇಪದೇ ಕೊರಂಗು ಅಡ್ಡೆಗಳ ಮೇಲೆ ದಾಳಿ ಮಾಡುತ್ತಿರಲಿಲ್ಲ. ಈ ರೀತಿ ಯಾವಾಗೆಂದರೆ ಆಗ ಪೊಲೀಸರ ಕೈಗೆ ಸಿಕ್ಕಿ ಲಾಕಪ್ಪು-ಟಾರ್ಚರ್ ಸಹಿಸಿಯೂ ಕೊರಂಗು ಮುಗಿಸಲು ಆತ ಪಣತೊಡುತ್ತಿರಲಿಲ್ಲ. ಕೋದಂಡರಾಂಪುರದ ಇಂಥ ಸುದೀರ್ಘ ಗ್ಯಾಂಗ್‌ವಾರ್‌ನ ಒಂದು ಅಧ್ಯಾಯ ಕೊನೆಗೂ ಮುಗಿದದ್ದು 2000 ದ ಜುಲೈ ಹದಿನೇಳರಂದು!

ತೀರ ಕೃಶನಾಗಿ ಗುರುತೇ ಸಿಗದಷ್ಟು ಕುಗ್ಗಿಹೋಗಿದ್ದ ಅನಿಲನನ್ನು ಮೊದಲು ಮಣಿಪಾಲ್ ಆಸ್ಪತ್ರೆ, ಅನಂತರ ಮಲ್ಲೇಶ್ವರ ಮಾರುತಿ ನರ್ಸಿಂಗ್ ಹೋಮ್. ಅಲ್ಲೂ ಫಲ ಕಾಣದೆ ಕೊನೆಗೆ ಮನೆಗೇ ತಂದಿಟ್ಟುಕೊಂಡಿದ್ದಲ್ಲವೂ ಅವತ್ತು ವ್ಯರ್ಥಗೊಂಡಿತ್ತು. ಹುಲ್ಲುಛತ್ರದ ತನ್ನ ಮನೆಯಲ್ಲೇ ಅನಿಲ ಹೆಣವಾಗಿದ್ದ.

ಅಲ್ಲಿಗೆ ಕೋದಂಡರಾಂಪುರ ಕಂಡ ಅತ್ಯಂತ ಸುದೀರ್ಘ ಮತ್ತು ಭಯಾನಕ ಗ್ಯಾಂಗ್‌ವಾರ್ ಮುಗಿದಿತ್ತಾದರೂ ಅದರ ಮತ್ತೊಂದು ಅಧ್ಯಾಯವೋ ಎಂಬಂತೆ ಬನಾಯಸ್ ಅನಿಲನ ಸ್ಥಾನಕ್ಕೆ ಬಂದು ನಿಂತಿದ್ದ. ಅದು ಅಷ್ಟಕ್ಕೇ ಸೀಮಿತಗೊಂಡಿದ್ದರೆ ಅಪಾಯವೇನಿರಲಿಲ್ಲ. ಆದರೆ ಯಾವ ಜೇಡ ನೆರಳಲ್ಲಿ ಆತನಿಗೆ ಕೊರಂಗು ಬೇರುಬಿಟ್ಟಿದ್ದನೋ ಅಂಥ ಮಹಾನ್ ಶಕ್ತ ಜೇಡಿಯ ವಿರುದ್ಧವೇ ಕೊರಂಗು ತಿರುಗಿಬಿದ್ದ.

ಅದಕ್ಕೆ ಕಾರಣವಾದವನು ಇವತ್ತಿನ ಇಡೀ ಜೇಡಿ ಸಾಮ್ರಾಜ್ಯದ [illegible] ನಾಯ್ಡು ಉರ್ಫ್ ಅಲಿಯಾಸ್

(ಮುಂದುವರಿಯುವುದು)

ಪಾಲಿಕೆಯ ಚಟಗುಪ್ಪಿ ಹಾಸ್ಪಿಟಲ್
ಇಂಜಕ್ಷನ್‌ಗೆ ಥ್ರಿ ಥೌಸಂಡ್ ಒನ್ಲಿ!



ಹೌದು. ಹೆಪಟೈಟಿಸ್ ಬಿ ಚುಚ್ಚುಮದ್ದಿಗೆ ಡಾ. ದಾಕ್ಷಾಯಣಮ್ಮ 'ವಸೂಲಿ' ಮಾಡಿದ್ದು ಒನ್ಲಿ ಥ್ರಿ ಥೌಸಂಡ್ ರುಪೀಸ್!


ಡಾ. ದಾಕ್ಷಾಯಣಿ ಕೆಲಸ ಮಾಡುವ ಮಹಾನಗರ ಪಾಲಿಕೆಯ ಚಟಗುಪ್ಪಿ ಆಸ್ಪತ್ರೆಯ ಹುಣದಾತವಿದು. ಹೆಗ್ಗೇರಿಯ ಹೇಮಾ ನಾರಾಯಣಕರ್‌ರವರು ಅಕ್ಟೋಬರ್ 25 ರಂದು ಈ ಆಸ್ಪತ್ರೆಯಲ್ಲಿ ಹೆರಿಗೆ ಮಾಡಿಸಿಕೊಂಡರು. 'ತಾಯಿಗೆ ಹೆಪಟೈಟಿಸ್ ಬಿ ಇರುವುದರಿಂದರ ಮಗುವಿಗೆ ಮುಂಜಾಗ್ರತೆ ಕ್ರಮವಾಗಿ ಇಂಜಕ್ಷನ್ ಕೊಡಬೇಕು' ಎಂದು ಹೇಳಿದ ಡಾಕ್ಟರಮ್ಮ, 'ಈ ಇಂಜಕ್ಷನ್ ಆಸ್ಪತ್ರೆಯಲ್ಲಿ ಇಲ್ಲ... ಅದಕ್ಕೆ 4 ಸಾವಿರ ರೂಪಾಯಿ ಕೊಡಬೇಕಾಗುತ್ತೆ' ಎಂದಿದ್ದಾಳೆ. ಬಡವಿ ಹೇಮಾಳ ಗಂಡ ರವಿ ಹೇಗೋ 3 ಸಾವಿರ ಹೊಂದಿಸಿ ತಂದು ಕೊಟ್ಟಿದ್ದಾನೆ. ಡಾಕ್ಟರಮ್ಮ ಆಸ್ಪತ್ರೆಯ ಹಿಂದಿರುವ ತನ್ನ ಮನೆಗೆ ಕರೆಸಿ ಫ್ರಿಜ್‌ನಿಂದ ಔಷಧಿ ತೆಗೆದು ಇಂಜಕ್ಷನ್ ನೀಡಿದ್ದಾಳೆ!

ಹೊರಗಡೆ 900 ರಿಂದ 1500 ರೂ.ಗಳಲ್ಲಿ ಈ ಇಂಜಕ್ಷನ್ ಹಾಕಿಸಿಕೊಳ್ಳಬಹುದು. ಡಾಕ್ಟರಮ್ಮ ಆಸ್ಪತ್ರೆಯ ರಿಜಿಸ್ಟರ್‌ನಲ್ಲೂ ದಾಖಲಿಸ ಲಿಲ್ಲ. ಆಸ್ಪತ್ರೆ ಔಷಧ ಮನೆಯಲ್ಲಿ! ಅದನ್ನು ಮಾರಿಕೊಳ್ಳುವುದು ಡಬಲ್ ರೇಟಿಗೆ! ಡಾ. ದಾಕ್ಷಾಯಣಿಗೆಷ್ಟು ಧೈರ್ಯ ನೋಡಿ? ಏಕೆಂದರೆ ಇಡೀ ಆಸ್ಪತ್ರೆ ಬಡವರ ಪಾಲಿಗೆ ನರಕವಾಗಲು ಕಾರಣನಾಗಿರುವ ಮುಖ್ಯ ವೈದ್ಯಾಧಿಕಾರಿ ಡಾ. ಎ.ಬಿ. ಚಿನ್ನಣ್ಣನವರ್ ಡಾ. ದಾಕ್ಷಾಯಣಿಯ ಹಸ್‌ಬಂಡು!

ಹುಬ್ಬಳ್ಳಿ

ಔಷಧಿ ಬೆಲೆ ಕಡಿಮೆ ಇದೆ ಎಂಬುದು ಗೊತ್ತಾದಾಗ ಹೇಮಾ ಗಂಡ ರವಿ ಡಾ. ದಾಕ್ಷಾಯಣಿಗೆ 1500 ರೂ. ವಾಪಸ್ ಕೊಡುವಂತೆ ಕೇಳಿದ್ದಾನೆ. ದಾಕ್ಷಾಯಣಿ ದೇವಿ 'no, no' ಎಂದಿದ್ದಾಳೆ. ರವಿ ಸೀದಾ ಹೋಗಿ ಪಾಲಿಕೆಯ ಸಹಾಯಕ ಆಯುಕ್ತ, ಭ್ರಷ್ಟರ ಲಿಸ್ಟ್‌ನಲ್ಲಿ ಟಾಪ್ ಪೊಸಿಷನ್‌ನಲ್ಲಿರುವ ಕಳಸಣ್ಣವರ್‌ಗೆ ದೂರು ನೀಡಿದ್ದಾನೆ. ಜೊತೆಗೆ ಮುಖ್ಯ ವೈದ್ಯಾಧಿಕಾರಿ, ದಾಕ್ಷಾಯಣಿ ಗಂಡ ಡಾ. ಚಿನ್ನಣ್ಣನವರ್‌ಗೂ ಈ ಕುರಿತು ಹೇಳಿದ್ದಾನೆ. ರವಿಗೆ ಯಾರೂ ಕೇರ್ ಮಾಡಿಲ್ಲ.

ಕೊನೆಗೆ ದಲಿತ ಧುರೀಣ ಪ್ರಸಾದ್ ಅಬ್ಬಯ್ಯ, ರಾಜಶೇಖರ ಮೆಣಸಿನಕಾಯಿ, ಬಾಬಾಜಾನ್ ಮುಧೋಳರೆಲ್ಲ ಹೋಗಿ ಪಾಲಿಕೆಯ ಸಾರ್ವಜನಿಕ ಸಂಪರ್ಕಾಧಿಕಾರಿ ಡಾ. ನಿಟ್ಟಾಲಿಯನ್ನು ವಿಚಾರಿಸಿದ್ದಾರೆ. ಬದ್ಮಾಷ್ ನಿಟ್ಟಾಲಿ "ಡಾಕ್ಟ್ರು ಎಷ್ಟ್ ಕೇಳ್ತಾರ ಅಷ್ಟು ರೊಕ್ಕ ಕೊಡಬೇಕ್ರಿ, ಪುಗಸಟ್ಟೆ ಇಂಜಕ್ಷನ್ನು ಕೊಡಾಕ ಆಗುತ್ತನು?" ಅಂತಾ ಹೇಳಿದ್ದಾನೆ. ಆಗಲೇ ರಸ್ತೆ ಬಂದ್ ಮಾಡಿ ಪ್ರತಿಭಟನೆ ಶುರು ಮಾಡಿದ್ದಾರೆ. ಆಗ ಎಂಟ್ರಿ ಹೊಡೆದ ಟಾಪ್ ಭ್ರಷ್ಟ ಕಳಸಣ್ಣವರ್ ಡಾಕ್ಟರಮ್ಮನಿಂದ 1500 ರೂ.ಗಳನ್ನು ರವಿಗೆ ವಾಪಸ್ ಕೊಡಿಸಿದ್ದಾನೆ. ಧರಣಿ ನಿರತರು ಡಾ. ನಿಟ್ಟಾಲಿ ಮತ್ತು ಡಾ. ದಾಕ್ಷಾಯಣಿ ಅಮಾನತ್ತಿಗೆ ಆಗ್ರಹಿಸಿ, ಗಡುವು ನೀಡಿ ಪ್ರತಿಭಟನೆ ನಿಲ್ಲಿಸಿದ್ದಾರೆ.



ಎ.ಬಿ. ಚಿನ್ನಣ್ಣ (ದ್ರಾಕ್ಷಾಯಣಿಯ ಗಂಡ) ಕಳಸಣ್ಣವರ್


ಚಟಗುಪ್ಪ ಆಸ್ಪತ್ರೆಯಲ್ಲಿ ಹೆರಿಗೆ ಮಾಡಿಸಿಕೊಂಡ ಹೇಮಾಳ ಮಾವ (ರವಿಯ ತಂದೆ) ಕಲ್ಲಪ್ಪ ಪಾಲಿಕೆಯ ಕರ ವಿಭಾಗದಲ್ಲಿ 'ಬಿ' ದರ್ಜೆ ನೌಕರರಾಗಿದ್ದಾರೆ. ಅವರನ್ನು ಬೆದರಿಸಿದ ಕಳಸಣ್ಣವರ್ "ತನ್ನ ಮೊಮ್ಮಗಳಿಗೆ (ಹೇಮಾ-ರವಿ ಮಗಳು) ಅಗತ್ಯವಾದ ಇಂಜಕ್ಷನ್ನನ್ನು ಮೆಡಿಕಲ್ ಶಾಪ್‌ನಿಂದ ತರಿಸಿ, ಡಾ. ದಾಕ್ಷಾಯಣಿ ಅವರ ಮನೆಗೆ ಹೋಗಿ ಇಂಜಕ್ಷನ್ ಹಾಕಿಸಿದೆ" ಎಂದು ಪತ್ರಿಕೆಗಳಿಗೆ ಸ್ಪಷ್ಟೀಕರಣ ಕೊಡಿಸಿಬಿಟ್ಟಿದ್ದಾನೆ. ಹಾಗಾದರೆ ಡಾಕ್ಟರಮ್ಮ ಬಹಿರಂಗವಾಗಿ 1500 ರೂ. ವಾಪಸ್ ಕೊಟ್ಟಿದ್ದೇಕೆ? ಎಂಬ ಸರಳ ಪ್ರಶ್ನೆಗೆ ಉತ್ತರಿಸದೇ ಮಾನಗೇಡಿ ಆಗುತ್ತಿದ್ದಾನೆ ಕಳಸಣ್ಣವರ್. ಕೊನೆಯಲ್ಲಿ ದಲಿತ ಧುರೀಣರಿಗೆ, ಪ್ರತಿಭಟನಾಕಾರರಿಗೆ ಡಾ. ದಾಕ್ಷಾಯಣಿ ಕಡೆಯಿಂದ ಒಂದು ಲಕ್ಷ ಸಿಕ್ಕಿದೆ ಎಂದು ಹುಯಿಲು ಎಬ್ಬಿಸಿದ್ದಾನೆ.

ಚಟಗುಪ್ಪಿ ಆಸ್ಪತ್ರೆ ವಿರುದ್ಧ ಈಗ ದೂರು ಗಳ ಸರಮಾಲೆ ಆರಂಭವಾಗಿದೆ. ಶಿವರುದ್ರಪ್ಪ ಬಡಿಗೇರ ಎಂಬ ರೋಗಿಯಿಂದ ರಕ್ತ ಪರೀಕ್ಷೆಗೆ ಪೀಕಿದ್ದು ಜಸ್ಟ್ ಸಿಕ್ಸ್ ಹಂಡ್ರೆಡ್! ಹೆರಿಗೆ ಆಗುತ್ತಿದ್ದಂತೆ '150 ರೂಪಾಯಿ ಕೊಡ್ರಿ ಜಲ್ದಿ ಜಲ್ದಿ' ಎಂದು ಪೀಡಿಸುವ ನರ್ಸ್‌ಗಳು, ಬಕೆಟ್ ಬಿಸಿ ನೀರಿಗೆ ದಸ್ ರೂಪಾಯ್ ಎನ್ನುವ ಆಯಾಗಳು.... ಕಿಮ್ಸ್ ಆಸ್ಪತ್ರೆಯಲ್ಲೂ ಇದೇ ಪರಿಸ್ಥಿತಿ. ಪಾಲಿಕೆಯ 14 ಆಸ್ಪತ್ರೆಗಳೂ ಅಧ್ವಾನವಾಗಿ ಹೋಗಿವೆ. ಇಷ್ಟೂ ಆಸ್ಪತ್ರೆಗಳಿಗೆ ಔಷಧಿಗೆಂದು ಬಿಡುಗಡೆಯಾಗುವ ವಾರ್ಷಿಕ ಹಣ 14 ಲಕ್ಷ ರೂಪಾಯಿ ಮಾತ್ರ. ಚಟಗುಪ್ಪಿ ಹೆರಿಗೆ ಆಸ್ಪತ್ರೆಯಲ್ಲಿ ಸಿಬ್ಬಂದಿಯೇ ಕಡಿಮೆ. ಇಲ್ಲಿ ಸ್ಕ್ಯಾನಿಂಗ್ ಮಷಿನ್ ಇದೆ. ಸ್ಕ್ಯಾನ್ ಮಾಡಲು ಯಾವನೂ ಇಲ್ಲ. ಹಿಂದೆ ಹೊರಗಿನ ಡಾಕ್ಟರೊಬ್ರು ಬಂದು ಸ್ಕ್ಯಾನ್ ಮಾಡ್ತಿದ್ದರು. ರೋಗ ಬಡಿದಿರುವ ಪಾಲಿಕೆಯ ಆಸ್ಪತ್ರೆಗಳಿಗೆ ಚುಚ್ಚುಮದ್ದು ನೀಡುವವರಾರು? ಸಹಾಯಕ ಆಯುಕ್ತ ಕಳಸಣ್ಣವರ್‌ಗೆ ಅಂಟಿಕೊಂಡಿರುವ ಭ್ರಷ್ಟ ರೋಗ ವಾಸಿಯಾದರೆ ಎಲ್ಲ ಸರಿಯಾಗುತ್ತೆ.

-ವರದಿಗಾರ

ಜಮಖಂಡಿಯ ಪಾಖಂಡಿ ಕೃಷ್ಣ!

ಕೊನೆಗೂ ಜಮಖಂಡಿ ಜನ ಎಚ್ಚೆತ್ತುಕೊಂಡಿದ್ದಾರೆ. ಕಳೆದ ಎರಡು ದಶಕಗಳಿಂದ ಇಲ್ಲಿನ ಜನರಿಗೆ ಪೀಡೆಯಾಗಿ ಪರಸ್ತ್ರಿ ಸಂಗದ ಗೆಂಡೆತಿಮ್ಮನಂತೆ ಗಂಟುಬಿದ್ದಿದ್ದ ಪರಮ ವಂಚಕ ದಾನಯ್ಯ ಹಿರೇಮಠ ಅಲಿಯಾಸ್ ಅನ್ನದಾನೇಶ್ವರ ಸ್ವಾಮೀಜಿಯ ಅವ್ಯವಹಾರ ತನಿಖೆ ಮಾಡಿ, ಇವನನ್ನು ಗಡಿಪಾರು ಮಾಡಿ ಎಂದು ನವೆಂಬರ್ 13 ರಂದು ದಲಿತ ಸಂಘರ್ಷ ಸಮಿತಿಯ ನೇತೃತ್ವದಲ್ಲಿ ಜಮಖಂಡಿ ಬಂದ್‌ಗೆ ಕರೆ ನೀಡಿದ್ದಾರೆ.



ದಾನಯ್ಯ ಮಠ


ಸದರಿ ದಾನಯ್ಯ ಮಠ "ನಾನು ಶ್ರೀಕೃಷ್ಣ ಪರಮಾತ್ಮನ ಪುನರ್ಜನ್ಮ" ಎಂದು ಯಾವಾಗ ಘೋಷಿಸಿಕೊಂಡನೊ, ಅಲ್ಲಿಂದ ಲೆಕ್ಕ ಹಾಕಿದರೆ ಇವನ ಕೃಷ್ಣ ಲೀಲೆಗೆ ಸಿಲುಕಿ ಸಂಸಾರ ಹಾಳು ಮಾಡಿಕೊಂಡ, ಊರು ಬಿಟ್ಟ ಮಹಿಳೆಯರ ಪಟ್ಟಿಯೇ ದೊರಕುತ್ತದೆ. ತಾನು ಕೊಳಲೂದುತ್ತಾ ಕಿರೀಟ ಹಾಕಿಕೊಂಡಿರುವ ಫೋಟೋಗಳನ್ನು ಊರ ತುಂಬ ಹಂಚಿಕೊಂಡು ತನ್ನನ್ನು ತಾನೇ ಸದ್ಗುರು ಅನ್ನದಾನೇಶ್ವರ ಸ್ವಾಮಿಗಳು ಎಂದು ಸಂಬೋಧಿಸಿಕೊಳ್ಳುವ ಈ ಕಿರುಬನ ಇತಿಹಾಸ ದೊಡ್ಡದಿದೆ.

ಅಥಣಿ ತಾಲ್ಲೂಕಿನ ಸವದಿ ಗ್ರಾಮದಿಂದ ಈತ ಕೂಲಿ ಅರಸುತ್ತಾ ಬಂದಿದ್ದು ಜಮಖಂಡಿ ತಾಲ್ಲೂಕಿನ ಬಂಡಿಗಣಿಗೆ. ಅವರಿವರ ಮನೆಯಲ್ಲಿ ಕೂಲಿ-ನಾಲಿ ಮಾಡಿಕೊಂಡೇ ಗಾಂಜಾ ಮಾರಾಟಗಾರರ ಗುಂಪೊಂದಕ್ಕೆ ಸೇರಿ, ಸುತ್ತಮುತ್ತಲಿನ ಹಳ್ಳಿಗಳಲ್ಲಿ ಗಾಂಜಾ ಮಾರುತ್ತಿದ್ದ. ಆದರೆ ಇವನಿಗೊಂದು 'ಶಕ್ತಿ' ಇತ್ತು. ಮಾಸ ಮುಖವನ್ನಾದರು ನೋಡಿದರೆ ಅವರ ಬಗ್ಗೆ [illegible] ಭವಿಷ್ಯ ಹೇಳುತ್ತಿದ್ದ. ಈ ವಿಷಯ ಕಿವಿಯಿಂದ ಕಿವಿಗೆ ಹಬ್ಬಿ, ಜನ ಈ ಅಲೆಮಾರಿ ದಾನಯ್ಯ ಹಿರೇಮಠನಿಗೆ ಸ್ವಲ್ಪ ಜಾಗ ಕೊಟ್ಟು, ಒಂದು ಆಶ್ರಮ ಕಟ್ಟಿಸಿಕೊಟ್ಟರು.

ಬಾಗಲಕೋಟೆ

ಅದೇ 'ಬಂಡಿಗಣಿ ಶ್ರೀ ಬಸವ ಗೋಪಾಲ ಮಠ' ಎಂಬ ಅನ್ನದಾನಯ್ಯನ ಖಾರಸ್ಥಾನ. ಇಲ್ಲಿ ಸ್ಥಾಪನೆಯಾದ ಅನ್ನದಾನಯ್ಯ ತಾನು ಕೃಷ್ಣನ ಪುನರ್ಜನ್ಮ ಎಂದು ಘೋಷಿಸಿ ಯಾವಾಗ ಕೊಳಲು ಹಿಡಿದನೋ ಬಿದ್ದರು ನೋಡಿ ಜನ. ಅಂತವರಲ್ಲಿ ಒಬ್ಬಳು ಕಡಪಟ್ಟಿ ಗ್ರಾಮದ ಗೃಹಿಣಿ ಮಹಾದೇವಿ ಹರಿಶ್ಚಂದ್ರ ತಳವಾರ. ಯಾವುದೋ ಕೌಟುಂಬಿಕ ಸಮಸ್ಯೆಗೆ ಪರಿಹಾರ ಕೇಳಲು ಈ ದಲಿತ ಮಹಿಳೆ ಈ ಕಲಿಯುಗ ಕೃಷ್ಣ ಅನ್ನದಾನಯ್ಯನ ಸನ್ನಿಧಿಗೆ ಬಂದಳು. ಬಂದವಳು ಕೆಲದಿನ ಅಲ್ಲೇ ಉಳಿದಳು. ಆನಂತರ ಅವಳು ಸಿಕ್ಕಿದ್ದು ಬಾವಿಯಲ್ಲಿನ ಹೆಣವಾಗಿ. ಇದು ನಡೆದದ್ದು 1994 ರಲ್ಲಿ.

ಆ ಹೊತ್ತಿಗಾಗಲೇ ಮಹದೇವಿಯ ಗಂಡ ಹರಿಶ್ಚಂದ್ರ ತಳವಾರ ಮರಣ ಹೊಂದಿದ್ದ. ಕಲಿಯುಗ ಕೃಷ್ಣನ ಹತ್ತಿರ ಪ್ರಸಾದ ಪಡೆದ ಪೊಲೀಸರು ಮಹದೇವಿಯದು ಆತ್ಮಹತ್ಯೆ ಮತ್ತು ಇದೊಂದು ಅನಾಥ ಶವ ಎಂದು ಪ್ರಕರಣವನ್ನು ಮುಚ್ಚಿ ಹಾಕಿದರು. ಈ ಪ್ರಕರಣದಲ್ಲಿ ಸುಲಭವಾಗಿ ಬಚಾವಾದ ನಂತರ ಅನ್ನದಾನಯ್ಯನಿಗೆ ಸಂಪೂರ್ಣ ಧೈರ್ಯ ಬಂದು ತನ್ನ ಕೃಷ್ಣ ಲೀಲೆಯ ವಿಶ್ವರೂಪ ನೀಡಲಾರಂಭಿಸಿದ. ವಿವಾಹವಾಗದವರಿಗೆ ಕಲ್ಯಾಣ ಸೌಭಾಗ್ಯ, ಗಂಡನಿಲ್ಲದವರಿಗೆ ಗಂಡ, ಮಕ್ಕಳಿಲ್ಲದವರಿಗೆ ಮಕ್ಕಳನ್ನು, ಕರುಣಿಸುತ್ತೇನೆಂದು ಭಯಂಕರ ಪ್ರಚಾರ ಪಡೆದ ಅನ್ನದಾನಯ್ಯ ಬಲೆಗೆ ಕೆಡವಿಕೊಂಡಿದ್ದೆಲ್ಲಾ ಶ್ರೀಮಂತ ಮಹಿಳೆಯರನ್ನು. ಇಂಥ ಮಹಿಳೆಯರಿಂದ ಇವನು ಮಾಡಿಸಿಕೊಳ್ಳುತ್ತಿದ್ದ ಸೇವೆಯನ್ನು ಕೇಳಿದರೆ ಮರ್ಯಾದಸ್ತರು ಕ್ಯಾಕರಿಸಿ ಉಗಿಯುತ್ತಾರೆ.



ಮಹಾದೇವಿ

ಹರಕೆ ಹೊತ್ತವರು ಸರಿರಾತ್ರಿಯಲ್ಲಿ ಇವನ ಮಠಕ್ಕೆ ಬಂದು ಈ ಮುದಿ ಮೂದೇವಿ ಅನ್ನದಾನೇಶ್ವರನಿಗೆ ಬೆಳಗಿನ ಜಾವದ ತನಕ ಮಜ್ಜನ ಮಾಡಿಸಬೇಕಂತೆ. ಈ ಸೇವೆ ಬರೀ ಮಜ್ಜನಕ್ಕೆ ಸೀಮಿತವಾಗಿಲ್ಲ. ಹೀಗೆ ಬಲೆಗೆ ಬಿದ್ದ ಹೆಂಗಸರನ್ನು ಯಾಮಾರಿಸಿ, ಅವರ ಗಂಡಂದಿರನ್ನು ಬೆದರಿಸಿ ಅವರ ಆಸ್ತಿಯನ್ನು ಸೂರೆ ಹೊಡೆದಿದ್ದಾನೆ ಅನ್ನದಾನೇಶ್ವರ. ಅದೇನು ಬ್ಲಾಕ್‌ಮೇಲ್ ಮಾಡುತ್ತಿದ್ದನೋ ಏನೋ ಇವನಿಗೆ ಬೆದರಿದ ಮುಧೋಳದ ಇಂಜನಿಯರ್, ಪರಮಾನಂದವಾಡಿಯ ಶೆಟ್ಟರು, ಮಹಾಲಿಂಗಪುರದ ಶ್ರೀಮಂತ ವಿಧವೆ, ಜೇರಗಾಳದ ಸಾವಿತ್ರಿ, ಜಮಖಂಡಿಯ ಕುಲಕರ್ಣಿ ತಮ್ಮ ಆಸ್ತಿಯನ್ನು ಈ ಕಳ್ಳ ಕೃಷ್ಣನಿಗೆ ಧಾರೆ ಎರೆದು ಸಂಸಾರ ಹಾಳು ಮಾಡಿಕೊಂಡಿದ್ದಾರೆ.

ಇಂಥ ಬ್ಲಾಕ್‌ಮೇಲ್ ತಂತ್ರದಿಂದ ಅಂದು ಕೂಲಿ ಹುಡುಕುತ್ತಾ ಬಂದ ಅನ್ನದಾನಯ್ಯ ಇವತ್ತು 200 ಎಕರೆ ಜಮೀನು ಒಡೆಯ, ಸುತ್ತಲೂ ಕಾವಲು ಭಂಟರು, ಅವರ ಕೈಯಲ್ಲಿ ಬಂದೂಕು-ಪಿಸ್ತೂಲಿನ ಬಂದೋಬಸ್ತಿನಲ್ಲಿ ಓಡಾಡುತ್ತಾನೆ. ಮಾತೆತ್ತಿದರೆ ಮಾಜಿ ಶಾಸಕ ರಾಮಣ್ಣ ಕಲೂತಿ, ವಿಧಾನ ಪರಿಷತ್ ಸದಸ್ಯ ಸಿದ್ದುನ್ಯಾಮಗೌಡ ಮತ್ತು ಹಾಲಿ ಶಾಸಕ ಸಿದ್ದುಸವದಿಯ ಹೆಸರನ್ನು ಹೇಳಿ ಇವರೆಲ್ಲಾ ನನ್ನ ಭಕ್ತರು ಎಂದು ಒಳುಬಿಡುತ್ತಾನೆ. ಈ ಬಂಡಿಗಣಿ ಶ್ರೀ ಬಸವ ಗೋಪಾಲ ಮಠದ ಸದ್ಗುರು ಅನ್ನದಾನೇಶ್ವರ ಸ್ವಾಮಿಯನ್ನು ಜಮಖಂಡಿಯಿಂದ ಓಡಿಸದಿದ್ದರೆ ಇವನ ಕೃಷ್ಣಲೀಲೆಯಿಂದ ಇನ್ನಷ್ಟು ಸಂಸಾರಗಳು ಬೀದಿಗೆ ಬೀಳುತ್ತವೆ.

-ವರದಿಗಾರ

ಭಾರತ ಮಾತೆಯ ಪುತ್ರರ ರಂಪ

'ವಿದೇಶಿ ವಿದ್ಯಾರ್ಥಿನಿಯಿಂದ ಭಾರತಮಾತೆಗೆ ಅವಮಾನ...' ನಾಲ್ಕನೇ ತಾರೀಖಿನ ಮಂಗಳೂರಿನ ಬಹು ತೇಕ ಪತ್ರಿಕೆಗಳಲ್ಲಿ ಇದೇ ಹೆಡ್ಡಿಂಗ್‌ನ ಸುದ್ದಿಯೊಂದಿತ್ತು. ಇನ್ನು ಚೆಡ್ಡಿ ಪತ್ರಿಕೆಗಳಿಗಂತೂ ಇದು ಹಬ್ಬ. ಮೊದಲೇ ಬೂದಿ ಮುಚ್ಚಿದ ಕೆಂಡದಂತಿದೆ ಮಂಗಳೂರು. ಮೊನ್ನೆಯ ಗಲಭೆಯಿಂದ ಅದು ಇನ್ನೂ ಚೇತರಿಸಿಕೊಂಡಿಲ್ಲ. ಅಂತಹ ವೇಳೆಯಲ್ಲಿ ಶ್ರೀರಾಮ ಸೇನೆಯ ಕಪಿಗಳು ಮತ್ತೊಂದು ಅನಗತ್ಯ ವಿವಾದ ಎಬ್ಬಿಸಲು ಹೋಗಿವೆ. ಸದ್ಯಕ್ಕದು ವಿಫಲವಾಗಿದೆ ಎಂಬುದೇ ಸಮಾಧಾನದ ವಿಷಯ.

ನಡೆದದ್ದಿಷ್ಟು: ಮಂಗಳೂರಿನ ರೋಷನಿ ನಿಲಯ ಸಮಾಜ ಕಾರ್ಯ ಕಾಲೇಜಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಸೆಮಿನಾರ್ ಇತ್ತು. ಕೇರಳ, ಕರ್ನಾಟಕ, ಹೈದರಾಬಾದ್‌ಗಳ ವಿದ್ಯಾರ್ಥಿಗಳ ಜೊತೆ ಕೆಲ ವಿದೇಶಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸೆಮಿನಾರ್ ನಡೆದ ಜಾಗವೇ ಇಕ್ಕಟ್ಟಾಗಿತ್ತು. ಕುಳಿತವರೆಲ್ಲ ತಮ್ಮ ಬ್ಯಾಗು, ಬುಕ್ಕುಗಳನ್ನು ಚೇರ್ ಪಕ್ಕದಲ್ಲಿ ಇಟ್ಟುಕೊಳ್ಳಬೇಕಾಗಿತ್ತು. ನಾರ್ವೆಯ ವಿದ್ಯಾರ್ಥಿನಿಯೋರ್ವಳು ತನಗೆ ಅರಿವಿಲ್ಲದಂತೆ ತನ್ನ ಪುಸ್ತಕವೊಂದರ ಮೇಲೆ ಕಾಲಿಟ್ಟಿದ್ದಳು. ಸಂಜೆ ಪತ್ರಿಕೆಯೊಂದರ ಕಿಡಿಗೇಡಿ ಫೋಟೋಗ್ರಾಫರ್‌ನೊಬ್ಬ ಅದನ್ನು ಕ್ಲಿಕ್ಕಿಸಿಕೊಂಡು ಶ್ರೀರಾಮಸೇನೆಯ ಮಂಗಗಳ ಕೈಗೆ ಕೊಟ್ಟ. ಯಥಾಪ್ರಕಾರ ಮಂಗಗಳು ಮುಷ್ಟಿ ಹಾಕಿ 'ಅಯ್ಯಯ್ಯೋ, ಭಾರತಮಾತೆಯನ್ನೇ ತುಳಿದುಬಿಟ್ಟಳಲ್ಲ ಈ ಕ್ರಿಶ್ಚಿಯನ್ ಹುಡುಗಿ' ಎಂದು ಕುಣಿಯತೊಡಗಿದವು. ಟೂರಿಸಂ ಮಾಹಿತಿಯ 'India' ಎಂಬ ಆ ಪುಸ್ತಕದ ಮೇಲೆ ಕಿರೀಟ ಹೊತ್ತ ಮಹಿಳೆಯ ಚಿತ್ರವಿದೆ. ಆಯಮ್ಮ ಭಾರತಮಾತೆಯಂತೆ! ಭಾರತಮಾತೆಗೂ ಒಂದು ರೂಪ ಕೊಟ್ಟಿದ್ದಾನೆ ಯಾರೋ ಪುಣ್ಯಾತ್ಮ!

ಅದಿರಲಿ, ಚೆಡ್ಡಿಗಳ ಬಯಕೆಯಂತೆ ನಾರ್ವೆ ಯುವತಿ ಕ್ಷಮೆ ಕೇಳಿದ್ದಾಳೆ. ಕಾಲೇಜಿನ ಪ್ರೊಫೆಸರ್ ರೀಟಾ ನರೋನಾರು 'ಘಟನೆ' ಕುರಿತು ಕ್ಷಮೆ ಯಾಚಿಸಿದ್ದಾರೆ. ಆದರೆ ಮರುದಿನ ಮಂಗಳೂರಿನ ಪತ್ರಿಕೆಗಳಲ್ಲಿ ದೇಶದ ಮೇಲೆ ದಾಳಿಯೇ ನಡೆಯಿತೇನೋ ಎಂಬಂತೆ ಬರೆದುಬಿಡುವುದೇ? ಹಿಂದೂ ಹುಡುಗಿಯೊಂದಿಗೆ ಮಾತಾಡಿ 'ತಪ್ಪಾಗಿ' ಎಷ್ಟೋ ಅಲ್ಪಸಂಖ್ಯಾತ ಧರ್ಮಗಳ ವಿದ್ಯಾರ್ಥಿಗಳು ಹೊಡೆತ ತಿಂದಿದ್ದಾರೆ ಇಲ್ಲಿ. ಸಣ್ಣಪುಟ್ಟ ಘಟನೆಗಳನ್ನು ವಿಕೃತಗೊಳಿಸಿ ಗಲಾಟೆ ಎಬ್ಬಿಸಲು ನೋಡುವ ಕಪಿಗಳಿಗೆ ಕೇರ್ ಮಾಡದೇ ಸೌಹಾರ್ದತೆಯ ವಾತಾವರಣವನ್ನು ಜನರೇ ಉಳಿಸಿಕೊಳ್ಳಬೇಕಾಗಿದೆ.

ಸ್ನೇಹವನ್ನು ತಳಹದಿಯಾಗಿ ಹೊಂದಿರದ ಎಲ್ಲ ಪ್ರೇಮಗಳೂ ಮರಳಿನ ಮೇಲೆ ಕಟ್ಟಿದ ಮಹಲುಗಳಿದ್ದಂತೆ -ವ್ಹಿಲರ್ ವಿಲ್‌ಕಾಕ್

ಜಿಲ್ಲಾಧಿಕಾರಿಗಳ ಭಟ್ಟಂಗಿಗಳಿಗೆ ಪ್ರಶಸ್ತಿಯ ಹೆಮ್ಮೆ


ಸುದ್ದಿ ಸುಟ್ಟಣ್ಣನೆಂದೇ ಖ್ಯಾತಿವೆತ್ತಿರುವ ಚಿತ್ರದುರ್ಗ ಜಿಲ್ಲಾಧಿಕಾರಿ ಅಮರನಾರಾಯಣ ಮೊನ್ನೆ ನಡೆದ ಸುವರ್ಣ ಕನ್ನಡ ರಾಜ್ಯೋತ್ಸವದಲ್ಲಿ ಮುಖಮೂತಿಯಿಲ್ಲದವರಿಗೆ; ತನ್ನ ಭಜನೆ ಮಾಡುವ ಭಟ್ಟಂಗಿಗಳಿಗೆ, ಗಣಿ ದಂಧೆ ನಡುಸಿ ಕೋಟ್ಯಂತರ ರೂಪಾಯಿ ಅದಿರಿನ ಲೂಟಿ ಮಾಡುತ್ತಿರುವ ಗಣಿ ಉದ್ಯಮಿಗಳಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿ ಸನ್ಮಾನಿಸುವುದರ ಮೂಲಕ ಅತ್ಯಂತ ಕೆಟ್ಟ ಪರಂಪರೆಯೊಂದಕ್ಕೆ ನಾಂದಿ ಹಾಡಿದ್ದಾರೆ.

ಸುವರ್ಣ ಸಂಭ್ರಮದ ಸವಿನೆನಪಿಗಾಗಿ ಸಂಘಟಿಸಲಾಗಿದ್ದ ಇಡೀ ಕಾರ್ಯಕ್ರಮ ಅವ್ಯವಸ್ಥೆಗಳ ಆಗರವಾಗಿ ಸಂತೆಯ ಗದ್ದಲದಂತೆ ನಡೆದುಹೋಯಿತು. ಆದರೆ ಜಿಲ್ಲಾಡಳಿತದ ವತಿಯಿಂದ ಅಮರನಾರಾಯಣ ಕೊಡಮಾಡಲ್ಪಟ್ಟಿರುವ ಪ್ರಶಸ್ತಿ ಪುರಸ್ಕೃತರು, ಮತ್ತವರ ಗುಣವಿಶೇಷಗಳ ಚರ್ಚೆ ಇನ್ನೂ ನಿಂತಿಲ್ಲ.

ಉದಾಹರಣೆಗೆ ಮಹಡಿ ಶಿವಮೂರ್ತಿಯನ್ನೇ ತೆಗೆದುಕೊಳ್ಳಿ. ಈತ ಮಾಜಿ ಶಾಸಕ ವಿವೇಕಾನಂದಪ್ಪನವರ ಮಗ. ಮಹಡಿ ಶಿವಮೂರ್ತಿ ಕೌನ್ಸಿಲರ್ ಆಗಿದ್ದಾಗ ಸಣ್ಣಪುಟ್ಟದ್ದಕ್ಕೂ ಕೈಚಾಚುತ್ತಿದ್ದ ಆಸಾಮಿ. ತನ್ನ ಅಧಿಕಾರಾವಧಿ ಮುಗಿದು ಮತ್ತೊಂದು ಚುನಾವಣೆ ಎದುರಾದಾಗ ತಾನು ಪ್ರತಿನಿಧಿಸಿರುವ ವಾರ್ಡಿನಿಂದಲೇ ಸ್ಪರ್ಧಿಸಿದರೆ ಸೋಲೋದು ಗ್ಯಾರಂಟಿ ಎಂದು ಲೆಕ್ಕಾಚಾರ ಹಾಕಿ ಹೊಸ ವಾರ್ಡೊಂದನ್ನು ತಲಾಶು ಮಾಡಿ ಚುನಾವಣೆಗೆ ನಿಂತ. ಈತನ ಜನಸೇವೆಯ ಕೈಂಕರ್ಯವನ್ನು ಬಲ್ಲವರು ಸುಮ್ಮನೆ ಬಿಟ್ಟಾರೆಯೇ? ಈ ವಾರ್ಡಿನ ಪ್ರಮುಖರೆಲ್ಲಾ ಶಿವಮೂರ್ತಿ ನಿಂತಿದ್ದ ಹೊಸ ವಾರ್ಡಿಗೆ ಹೋಗಿ ಈತನ ಬಯಾಗ್ರಫಿಯನ್ನೆಲ್ಲಾ ಸ್ಪಷ್ಟವಾಗಿ ಓದಿ ಠೇವಣಿರಹಿತವಾಗಿ ಸೋಲುವಂತೆ ನೋಡಿಕೊಂಡರು. ಅನಂತರ ಮಹಡಿ ಶಿವು ಸಾರ್ವಜನಿಕವಾಗಿ ಕಾಣಿಸಿಕೊಂಡದ್ದು ತಮ್ಮ ಧರ್ಮಪತ್ನಿ ಆರತಿ ಜಿಲ್ಲಾ ಪಂಚಾಯ್ತಿ ಚುನಾವಣಾ ಕಣಕ್ಕಿಳಿದಾಗಲೇ. ಶ್ರೀಮತಿ ಆರತಿಯವರು ಹಾಲಿ ಜಿಲ್ಲಾ ಪಂಚಾಯ್ತಿ ಸದಸ್ಯರಾಗಿರುವುದರಿಂದ ಮಹಡಿ ಶಿವಮೂರ್ತಿ ಚಾಲ್ತಿಯಲ್ಲಿದ್ದಾನೆ. ಎಂತದೋ ಗ್ರಾಮೀಣಾಭಿವೃದ್ಧಿ ಸಂಸ್ಥೆ ಅಂತಾ ಮಾಡಿಕೊಂಡು ಜಿಲ್ಲಾಧಿಕಾರಿಗಳ ಬಡಬಲದಂತೆ ತಿರುಗುತ್ತಾ ಭಟ್ಟಂಗಿತನ ಮೆರೆಯುತ್ತಿದ್ದಾನೆ. ಜಿಲ್ಲಾಧಿಕಾರಿಗಳ ಜೊತೆ ನಿತ್ಯ ವಾಕಿಂಗ್ ಹೋಗುವುದು, ಡಿಸಿಯ ವಿರುದ್ಧ ಹೇಳಿಕೆ ನೀಡುವುದು ಈತನ ಕೆಲಸ. ಜಿಲ್ಲಾಧಿಕಾರಿ ಗಿಡನೆಟ್ಟರೆ ಈತ ನೀರು ಹಾಕಲು ಬಕೀಟು ಹಿಡಿದುಕೊಂಡೇ ನಿಂತಿರುತ್ತಾನೆ. ಇಂತಹ ಕಾರಣಗಳಿಗಾಗಿಯೇ ಈತನಿಗೆ ಪ್ರಶಸ್ತಿಯನ್ನೂ ಕೊಡ ಮಾಡಲಾಗಿದೆ.

ಭ್ರಷ್ಟ ಸಂಗಮ

ಇನ್ನು ಉತ್ತಮ ನಾಗರಿಕ ಪ್ರಶಸ್ತಿ ಪಡೆದಿರುವ ನಾಗರಾಜ್ ಸಂಗಮ್. ಈತ ಜಿಲ್ಲಾ ಪಂಚಾಯ್ತಿಯಲ್ಲಿ ಕಚೇರಿ ವ್ಯವಸ್ಥಾಪಕನಾಗಿದ್ದಾನೆ. ದಿನಗೂಲಿ ನೌಕರನಾಗಿ ಸರ್ಕಾರಿ ಸೇವೆಗೆ ಅಮರಿಕೊಂಡವನು. ಈಗ ಕೋಟ್ಯಾಧೀಶನಾಗಿದ್ದಾನೆ. ಜಿಲ್ಲಾ ಪಂಚಾಯ್ತಿಗೆ ಬರುವ ಸಿಇಓಗಳಿಗೆಲ್ಲಾ ಚೆನ್ನಾಗಿ ತಲೆ ತಿಕ್ಕುವುದು, ದಿಕ್ಕುತಪ್ಪಿಸುವುದು ಹಾಗೂ ಬಕೀಟು ಹಿಡಿಯುವುದರಲ್ಲಿ ನೈಪುಣ್ಯತೆ ಪಡೆದಿದ್ದಾನೆ. ಕೋಟಿಗಟ್ಟಲೆ ಅನುದಾನ ಬರುವ ಸ್ಕೀಮುಗಳನ್ನು ಹಳ್ಳಹಿಡಿಸಿ ಪರ್ಸೆಂಟೇಜ್ ಗುಂಜುವುದು ಹೇಗೆಂಬುದನ್ನು ಈತನಿಂದಲೇ ಕಲಿಯಬೇಕು.



ಅಮರನಾರಾಯಣ

ಹಿಂದೆ ಜಿಲ್ಲಾ ಪಂಚಾಯ್ತಿಯಲ್ಲಿ ನಿರ್ಮಲ ಕರ್ನಾಟಕ ಯೋಜನೆಯಲ್ಲಿ ನಡೆದ ಅವ್ಯವಹಾರದ ಹಿನ್ನೆಲೆಯಲ್ಲಿ ಈತನನ್ನು ಅಮಾನತು ಮಾಡಲಾಗಿತ್ತು. ಅದೇನೋ ಬಚಾವಾಗಿ ಅಕ್ರಮ ಬಡ್ತಿ ಸಮೇತ ಜಿಲ್ಲಾ ಪಂಚಾಯ್ತಿಗೆ ಬಂದು ವಕ್ಕರಿಸಿದ್ದಾನೆ. ಮೊನ್ನೆ ತಾನೆ ಉದ್ಯೋಗ ಖಾತ್ರಿ ಯೋಜನೆಯ ಲಕ್ಷಾಂತರ ರೂಪಾಯಿ ಪ್ರಿಂಟಿಂಗ್ ಹಗರಣದಲ್ಲಿ ಗ್ರಾಮೀಣಾಭಿವೃದ್ಧಿ ಸಚಿವರಿಂದ ಛೀಮಾರಿ ಹಾಕಿಸಿಕೊಂಡಿದ್ದಾನೆ. ಏನಾದರೇನಂತೆ ನಗರದ ಹೌಸಿಂಗ್ ಬೋರ್ಡ್ ಕಾಲೋನಿ, ಕಂದಾಯ ನಗರ ಹಾಗೂ ರಾಮದಾಸ್ ಕಾಂಪೌಂಡಿನಲ್ಲಿ ಲಕ್ಷಾಂತರ ಬೆಲೆ ಬಾಳುವ ಸೈಟುಗಳನ್ನು ಮಾಡಿಕೊಂಡಿದ್ದಾನೆ. ಬ್ಯಾಂಕ್ ಕಾಲೋನಿಯಲ್ಲಿ ವಾಸಕ್ಕೊಂದು ಮನೆಯಿದೆ. ಇಂತಹ ನಾಗರಾಜ್ ಸಂಗಮ್‌ಗೆ ಉತ್ತಮ ನಾಗರಿಕ ಪ್ರಶಸ್ತಿ ನೀಡಿದ ಕ್ಷಣದಿಂದ ದುರ್ಗದ ಜನ ತಮಗೆ ಲಭ್ಯವಿರುವ ಡಿಕ್ಷನರಿಗಳನ್ನೆಲ್ಲಾ ತೆಗೆದುಕೊಂಡು 'ನಾಗರಿಕ' ಎಂಬ ಪದದ ಅರ್ಥ ಏನೆಂದು ತಿಳಿದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ.

ದಲಿತ ಬ್ರಾಹ್ಮಣಿ ಗಾಯತ್ರಿ

ಈಯಮ್ಮ ಇನ್ನರ್‌ವ್ಹೀಲ್ ಕ್ಲಬ್‌ನ ಅಧ್ಯಕ್ಷೆ. ಸಹರಾ ಇಂಡಿಯಾದ ಛೀಫ್ ಪ್ರಮೋಟರ್ ಹಾಗೂ ಠೇವಣಿ ಸಂಗ್ರಹಿಸುವ ದಂಧೆ ಇದೆ. ಇವರ ಧರ್ಮಪತಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಶಾಖೆಯೊಂದರಲ್ಲಿ ಮ್ಯಾನೇಜರ್. ಪತಿ-ಪತ್ನಿ ಇಬ್ಬರೂ ಬ್ರಾಹ್ಮಣರೇ. ಆದರೂ ಪತಿರಾಯ ದಲಿತನೆಂದು ಜಾತಿ ಪ್ರಮಾಣ ಪತ್ರ ನೀಡಿ ನೌಕರಿಗಿಟ್ಟಿಸಿದ್ದಾನೆ. ದುಡಿಮೆ ಸಕತ್ತಾಗಿರುವುದರಿಂದ ತಮಗೆ ಲಭ್ಯವಿರುವ ಪ್ರತಿನಿಮಿಷವನ್ನೂ ಸಮಾಜ ಸೇವೆಗೆ ಮೀಸಲಿಟ್ಟಿದ್ದಾರೆ. ಈಯಮ್ಮ ಜಿಲ್ಲಾಧಿಕಾರಿಗಳ ಹೊಗಳುಭಟ್ಟರ ಸಾಲಿನಲ್ಲಿರುವುದರಿಂದ ಹಾಗೂ ಜಿಲ್ಲಾಧಿಕಾರಿಗಳ ಪ್ರಜಾಸೇವಾ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿರುವುದರಿಂದ ರಾಜ್ಯೋತ್ಸವ ಪ್ರಶಸ್ತಿಯನ್ನು ಕೊಡ ಮಾಡಲಾಗಿದೆ.

ರಮಾ ನಾಗರಾಜ್

ಈಯಮ್ಮ ಕೂಡಾ ಸಮಾಜ ಸೇವೆಯ ಮುಖವಾಡ ಹೊತ್ತಿರುವಾಕೆ. ಒಕ್ಕಲಿಕ ಸಮುದಾಯದವರು. ಜೊತೆಗೆ ನಿವೃತ್ತ ಮುಖ್ಯೋಪಾಧ್ಯಾಯ ನರಸಿಂಹಪ್ಪ ಎಂಬ ಸಂಭಾವಿತ-ಗೌರವಾನ್ವಿತ ಕುಟುಂಬದ ಹಿನ್ನೆಲೆಯಿದೆ. ಹಾಲಿ ಜಿಲ್ಲಾ ಬಿಜೆಪಿ ಮಹಿಳಾ ಘಟಕದ ಅಧ್ಯಕ್ಷೆ. ಈಯಮ್ಮನಿಗೆ ಎಳ್ಳಷ್ಟೂ ಸಮಾಜಸೇವೆಯ ಕಳಕಳಿ ಇಲ್ಲದಿದ್ದರೂ ಅದು ಸಿಕ್ಕಾಪಟ್ಟೆ ಇದೆ ಅಂತಾ ಸಾಬೀತುಪಡಿಸಲು ನಿರಂತರವಾಗಿ ಪ್ರಯತ್ನ ಮಾಡುತ್ತಿರುತ್ತಾರೆ. ತನ್ನ ತೋಟಕ್ಕೆ ಸಬ್ಸಿಡಿ ತೆಗೆದುಕೊಳ್ಳಲು ತೋಟಗಾರಿಕೆಯ ಇಲಾಖಾ ಅಧಿಕಾರಿಗಳೊಂದಿಗೆ ಜಗಳ ಮಾಡಿದ ಇತಿಹಾಸವಿದೆ. ಸ್ವಜಾತಿಯವರು ಎಂಬ ಕಾರಣಕ್ಕೆ ಈಯಮ್ಮ ಜಿಲ್ಲಾಧಿಕಾರಿ ಅಮರನಾರಾಯಣನ ಕಿಚನ್ ಕ್ಯಾಬಿನೆಟ್‌ನಲ್ಲಿ ನೆಲೆ ಕಂಡುಕೊಂಡಿದ್ದಾರೆ. ಹಾಗಾಗಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರ ಉದ್ದನೆಯ ಪಟ್ಟಿಯಲ್ಲಿ ರಮಾ ನಾಗರಾಜ್‌ರ ಹೆಸರೂ ಸೇರಿಕೊಂಡಿದೆ.

ಚಿತ್ರದುರ್ಗ



ಕುಮುದಾ ಶಿವಮೂರ್ತಿ

ಪ್ರಶಸ್ತಿ ಪುರಸ್ಕೃತರ ಪಟ್ಟಿ 70 ಗಡಿದಾಟಿರುವುದರಿಂದ ಎಲ್ಲರ ಪರಿಚಯ ಮಾಡಿಕೊಡುವುದು ತುಸು ಕಷ್ಟಕರ. ಆದರಲ್ಲೂ ಈ ಪಟ್ಟಿಯಲ್ಲಿ ಪ್ರಶಸ್ತಿಗೆ ಭಾಜನರಾಗಿರುವ ಗಣಿ ವ್ಯವಸ್ಥಾಪಕರು-ಮಾಲೀಕರು ಸೇರಿದಂತೆ ಎಂಟತ್ತು ಜನರ ಪರಿಚಯವನ್ನು ಪ್ರತ್ಯೇಕವಾಗಿಯೇ ಕೂಡಿ ಕೊಡಬೇಕು. ಈ ಪಟ್ಟಿಯಲ್ಲಿ ಮಾಜಿ ಸಚಿವ ಗಣಿ ಉದ್ಯಮಿ ಅಲ್ಲಂ ವೀರಭದ್ರಪ್ಪನವರ ಹೆಸರೂ ಇದೆ. ಸದ್ಯಕ್ಕೆ ಚಿತ್ರದುರ್ಗ ಜಿಲ್ಲೆಯ ಅದ್ದೆಗಳನ್ನೆಲ್ಲಾ ದೋಚಿ, ಅಲ್ಲಿರುವ ಚೂರುಪಾರು ಕಾಡನ್ನು ಸರ್ವನಾಶ ಮಾಡಿ ಅದಕ್ಕೆ ಪರ್ಯಾಯವಾಗಿ ಗಿಡಮರ ಬೆಳೆಸಿದ್ದಕ್ಕೆ ಹಾಗೂ ಅಬ್ದುಲ್ ಕಲಾಂರ ಕನಸನ್ನು ಜಟ್ರೋಪ ಕ್ರಾಂತಿಯ ಮೂಲಕ ನನಸು ಮಾಡಲು ಹೊರಟಿರುವ ಜಿಲ್ಲಾಧಿಕಾರಿ ಅಮರನಾರಾಯಣರ ಪ್ರಯತ್ನಗಳಿಗೆ ಬಡಿಗಾಸಿನ ರೂಪದ ಫಂಡು ಕೊಟ್ಟು ಔದಾರ್ಯ ಮೆರೆದಿರುವುದರಿಂದ ಗಣಿ ಮಾಲೀಕರ ಪರಿಸರಕಾಳಜಿಗಳನ್ನು ಪರಿಗಣಿಸಿ ಪ್ರಶಸ್ತಿಗಳನ್ನು ಕೊಡಮಾಡಲಾಗಿದೆ ಎಂದು ಅರ್ಥ ಮಾಡಿಕೊಂಡರೆ ಸಾಕು.

ಪ್ರಶಸ್ತಿ ಪುರಸ್ಕೃತರಲ್ಲಿ ಉದ್ಯಮಿ, ಕಾಂಗ್ರೆಸ್ ಮುಖಂಡ ಎಂ.ಕೆ. ತಾಜ್‌ಪೀರ್ ಬಗ್ಗೆ ಯಾವುದೇ ತಕರಾರುಗಳಿಲ್ಲ. ಈತ ಶಕ್ತಿ ರಾಜಕಾರಣದ ವರಸೆಗಳಿಗೆ ದೂರವಾಗಿ, ಸಾರ್ವಜನಿಕ ಸೇವಾಚಟುವಟಿಕೆಗಳಲ್ಲಿ ಗುರುತಿಸಿಕೊಂಡು ಸಭ್ಯತೆ-ಸಜ್ಜನಿಕೆಯನ್ನು ಕಾಪಾಡಿಕೊಂಡಿದ್ದಾರೆ. ರೋಟರಿ ಕ್ಲಬ್‌ನ ಅಧ್ಯಕ್ಷ ಡಾ. ಬಿ.ಎನ್. ಪ್ರಹ್ಲಾದ್ ಕೂಡಾ ಅಷ್ಟೇ. ವೈದ್ಯರಾಗಿದ್ದುಕೊಂಡೂ ಪರಿಸರಾತ್ಮಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿದ್ದಾರೆ. ಇನ್ನು ಹಿರಿಯ ಪತ್ರಕರ್ತರೆಂಬ ಕಾರಣಕ್ಕೆ ಚಂದ್ರವಳ್ಳಿ ದಿನಪತ್ರಿಕೆಯ ಎಚ್.ಎಸ್. ತಿಪ್ಪೇರುದ್ರಸ್ವಾಮಿ ಹಾಗೂ ಕನ್ನಡ ಪರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಸೇವೆ ಸಲ್ಲಿಸಿರುವ ಕಾರಣಕ್ಕೆ ಸುದ್ದಿ ಗಿಡುಗ ದಿನಪತ್ರಿಯ ಶ. ಮಂಜುನಾಥ್‌ರವರಿಗೆ ಪ್ರಶಸ್ತಿ ಕೊಟ್ಟಿರುವುದು ಸಮಾಧಾನಕಾರ.

ಬಹಳ ಮುಖ್ಯವಾಗಿ ಸಾಹಿತಿ-ಹೋರಾಟಗಾರ ಬಂಜಗೆರೆ ಜಯಪ್ರಕಾಶ್ ಹಾಗೂ ನೀರಾವರಿ ಹೋರಾಟ ಸಮಿತಿಯ ಕಾರ್ಯಾಧ್ಯಕ್ಷ ಎಂ. ಜಯಣ್ಣನವರು ತಾತ್ವಿಕ ಕಾರಣ ನೀಡಿ ಪ್ರಶಸ್ತಿ ನಿರಾಕರಿಸಿರುವುದು ಸ್ವಾಗತಾರ್ಹ. ಈ ನಿರ್ಧಾರದಿಂದ ನೀರಾವರಿ ಹೋರಾಟಕ್ಕೆ ಎಷ್ಟು ಉಪಯೋಗವಾಗುತ್ತದೆಯೋ ಗೊತ್ತಿಲ್ಲ, ಆದರೆ ಪ್ರಶಸ್ತಿ ಪಡೆಯುವುದರ ಮೂಲಕ ಎದುರಿಸಬಹುದಾಗಿದ್ದ ಟೀಕೆಗಳು ಮತ್ತು ಮುಜುಗರದಿಂದ ಬಚಾವಾಗಿದ್ದಾರೆ.

ಈಗ ಚಿತ್ರದುರ್ಗದ ಸಾಂಸ್ಕೃತಿಕ ವಲಯ ಮಾತ್ರವಲ್ಲ ಜನರೂ ಕೂಡಾ ರಾಜ್ಯೋತ್ಸವ ಪ್ರಶಸ್ತಿ ನೀಡಲು ಅನುಸರಿಸುವ ಮಾನದಂಡಗಳೇನು? ಪ್ರಶಸ್ತಿ ಪುರಸ್ಕೃತರನ್ನು ಆಯ್ಕೆ ಮಾಡುವವರು ಯಾರು? ಪ್ರಶಸ್ತಿ ಪಟ್ಟಿಯನ್ನು ಅಂತಿಮಗೊಳಿಸಿದವರ ತಲೆಯಲ್ಲಿ ಏನಿತ್ತು? ಎಂಬಂತಹ ಯಕ್ಷಪ್ರಶ್ನೆಗಳನ್ನೇ ಕೇಳುತ್ತಿದ್ದಾರೆ.

ಜಿಲ್ಲಾಧಿಕಾರಿ ಅಮರನಾರಾಯಣ್‌ಗೆ ಕೇಳೋಣವೆಂದರೆ ಅದಾಗಲೇ ಜನಸ್ಪಂದನ-ಬರಪರಿಹಾರ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿದ್ದಾರೆ. ಅದು ಥೇಟ್ ಮುಖ್ಯಮಂತ್ರಿ ಕುಮಾರಸ್ವಾಮಿ ಸ್ಟೈಲಿನಲ್ಲಿ.

ಜಿಲ್ಲಾಧಿಕಾರಿಯೊಬ್ಬರ ಈ ಪರಿ ಅಧಿಕಾರದ ದುರುಪಯೋಗವನ್ನು ದುರ್ಗದ ಜನ ಹಿಂದೆಂದೂ ನೋಡಿರಲಿಲ್ಲ.

-ವರದಿಗಾರ

ಕೊಪ್ಪಳವ ಗಬ್ಬೆಬ್ಬಿಸಿ ಹೋದೇಯಲ್ಲೋ ಕದರಳ್ಳಿಮಠ

ತುಂಬಿದ ಗಟಾರ, ಹದಗೆಟ್ಟ ರಸ್ತೆಗಳು, ದೀಪವಿಲ್ಲದ ಕಂಬಗಳು, ಮಾತಿಗೆ ನಿಂತರೆ ಬಾಯಿ ಹೊಕ್ಕುಬಿಡುವ ಸೊಳ್ಳೆಗಳು, ಕಾಲುಕಾಲಿಗೆ ಅಡರಿಕೊಳ್ಳುವ ಹಂದಿಗಳು... ಹೀಗೆ ಇಡೀ ಕೊಪ್ಪಳವನ್ನು ಒಂದು ದೊಡ್ಡ ಸ್ಲಂನ್ನಾಗಿ ಪರಿವರ್ತಿಸಿ ನಗರಸಭೆಯನ್ನೂ ಗಬ್ಬೆಬ್ಬಿಸಿದ ಭೂಪನೆಂದರೆ ಮಾಜಿ ಅಧ್ಯಕ್ಷ ಶರಣಬಸಯ್ಯ ಕದರಳ್ಳಿಮಠ!

ಬರೀ 10 ತಿಂಗಳು ಅಧ್ಯಕ್ಷನಾಗಿದ್ದ ಇವನು! ಕೊಪ್ಪಳ ಎಂದೂ ಪ್ರಮಾಣದ ನಿಷ್ಪ್ರಯೋಜಕ, ಭ್ರಷ್ಟಾತಿಭ್ರಷ್ಟ ಕದರಳ್ಳಿಮಠನ ಅಲಕ್ಷ್ಯತನದಿಂದ ಇಂದು ಕೊಪ್ಪಳದಲ್ಲಿ ಸಂಜೆ ದೇವರಿಗೆ ಊದುಬತ್ತಿ ಹಚ್ಚುವುದು ತಪ್ಪಿದರೂ ಸೊಳ್ಳೆಬತ್ತಿ ಹಚ್ಚಲೇಬೇಕು. ಆ ಪರಿ ಸೊಳ್ಳೆಗಳ ಸಂತತಿ ಉದ್ಧಾರ ಮಾಡಿಬಿಟ್ಟವನು. ಇವನಿಗಿಂತ ಮುಂಚೆ ಇದ್ದ ವಿಜಯರೆಡ್ಡಿ ಬೀಳಗೀಣ ಕುಡೀತಾನೆ ಅನ್ನೋದು ಬಿಟ್ಟರೆ ಆಡಳಿತ ಚೆನ್ನಾಗಿತ್ತು, ಊರು ನೀಟಾಗಿತ್ತು, ಆದರೆ ಕೊಪ್ಪಳ ನಗರಸಭೆ ಅಧ್ಯಕ್ಷನಾಗಬೇಕೆಂಬ ದುರ್ಬುದ್ಧಿ ಕದರಳ್ಳಿಮಠನಿಗೆ ಬಂತೋ ಗೊತ್ತಿಲ್ಲ, ಐಪಿಯಸ್ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ 70 ಕೋಟಿ ಸಾಲದ ಮಂಜೂರಿನ ಆಸೆಯೋ ಇಲ್ಲಾ ರಾತ್ರಿ ಕನಸಲ್ಲಿ ನಗರಸಭೆ ಬಂದು 'ಝುಲಕ್ ದಿಕಲಾಜಾ... ಏಕ್ ಬಾರ್ ಆ ಜಾ...' ಅಂತ ಹಾಡಿತಂತೆ ತಗೊಳ್ಳಿ, ವಿಜಯರೆಡ್ಡಿಗೆ ಮೋಸ ಮಾಡಿ ಅಧ್ಯಕ್ಷ ಸೀಟಿಗೆ ಅಮರಿಕೊಂಡು ಕುಳಿತ. 70 ಕೋಟಿ ರೂ. ಈತನನ್ನು ಯಾವ ಪರಿ ಕಾಡುತ್ತಿತ್ತೆಂದರೆ ನಿಂತಲ್ಲಿ, ಕುಂತಲ್ಲಿ... ಕೊನೆಗೆ ಮಲಗಿದ್ದು, ಆಸ ಗಿಂತರೂ ಅಲ್ಲಿ ಹೋಗಿ 70 ಕೋಟಿ [illegible] ಕೊಳೆಯುತ್ತಿರುತ್ತಿದ್ದ. ರಾತ್ರಿಯಾದರೆ ಸಾಕು ಲಯನ್ಸ್ ಕ್ಲಬ್‌ನಲ್ಲಿ ಎಣ್ಣೆ ಹಾಕಿಕೊಂಡು ಬಂದು ತನ್ನ ಮನೆ ಕ್ರಾಸ್‌ನಲ್ಲಿ ನಿಂತು ಹೋಗೋ ಬರೋ ಹುಡುಗರಿಗೆ ಡಾಂಬರ್ ರೋಡ್ ಬೇಕಾ? ಸಿಮೆಂಟ್ ರೋಡ್ ಮಾಡಲಾ? ಅಂತ ಜೀವ ತಿನ್ನತೊಡಗಿದ. ಆದರೆ ಮಾಡಿದ್ದು ಮಾತ್ರ ರೊಕ್ಕ ತಿನ್ನೋದು!



ಕದರಳ್ಳಿಮಠ

ಮೊದಲೇ ದಲ್ಲಾಳಿ ವ್ಯಾಪಾರಿ. ಪ್ರತಿಯೊಂದಕ್ಕೂ ಬಡ್ಡಿ ಲೆಕ್ಕ ಹಾಕುವ ಚಾಳಿಯಿಂದಾಗಿ ನಗರಸಭೆಯಲ್ಲಿ ಪ್ಯೂನ್‌ಗಳೇ ಈತನ ಮಾತು ಕೇಳದಾದರು. ಫಾಗಿಂಗ್ ಮಿಷನ್ ಮೂಲೆಗಿಟ್ಟದ್ದಕ್ಕೆ ತಕ್ಕ ಶಿಕ್ಷೆಯಾಗಿ ಇಡೀ ಕೊಪ್ಪಳದಲ್ಲಿ ಮೊದಲ ಬಾರಿಗೆ ಇವನಿಗೇ ಚಿಕುನ್ ಗುನ್ಯಾ ಬಂದಿತ್ತು, ಆದರೆ ಮಂದಿ ಮುಂದೆ ಮಾತ್ರ 'ಕುಂಡಿಗೆ ಕುರ ಆಗಿತ್ತು ಮನ್ಯಾಗ ಮಲಗಿದ್ದೆ' ಅಂತ ಸುಳ್ಳು ಹೇಳುತ್ತ ತಿರುಗಿದ.

ಅಧ್ಯಕ್ಷನಾಗಿ ಎರಡೂ ಕೈಯಿಂದ ಮೇಯಬೇಕೆಂದು ಬಂದವನು ಏನು ಮಾಡಿದರೂ 70 ಕೋಟಿ ಬಾರದ್ದನ್ನು ನೋಡಿ ಕಸದ ಬಂಡಿ ಖರೀದಿಯಲ್ಲಿ ತಿಂದು ತೃಪ್ತನಾದ. ಆರು ಟ್ರಾಲಿಗಳಿಗೆ ಒಂದೇ ಇಂಜಿನ್ ಇಟ್ಟು ಉಗಿಸಿಕೊಂಡ. ವಾರಕ್ಕೆ 3 ದಿನ ಮಾತ್ರ ನಗರಸಭೆಗೆ ಬರುತ್ತಿದ್ದ ಅತ್ತ ಸ್ಯಾನಿಟರಿ ಇನ್ಸ್‌ಪೆಕ್ಟರ್ ನೂರ್‌ಬಾಷಾನನ್ನು ತಂದು ಕಮಿಷನರ್ ಮಾಡಿದ್ದ, ಮಲ್ಲೇಶಿಯನ್ನು ಅಕೌಂಟೆಂಟ್ ಮಾಡಿಕೊಂಡು ನಗರಸಭೆ ಅಕೌಂಟನ್ನು ಖಾಲಿ ಇಟ್ಟು ಬಿಟ್ಟಿದ್ದ. ಅಧ್ಯಕ್ಷನಾಗಿ ಇಡೀ ಊರಿಗೆ ಏನೂ ಹೊತ್ತು ತಂದು ಹಾಕದಿದ್ದರೂ, ತನ್ನನ್ನು ಗೆಲ್ಲಿಸಿದ ವಾರ್ಡ್‌ನವರಿಗೆ ಸೌಲಭ್ಯ ಕೊಡದಿದ್ದರೂ, ತಾನು ವಾಸವಾಗಿದ್ದ ದೇವರಾಜ ಅರಸ್ ಕಾಲೋನಿಯಲ್ಲಿದ್ದ ಮಹಿಳಾ ಶೌಚಾಲಯ ರೆಡಿಯಾಗಿ ವರ್ಷಗಳೇ ಆದರೂ ಚಾಲೂ ಮಾಡಿಸಲಿಲ್ಲ. ತನ್ನ ಮನೆ ಮುಂದೆಯೇ ಗಟಾರ ತುಂಬಿ ಹೊಲಸು ರಸ್ತೆಗೆ ಹರಿದರೂ ಅದರಲ್ಲೇ ತಿರುಗಾಡಿದನೇ ಹೊರತು, ಒಬ್ಬ ನೌಕರನನ್ನೂ ಕರೆದು ಸ್ವಚ್ಛಗೊಳಿಸಲಿಲ್ಲ ಅನ್ನುವುದಕ್ಕಿಂತಲೂ ಅವರು ಈತನ ಮಾತು ಕೇಳುವುದೇ ಇಲ್ಲ ಎಂಬುದೇ ನಿಜವಾದ ಮಾತು.

ಇಂತಹ ಪುಣ್ಯಾತ್ಮ ನಗರಸಭೆಗೆ ದೊಡ್ಡ ಪ್ರಮಾಣದಲ್ಲಿ ವಂಚಿಸಿ ಬೋಗಸ್ ಬಿಲ್ ಹಾಕಿದ್ದು ಅಧ್ಯಕ್ಷರ ಕಾರು ಬಾಡಿಗೆ ವಿಷಯದಲ್ಲಿ. ಅಧ್ಯಕ್ಷನಾದದ್ದೇ ತಡ ತನ್ನದೇ ಇಂಡಿಕಾ ಕಾರ್ (KA 37- 4255)ಗೆ ಅಧ್ಯಕ್ಷನ ಪ್ಲೇಟ್ ಹಾಕಿಕೊಂಡು ದಿನವೊಂದಕ್ಕೆ 453 ರೂ.ಗಳಂತೆ 260 ದಿನಗಳ ಬಿಲ್‌ನ್ನು ಬಿ.ಟಿ. ಪಾಟೀಲ್ ನಗರದ ಚಿನ್ನು ಟ್ರಾವೆಲ್ಸ್ ಹೆಸರಲ್ಲಿ ಹಾಕಿ ಎತ್ತಿದ್ದಾನೆ. ಪ್ರತಿದಿನವೂ ಕಾರು ಓಡಾಡಿದ ವಿವರಗಳೇ ಇಲ್ಲ, ಒಂದು ತಿಂಗಳಲ್ಲಿ ಈತನ ಕಾರು 31 ಕಿ.ಮೀ. ಅಷ್ಟೇ ಓಡಿತಂತೆ! ಅದಕ್ಕೆ ಬಿಲ್ ಪಡೆದದ್ದು ಕೇವಲ 13,600 ರೂ. ಮಾತ್ರ! ಈತ ದಿನಾರಾತ್ರಿ ಕುಡಿಯಲು ಮನೆಯಿಂದ ಲಯನ್ಸ್ ಕ್ಲಬ್‌ಗೆ ಹೋಗಿ ಬರುವುದನ್ನೇ ಲೆಕ್ಕ ಹಾಕಿದರೆ ತಿಂಗಳಿಗೆ ನೂರು ಕಿ.ಮೀ. ಆಗುತ್ತದೆ. ಕೊಪ್ಪಳದ ಜನ ಎಂಟೆಂಟು ದಿನ ನೀರಿಲ್ಲದೆ ಪರದಾಡಿದರೂ ಕದರಳ್ಳಿಮಠ ಮಾತ್ರ ನಗರಸಭೆಯನ್ನು ನುಂಗಿ ನೀರು ಕುಡಿದು ಸೀಟು ಬಿಟ್ಟಿದ್ದಾನೆ. ಕದರಳ್ಳಿಮಠ ಪೀರಿಯಡ್ ಮುಗಿಸಿ ಹೋಗುವಾಗ, ಉಳಿದಿದ್ದ ಬೀದಿ ದೀಪಗಳನ್ನು ಕೆಲ ಸದಸ್ಯರೊಂದಿಗೆ ಹಂಚಿಕೊಂಡು ಮನೆಗೆ ಒಯ್ದಿದ್ದಾನೆ. ಇಂತಹವನಿಗೆ ಇತ್ತೀಚೆಗೆ ಕೊಪ್ಪಳದಲ್ಲಿ ಯಾವುದೇ ಕಾರ್ಯಕ್ರಮ ಇರಲಿ 20 ರೂ.ಕೊಟ್ಟು ಹಾರ ಹಾಕಿಸಿಕೊಂಡು ಸನ್ಮಾನ ಮಾಡಿಸಿಕೊಳ್ಳುವ ಚಟ ಹುಟ್ಟಿಬಿಟ್ಟಿದೆ. ರಾಜ್ಯೋತ್ಸವ ಪ್ರಶಸ್ತಿಗೆ ಅರ್ಜಿ ಹಾಕಿರಲಿಲ್ಲ ಈ ಮಹಾನುಭಾವ ಎಂಬುದೇ ಒಂದು ಸಮಾಧಾನ. ಈತನಿಗೆ ಹುತ್ತಿರುವ ಸನ್ಮಾನದ ತೆವಲು ಕಂಡು ಜನವರಿ 26 ರಂದು 'ಪದ್ಮಶ್ರೀ' ಪ್ರಶಸ್ತಿ ಕೊಡಲಿದ್ದಾರಂತೆ.

ಮುಂಬರುವ ನಗರಸಭೆ ಚುನಾವಣೆಯಲ್ಲಿ ದೇವರಾಜ ಅರಸ್ ಕಾಲೋನಿಯ 30 ನೇ ವಾರ್ಡ್‌ಗೆ ತನ್ನ ಮಗನಿಗೆ ಕಾಂಗ್ರೆಸ್ ಟಿಕೆಟ್ ಕೊಡಿಸಲಿದ್ದಾನೆ. ಟಿಕೆಟ್ ಕೇಳೋಕೆ ಬಂದ, ಕಪಾಳಕ್ಕೆ ಬಿಗಿದು ವಾಪಸ್ ಕಳಿಸಬೇಕು ಕಾಂಗ್ರೆಸ್! ಅಂದಹಾಗೆ: ಕದರಳ್ಳಿಮಠ ಬಹಳ ಆಸೆ ಇಟ್ಟುಕೊಂಡಿದ್ದ ಎಡಿಬಿಯ 70 ಕೋಟಿ [illegible] ಇಲ್ಲ. ಪಾಪ!

-[illegible]



ಇವು ಊರುಗಳಾಗಿ ಉಳಿಯುತ್ತವೆಯೇ?



ಪೊಲೀಸ್ ಟೆರ್ರರ್ ಭಾಗ-3

ಮೈಸೂರಿನಲ್ಲಿ ಮೊನ್ನೆ ಇಬ್ಬರು ಅಲ್‌ಬದರ್ ಉಗ್ರಗಾಮಿಗಳ ಬಂಧನವನ್ನು ವರದಿ ಮಾಡುತ್ತ ಉದಯವಾಣಿ ಹೀಗೆ ಹೇಳಿದೆ. "ಇತ್ತೀಚೆಗೆ ಮಂಗಳೂರು ಸುತ್ತಮುತ್ತ ನಡೆದ ಕೋಮು ಗಲಭೆಯಲ್ಲಿ ಈ ಭಯೋತ್ಪಾದಕರ ಕೈವಾಡ ಇರುವ ಬಗ್ಗೆಯೂ ಶಂಕೆ ವ್ಯಕ್ತವಾಗಿದೆ..." (ತಾ. 28.10.06 ಪುಟ 7). ಈ ಶಂಕೆ ವ್ಯಕ್ತಪಡಿಸಿದವರು ಯಾರು ಎಂದು ವರದಿ ತಿಳಿಸಿಲ್ಲ. ಅದು ಏನೇ ಇರಲಿ, ಈ ಸುದ್ದಿ ನಿಜವೇ ಆಗಿದ್ದಲ್ಲಿ SIMI, KFD ಮತ್ತು ಈಗ ಹಠಾತ್ತನೆ ಕಾಣಿಸಿಕೊಂಡಿರುವ ಅಲ್‌ಬದರ್ ಜೊತೆ, ಈ "ಕೋಮು ಗಲಭೆ"ಯಲ್ಲಿ ಭಜರಂಗದಳ ಹಾಗೂ ಶ್ರೀರಾಮ ಸೇನೆ ಕೂಡ ಸಹಕರಿಸಿವೆ ಎಂಬುದು ನಿಶ್ಚಯ. ಮಂಗಳೂರಿನಲ್ಲಿ ಹಿಂಸಾಚಾರ ಶುರುಮಾಡಿದ್ದೇ ಈ ಎರಡು ಸಂಘಟನೆಗಳವರು. ಅದು ಇವತ್ತು ನಿನ್ನೆ ಶುರುವಾದದ್ದೂ ಅಲ್ಲ. ಮೊನ್ನೆ ನಡೆದ ಗಲಭೆಯಲ್ಲಿ ಮುಸ್ಲಿಮರ ಗುಂಪುಗಳೂ ಸಾಕಷ್ಟು ವಿನಾಶಕೃತ್ಯಗಳನ್ನು ನಡೆಸಿವೆ.

ಉಳ್ಳಾಲ ಮಾಸ್ತಿ ಕಟ್ಟೆ, ಕುತ್ತಾರು, ಫರಂಗಿಪೇಟೆಗಳಲ್ಲಿ ಹಲವು ಹಿಂದೂಗಳ ಅಂಗಡಿಗಳಿಗೆ ಹಾನಿ ಆಗಿದೆ. ನಾಲ್ಕು ಅಂಗಡಿಗಳು ಸಂಪೂರ್ಣವಾಗಿ ಸುಟ್ಟು ಬೂದಿಯಾಗಿರುವುದನ್ನು ನಾವೇ ನೋಡಿದ್ದೇವೆ. ಆದರೆ ಮುಸ್ಲಿಮ್ ಗುಂಪುಗಳ ಈ ಹಿಂಸಾ ಕೃತ್ಯದ ಹಿಂದೆ ಒಂದು ವ್ಯವಸ್ಥಿತ ಯೋಜನೆ ಇದೆಯೆಂದು ನಮಗೆ ಅನ್ನಿಸಿಲ್ಲ. ಹಾಗೆಂದ ಮಾತ್ರಕ್ಕೆ ಅದು ಕ್ಷಮಾರ್ಹ ಎಂಬುದು ಖಂಡಿತ ನಮ್ಮ ವಾದವಲ್ಲ. ಈ ಹಿಂಸಾಕೃತ್ಯಗಳು, ಮುಸ್ಲಿಮರ ಮೇಲೆ ನಡೆದ ಹಲ್ಲೆಗಳಿಗೆ, ಅವರು ಆ ಕ್ಷಣದಲ್ಲಿ ತೋರಿದ ಪ್ರತಿಕ್ರಿಯೆಯಾಗಿತ್ತು, ಆದರೆ ಮುಸ್ಲಿಮ್ ಅಂಗಡಿಗಳ ಲೂಟ ಮತ್ತು ಮುಸ್ಲಿಮ್ ಮನೆಗಳ ಮೇಲೆ ಪೊಲೀಸರ ದಾಳಿಯ ಹಿಂದೆ ಒಂದು ಯೋಜನೆ ಮತ್ತು ಸಿದ್ಧಾಂತವಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಉದಾಹರಣೆಗೆ ಮಂಗಳೂರು ಗಲಭೆಯಲ್ಲಿ ಪ್ರಾಣ ಕಳೆದುಕೊಂಡ ಇಬ್ಬರೂ ಸಹ ಮುಸ್ಲಿಮ್ ತರುಣರನ್ನು ಸ್ಕೆಚ್ ಹಾಕಿಕೊಂಡೇ ಕೊಲ್ಲಲಾಗಿದೆ.

ಬಜ್ಪೆ ಮಸೀದಿಯಲ್ಲಿ ಇಮಾಮರ ಜೀವ ಬಲಿ

ಮಂಗಳೂರು ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ ರಸ್ತೆಯ ಹಿಂಬದಿಯ ಪ್ಯಾರೆಲಲ್ ರೋಡಿನ ಅಡ್ಡರಸ್ತೆ ಹಿಡಿದು ಅಲ್ಲಿಂದ ಒಂದು ಓಣಿ ದಾಟಿ, ಏರು ಹತ್ತಿ ಹೋದರೆ ಬಜ್ಪೆ ಮಸೀದಿ ಸಿಗುತ್ತದೆ. ಬಜ್ಪೆಯಲ್ಲಿಯೇ ಹೆಚ್ಚಿನವರಿಗೆ ಗೊತ್ತಿಲ್ಲದ ಅಜ್ಞಾತಮೂಲೆಯಲ್ಲಿರುವ ಈ ಮಸೀದಿಯ ಸುತ್ತಮುತ್ತ ಇರುವ ಮನೆಗಳು ಕ್ರಿಶ್ಚಿಯನ್ನರವು. ತಾ. 6.10.06 ಶುಕ್ರವಾರ ಅಂದರೆ ಶ್ರೀರಾಮ ಸೇನೆಯ ಬಂದ್ ದಿನ, ಸಂಜೆಯ ಪ್ರಾರ್ಥನೆ ಮುಗಿಸಿ, ಬಜ್ಪೆ ಮಸೀದಿಯ ತರುಣ ಇಮಾಮ್ ಅಬ್ದುಲ್ ಗಫೂರ್ ಮಸೀದಿಯಲ್ಲಿ ಒಬ್ಬರೇ ಇದ್ದರು. ಸಾಮಾನ್ಯವಾಗಿ ರಂಜಾನ್ ಮಾಸದಲ್ಲಿ ಮಸೀದಿಗಳಲ್ಲಿ ದಿನದ ಎಲ್ಲ ಹೊತ್ತೂ ಜನರಿರುತ್ತಾರೆ. ಆದರೆ ಆ ಮುಸ್ಸಂಜೆ, ಬಜ್ಪೆ ಮಸೀದಿಯಲ್ಲಿ ಎಲ್ಲರೂ ಇಫ್ತಾರ್‌ಗೆ ಹೋಗಿದ್ದರಿಂದ ಗಫೂರ್ ಏಕಾಂಗಿಯಾಗಿದ್ದರು.

ಅಷ್ಟು ಹೊತ್ತಿಗೆ ಮಸೀದಿಯ ಪಕ್ಕದ ಎತ್ತರದ ಕಾಂಪೌಂಡು ಹಾರಿ ಸುಮಾರು 15 ಜನರ ಗುಂಪೊಂದು ಮಸೀದಿಯ ಒಳನುಗ್ಗಿತು. ಅದರಲ್ಲಿ ಒಬ್ಬ ಗಫೂರ್‌ರ ತಲೆಗೆ ಹೊಡೆದು ಹೊಟ್ಟೆಗೆ ಚಾಕುವಿನಿಂದ ಇರಿದ. ಅದೊಂದು ವಿಶೇಷ ಬಗೆಯ ಹತ್ಯಾರವಂತೆ; ಇರಿದು, ಪ್ರೆಸ್ ಮಾಡಿದರೆ ಒಳಗಿದ್ದುದನ್ನೆಲ್ಲ ಕತ್ತರಿಸಿ ಹಾಕುವ ಆ ಚಾಕು ಗುಜರಾತಿನಲ್ಲಿ ಮಾತ್ರ ಸಿಗುವುದಂತೆ. ಗಫೂರ್‌ಗೆ ಅದರ ಒಂದೇ ಇರಿತ ಸಾಕಾಯಿತು. ಆಸ್ಪತ್ರೆಗೆ ಸಾಗಿಸುವಷ್ಟರಲ್ಲಿಯೇ ಅವರ ಪ್ರಾಣ ಹೋಗಿತ್ತು.

ಅಬ್ದುಲ್ ಗಫೂರ್ ಮದನಿ, ಒಂದು ವರ್ಷದ ಕೆಳಗಷ್ಟೇ ಬಜ್ಪೆ ಮಸೀದಿಯಲ್ಲಿ ಇಮಾಮ್ಸ್ ಆಗಿ ನೇಮಕಗೊಂಡಿದ್ದರು. ಅವರು ಸುಳ್ಯದ ಸಮೀಪದ ಗೂನಡ್ಕ ಗ್ರಾಮದವರು. ತಮ್ಮ ಕೊಲೆಗೆ ಸ್ವಲ್ಪ ಹೊತ್ತಿನ ಮೊದಲು ಗಫೂರ್ ತಮ್ಮ ತಾಯಿಗೆ ಫೋನ್ ಮಾಡಿ, "ಊರಲ್ಲಿ ಗಲಾಟೆ ಇದೆ; ಆದರೆ ನಮ್ಮ ಮಸೀದಿ ಸುತ್ತಮುತ್ತ ಏನೂ ತೊಂದರೆ ಇಲ್ಲ" ಎಂದು ಹೇಳಿದ್ದರಂತೆ. ಗಫೂರ್ ಸುಳ್ಯದಲ್ಲಿ ಎಲ್ಲರಿಗೂ ಗೊತ್ತಿರುವ ಹುಡುಗ. ತಮ್ಮ ಊರಿನವನೊಬ್ಬ ಮಂಗಳೂರಿನಲ್ಲಿ ಹೀಗೆ ಕೊಲೆಯಾದದ್ದು ತಿಳಿದು ಜಾತಿ ಮತ ಭೇದವಿಲ್ಲದೆ ಊರಿನಲ್ಲಿ ಎಲ್ಲರಿಗೂ ವಿಷಾದವಾಯಿತಂತೆ. ಈ ಕಾರಣದಿಂದಲೇ ಪ್ರಾಯಶಃ ಹಿಂದೂತ್ವದ ಭದ್ರ ನೆಲೆಗಳಲ್ಲಿ ಒಂದಾಗಿರುವ ಸುಳ್ಯ ಈ ಬಾರಿ ಶಾಂತವಾಗಿತ್ತು ಎಂದು ಸುಳ್ಯದ ನಮ್ಮ ಸ್ನೇಹಿತರೊಬ್ಬರು ತಿಳಿಸಿದರು. ಹೀಗೆ ಬಜ್ಪೆ ಮಸೀದಿಯ ಇಮಾಮರ ಕೊಲೆಗೆ ಬಲಿದಾನವಾಯಿತು.

ಬೊಳಿಯಾರು ಇಬ್ರಾಹಿಂ ಕೊಲೆ

ಬಂಟವಾಳ ಸಮೀಪದ ಬೊಳಿಯಾರು ಗ್ರಾಮದ ಇಬ್ರಾಹಿಂ ಗೋವೆಯಲ್ಲಿ ಬಟ್ಟೆ ವ್ಯಾಪಾರಿ. ಸುಮಾರು 30 ವರ್ಷ ಪ್ರಾಯದ ಅವರಿಗೆ ಒಂದು ಮಗುವಿದೆ. ಅವರ ಸಂಸಾರ, ತಂದೆ, ತಾಯಿ, ತಂಗಿ, ತಮ್ಮ ಎಲ್ಲರೂ ಬೊಳಿಯಾರುವಿನಲ್ಲೇ ನೆಲೆಸಿದ್ದಾರೆ. ಮಂಗಳೂರು ಗಲಭೆಯ ವೇಳೆ 'ಅಚಾನಕ್ಕಾಗಿ' ಸಂಭವಿಸಿದ ಅವರ ಕೊಲೆ ಎಷ್ಟು ಹೃದಯವಿದ್ರಾವಕವೋ ಅಷ್ಟೇ ಅರ್ಥಹೀನವೂ ಆಗಿದೆ; ಥೇಟು ಸಾದತ್ ಹಸನ್ ಮಾಂಟೋಕತೆಗಳಂತೆ.

ವಿಶೇಷ ವರದಿ

ಇಬ್ರಾಹಿಂ ಸಮೀಪದ ಸಂಬಂಧಿಕ ಅಶ್ರಫ್ ತಾ. 7.10.06 ಶನಿವಾರ ದುಬೈಗೆ ಹೋಗುವವರಿದ್ದರು. ಮಂಗಳೂರಿನ ಒಂದು ಮಿಲ್ಲಿನಲ್ಲಿ ಕೂಲಿಯಾಗಿದ್ದ ಅಶ್ರಫ್ ದುಬೈಯಲ್ಲೂ ಕೂಲಿ ಕೆಲಸಕ್ಕೆಂದೇ ಹೊರಟಿದ್ದರು. ಅವರ ವಿಮಾನದ ಟಿಕೆಟ್, ಆ ರಾತ್ರಿ 9 ಗಂಟೆಯ ಫ್ಲೈಟ್‌ಗೆ ಬುಕ್ ಆಗಿತ್ತು. ಶಹರದಲ್ಲಿ ಕರ್ಫ್ಯೂ ಇದ್ದುದರಿಂದ ಮಂಗಳೂರು ರಸ್ತೆಗಳಲ್ಲಿ ಸಾಮಾನ್ಯ ವಾಹನಗಳು ಚಲಿಸುವಂತಿರಲಿಲ್ಲ, ಹಾಗಾಗಿ ಅಶ್ರಫ್ ಬಜ್ಪೆ ವಿಮಾನ ನಿಲ್ದಾಣಕ್ಕೆ ಹೋಗಲು ಬಂಟವಾಳ ಬಿ.ಸಿ. ರೋಡಿನ ಸೋಮಯಾಜಿ ಕ್ಲಿನಿಕ್‌ನ ಆಂಬುಲೈನ್ಸ್‌ನ್ನು 1500.00 ಬಾಡಿಗೆಗೆ ಗೊತ್ತು ಮಾಡಿ ಸಂಜೆ 5 ಗಂಟೆ ಸುಮಾರಿಗೆ ಮನೆಯಿಂದ ಹೊರಟರು.

ಆಂಬುಲೆನ್ಸ್‌ನಲ್ಲಿ ಕೊಲೆಯಾದ ಇಬ್ರಾಹಿಂ ಸೇರಿ 7 ಜನರಿದ್ದರು. ಎಲ್ಲರೂ ಅಶ್ರಫ್‌ನನ್ನು ಬೀಳ್ಕೊಡುವುದಕ್ಕೆಂದು ಹೊರಟವರು. ಈ ವಾಹನವನ್ನು ಮಂಗಳೂರು ಹೊರವಲಯದ ಪುಂಚಮೆ ಎಂಬಲ್ಲಿ ಅಡ್ಡಗಟ್ಟಿ ನಿಲ್ಲಿಸಲಾಯಿತು. ವಾಹನ ತಡೆದ ಗುಂಪಿನಲ್ಲಿ 9 ಜನರಿದ್ದು ಅವರ ಕೈಯಲ್ಲಿ ತಲವಾರು, ರಾಡುಗಳಿದ್ದವು. ಅವರು ಮೂರು ಬೈಕುಗಳಲ್ಲಿ ಅಂಬುಲೆನ್ಸ್‌ನ್ನು ಫಾಲೋ ಮಾಡಿಗೊಂಡು ಬಂದಿದ್ದರು. ಅದು ನಿಂತ ತತ್‌ಕ್ಷಣ ಗುಂಪಿನಲ್ಲಿದ್ದವರು, "ನಿಮ್ಮಲ್ಲಿ ಗಲ್ಫ್‌ಗೆ ಹೊರಟವರು ಯಾರು?" ಎಂದು ಕೇಳಿ, ಒಳಗಿದ್ದವರಿಗೆ ರಾಡು ತಲವಾರುಗಳಿಂದ ಬಾರಿಸಿದರು; ಆಂಬುಲೆನ್ಸ್‌ಗೆ ಬೆಂಕಿ ಕೊಟ್ಟರು.

ಒಳಗೆ ಕೂತವರು ಹೇಗೋ ಹೊರಗೆ ಹಾರಿ ಪ್ರಾಣ ಉಳಿಸಿಕೊಂಡರು. ಅಷ್ಟರಲ್ಲಿ ದೂರದಲ್ಲಿ ಪೊಲೀಸ್ ಜೀಪು ಬರುತ್ತಿದ್ದುದನ್ನು ಕಂಡು ಗುಂಪು ಪಲಾಯನ ಮಾಡಿತು. ಆಂಬುಲೆನ್ಸ್‌ನಲ್ಲಿದ್ದ ಇಬ್ರಾಹಿಂ ತಲೆಗೆ ಏಟು ಬಿದ್ದು ಸ್ಥಳದಲ್ಲೇ ಪ್ರಾಣ ನೀಗಿದರೆ, ಉಳಿದವರು ಗಂಭೀರವಾಗಿ ಗಾಯಗೊಂಡು ಮಂಗಳೂರಿನ ಯುನಿಟಿ ಆಸ್ಪತ್ರೆಗೆ ಅಡ್ಮಿಟ್ ಆದರು. ದುಬೈಗೆ ಹೊರಟು ಆಸ್ಪತ್ರೆ ಸೇರಿದ ಅಶ್ರಫ್ ಯಾವುದಾದರೂ ಇಸ್ಲಾಮಿಕ್ ಕೋಮುವಾದಿ ಸಂಘಟನೆಯ ಸದಸ್ಯರೋ ಎಂದು ನಾವು ಕೇಳಿದ್ದಕ್ಕೆ ಅವರು "ನಾನು ನಮ್ಮ ಮಸೀದಿಯ ಜಮಾತ್‌ನ ಸದಸ್ಯ ಕೂಡ ಅಲ್ಲ, ಕೂಲಿ ಕೆಲಸ ಮಾಡುವವನಿಗೆ ಜಮಾತ್‌ನ ಚಂದಾ ಕಟ್ಟುವ ತಾಕತ್ತಿಲ್ಲ" ಎಂದು ಉತ್ತರಿಸಿದರು.

ಜೆ. ರಾಜಶೇಖರ
ಪಟ್ಟಾಭಿರಾಮ ಸೋಮಯಾಜಿ
ಹರ್ಷಾದ್ ವರ್ಕಾಡಿ

ಮಂಗಳೂರಿನ ಕೊಡಿಯಾಲ್ ಬೈಲಿನಲ್ಲಿ 70 ವರ್ಷದ ವೃದ್ಧ ಅಹಮದ್ ಮುಸ್ಲಿಯಾರ್ ಮೇಲೆ ನಡೆದ ಹಲ್ಲೆ ಕೂಡ ಮಾಂಟೋಕತೆಯ ಹಾಗೆ ಇದೆ. ಮುಸ್ಲಿಯಾರು ಮೂಡುಬಿದಿರೆಯ ಬೆಳುವಾಯಿ ಗ್ರಾಮದವರು. ಕಳೆದ 8 ವರ್ಷಗಳಿಂದ ಅವರು ಮಂಗಳೂರು ಕೊಡಿಯಾಲ್ ಬೈಲಿನಲ್ಲಿರುವ ಯೇನಪೋಯ ಮೆಡಿಕಲ್ ಕಾಲೇಜು ಆಸ್ಪತ್ರೆ ಕಟ್ಟಡದಲ್ಲಿರುವ ಮಸೀದಿಯಲ್ಲಿ ಇಮಾಮರಾಗಿದ್ದಾರೆ. ತಾ. 6.10.2006 ಶುಕ್ರವಾರ ಸಂಜೆಯ ಪ್ರಾರ್ಥನೆ ಮುಗಿಸಿ, ಮಸೀದಿಯಲ್ಲಿ ಮುಸ್ಲಿಯಾರ್ ಒಬ್ಬರೇ ಇದ್ದರು. ಆಗ ಹಠಾತ್ತನೆ 5-6 ಜನ ತರುಣರು ತಲವಾರು ಹಿಡಿದು ಮಸೀ ದಿಯ ಒಳನುಗ್ಗಿದರು. ಅವರಲ್ಲಿ ಒಬ್ಬ ಮುಸ್ಲಿಯಾರರ ತಲೆಗೆ ಹೊಡೆದು ಹೊಟ್ಟೆಗೆ ಇರಿಯಬೇಕೆನ್ನುವಷ್ಟರಲ್ಲಿ ಅವರು ತಮ್ಮ ಕೈ ಅಡ್ಡ ಹಿಡಿದರು. ಹಾಗಾಗಿ ಅವರ ಪ್ರಾಣ ಉಳಿಯಿತು. ಆದರೆ ಅವರ ಅಂಗೈಯಲ್ಲಿ ಆಳವಾದ ಗಾಯವಾಗಿದೆ. ಅವರ ತಲೆಯಲ್ಲೂ ಗಾಯಗಳಾಗಿದ್ದು ಹೊಲಿಗೆ ಹಾಕಲಾಗಿದೆ.

"ನಿಮಗೆ ಹೊಡೆದವರುಂ ಯಾರು ಎಂದು ಗೊತ್ತಾ? ನೀವು ಅವರ ಮುಖ ನೋಡಿದಿರಾ?" ಎಂದು ನಾವು ಮುಸ್ಲಿಯಾರನ್ನು ಕೇಳಿದೆವು. "ಆ ಹುಡುಗರು ಯಾರೋ ನನಗೆ ಗೊತ್ತಿಲ್ಲ, ನಾನು ಸಾಯುತ್ತೇನೆ ಎಂದೇ ಭಾವಿಸಿದ್ದೆ. ಸಾಯುವುದಕ್ಕೆ ಹೊರಟವ ಅವರ ಮುಖ ಯಾಕೆ ನೋಡಲಿ?" ಎಂದು ಮುಸ್ಲಿಮಾರರು ನಿರ್ಲಿಪ್ತರಾಗಿ ಉತ್ತರಿಸಿದರು. ಮಸೀದಿಗೆ ನುಗ್ಗಿದ ಹುಡುಗರು ತಮ್ಮ ಕೆಲಸ ಮುಗಿಸಿ ಜಾಗ ಖಾಲಿ ಮಾಡಿದ ಮೇಲೆ, ಗಾಯಗೊಂಡ ಮುಸ್ಲಿಮಾರರು ರಕ್ತ ಸುರಿಸುತ್ತ ಒಬ್ಬರೇ ಮೆಟ್ಟಲು ಹತ್ತಿ ಅದೇ ಕಟ್ಟಡದ ಮೇಲುಅಂತಸ್ತಿನಲ್ಲಿದ್ದ ಆಸ್ಪತ್ರೆಯ ಎಮರ್ಜನ್ಸಿ ವಾರ್ಡಿಗೆ ಹೋಗಿ ಅಡ್ಮಿಟ್ ಆದರು. ಗಲಭೆಗಳಲ್ಲಿ ಆಸ್ಪತ್ರೆಯ ಸಮೀಪ ಪೆಟ್ಟು ಬಿದ್ದರೆ ಇದೊಂದು ಅನುಕೂಲ!

ಫೈಸಲ್ ನಗರ, ವೀರ ನಗರ

ಮಂಗಳೂರು ಹೊರವಲಯದಲ್ಲಿ ಪಂಪ್‌ವೆಲ್, ಪಡೀಲುಗಳ ಮುಖಾಂತರ ಹೋದರೆ ಸಿಗುವುದೇ ಫೈಸಲ್ ನಗರ ಮತ್ತು ವೀರ ನಗರ ಎಂಬ ಪ್ರದೇಶಗಳು. ಇವು ಅಕ್ಕಪಕ್ಕದಲ್ಲಿದ್ದು ಮೊದಲು ಈ ಇಡೀ ಪ್ರದೇಶವನ್ನು ಕೊಡಂಗೆ ಎಂದು ಕರೆಯುತ್ತಿದ್ದರು. ಫೈಸಲ್ ನಗರ, ವೀರ ನಗರಗಳು ಇತ್ತೀಚೆಗೆ ಬಳಕೆಗೆ ಬಂದಿರುವ ಹೆಸರುಗಳು. ಫೈಸಲ್ ನಗರದಲ್ಲಿ ಮುಸ್ಲಿರೇ ಹೆಚ್ಚು, ಆದರೆ ಅಲ್ಲಿ ಹಿಂದೂಗಳ ಮನೆಗಳೂ ದೊಡ್ಡ ಸಂಖ್ಯೆಯಲ್ಲಿ ಇವೆ. ವೀರ ನಗರದಲ್ಲಿ ಹಿಂದೂಗಳದ್ದೇ ದೊಡ್ಡ ಸಂಖ್ಯೆ, ಅಲ್ಲಿ ಕೆಲವು ಕ್ರಿಶ್ಚಿಯನ್ನರ ಮನೆಗಳೂ ಇವೆ. ಹೆಸರುಗಳನ್ನು ಬಿಟ್ಟರೆ, ಅವೆರಡು ಸ್ಥಳಗಳನ್ನು ಪ್ರತ್ಯೇಕವಾಗಿ ಗುರುತಿಸುವಂತಹ ಯಾವ ಸಂಗತಿಯೂ ನಿಮಗೆ ಅಲ್ಲಿ ಕಾಣಸಿಗುವುದಿಲ್ಲ, ಆದರೆ ಕರಾವಳಿಯ ಪತ್ರಿಕೆಗಳು ಮತ್ತು ಸ್ಥಳೀಯ ಟೀವಿ ಚಾನೆಲ್ಲುಗಳು ಮೊನ್ನೆಯ ಹಿಂಸಾಚಾರವನ್ನು ವರದಿ ಮಾಡುವಾಗ ಫೈಸಲ್ ನಗರ ಮತ್ತು ವೀರ ನಗರಗಳು ಎರಡು ಪ್ರತ್ಯೇಕ ದೇಶಗಳೋ ಎಂಬಂತೆ ಬಣ್ಣಿಸಿವೆ.

ತಾ. 6.10.2006 ಶುಕ್ರವಾರ ಸಂಜೆ, ಫೈಸಲ್ ನಗರದ ಕೆಲವು ಹಿಂದೂಗಳ ಮನೆಗಳ ಮೇಲೆ, ಮುಸ್ಲಿಮ್ ಯುವಕರ ಗುಂಪು ಕಲ್ಲು ತೂರಾಟ ನಡೆಸಿತು; ನಾಲ್ಕಾರು ಮನೆಗಳ ಬಾಗಿಲು ಮುರಿದು ಒಳನುಗ್ಗಿ ದಾಂಧಲೆ ನಡೆಸಿತು. ಒಂದು ಮನೆಯಲ್ಲಿ ಮಧ್ಯ ವಯಸ್ಸಿನ ವ್ಯಕ್ತಿ ಮತ್ತು ಅವರ ಮಗನಿಗೆ ಗುಂಪಿನವರು ಥಳಿಸಿದರು. ನಾವು ಆ ಮನೆಗಳ ಒಳಹೊಕ್ಕು ನೋಡಿದ್ದೇವೆ. ಅಲ್ಲಿ ವ್ಯವಸ್ಥಿತವಾದ ಧ್ವಂಸವೇನೂ ನಡೆದಿಲ್ಲ. ಆ ದಿನ ಸಂಜೆಯ ವೇಳೆಗೆ, ಪೊಲೀಸರು ಫೈಸಲ್ ನಗರ ಸುಮಾರು 30 ಮನೆಗಳವರನ್ನು ಒತ್ತಾಯಪಡಿಸಿ, ಸಮೀಪದ ವೀರನಗರದ ಅಂಗನವಾಡಿಗೆ ಸ್ಥಳಾಂತರಿಸಿದರು. "ನೀವು ಇಲ್ಲಿಯೇ ಇದ್ದರೆ ನಿಮ್ಮ ಜೀವ ರಕ್ಷಣೆಗೆ ನಾವು ಜವಾಬ್ದಾರರಲ್ಲ" ಎಂದು ಪೊಲೀಸರು ಅವರಿಗೆ ಹೇಳಿದ್ದರು.

ಹೀಗೆ ಸ್ಥಳಾಂತರಗೊಂಡ ಸುಮಾರು 150 ಜನ ಅಂಗನವಾಡಿಯಲ್ಲಿ ಮೂರು ದಿನ ಕಳೆದು ಈಗ ತಮ್ಮ ಮನೆಗಳಿಗೆ ವಾಪಸಾಗಿದ್ದಾರೆ. ನಾವು ಅವರಲ್ಲಿ ಅನೇಕರನ್ನು ಮಾತಾಡಿಸಿದಾಗ, ಎಲ್ಲರೂ ತಾವು ಪೊಲೀಸರ ಒತ್ತಾಯವಿಲ್ಲದಿದ್ದರೆ ತಮ್ಮ ಮನೆಮಾರು ಬಿಟ್ಟು ಹೋಗುತ್ತಿರಲಿಲ್ಲ; ಇಲ್ಲಿ ಇಂತಹ ಪರಿಸ್ಥಿತಿಯೂ ಇರಲಿಲ್ಲ ಎಂದು ಖಡಾಖಂಡಿತವಾಗಿ ಹೇಳಿದರು. ಒಬ್ಬ ಮಹಿಳೆಯಂತೂ "ಪೊಲೀಸರು ವ್ಯಾನಿಗೆ ದೂಡಿದ್ದರಿಂದ ನಾವು ಹೋದೆವು" ಎಂದರು. ಪೊಲೀಸರ ಒತ್ತಾಯವಿದ್ದರೂ ಮನೆ ಬಿಡಲು ಒಪ್ಪದ ಮೂರು ಮನೆಯವರನ್ನೂ ನಾವು ಮಾತಾಡಿಸಿದೆವು. ಅದರಲ್ಲಿ ಒಂದು ಮನೆಯವರು ನಾವು ಮತ್ತೆಮತ್ತೆ ಪ್ರಶ್ನಿಸಿದಾಗಲೂ, "ಇಲ್ಲಿ ನಮಗೆ ಭಯ ಇಲ್ಲ, ಆಗಲೂ ಇರಲಿಲ್ಲ, ಈಗಲೂ ಇಲ್ಲ, ನಾವು 40 ವರ್ಷದಿಂದ ಇಲ್ಲಿ ಮನೆ ಮಾಡಿಕೊಂಡಿದ್ದೇವೆ. ಹಾಗೆ ಭಯವಿದ್ದರೆ ಒಟ್ಟಿಗೆ ಇರುವುದಕ್ಕೆ ಆಗುತ್ತದಾ?" ಎಂದು ದೃಢವಾಗಿ ಹೇಳಿದರು.

ಫೈಸಲ್ ನಗರದ ಹಿಂದೂಗಳ ಸ್ಥಳಾಂತರ ಪೊಲೀಸರ ಬೇಜವಾಬ್ದಾರಿ ನಿರ್ಧಾರದಿಂದ ನಡೆದರೂ, ಅದು ಇಲ್ಲಿನ ಮಾಧ್ಯಮಗಳಿಗೆ ದ್ವೇಷ ಆತಂಕಗಳನ್ನು ಹೆಚ್ಚಿಸುವುದಕ್ಕೆ ಇನ್ನಷ್ಟು ಗ್ರಾಸ ಒದಗಿಸಿತು. ಮಂಗಳೂರಿನ ...
ಟೀವಿ ಚಾನೆಲ್, "ಇಂದೆನಗೆ ಆಹಾರ ಸಿಕ್ಕಿತು" ...
ಖುಷಿಪಟ್ಟ ಗೋವಿನ ಹಾಡಿನ ದುಷ್ಟ ವ್ಯಾಘ್ರನ ...
ವೀರನಗರ ಅಂಗನವಾಡಿಯಲ್ಲಿ ಆಶ್ರಯ ಪಡೆದ "ಭಯ...
ಹಿಂದೂ"ಗಳ ಚಿತ್ರಿಕೆಗಳನ್ನು ಮತ್ತೆ ಮತ್ತೆ ಪ್ರದರ್ಶಿ...

ಅ. 6ರ ಶುಕ್ರವಾರ ಫೈಸಲ್ ನಗರದಲ್ಲಿ ...
ಇನ್ನೂ ಒಂದೆರಡು ಘಟನೆಗಳನ್ನೂ ನಾವು ಗಮನಿಸ...
ಆ ದಿನ ಸುಮಾರು 2 ಗಂಟೆಯ ಹೊತ್ತಿಗೆ ಫೈ...
ನಗರದಲ್ಲಿ ಮನೆ ಮಾಡಿಕೊಂಡಿರುವ ಅಬ್ದುಲ್ ಖಾ...
ಅವರ ಎ.ಕೆ. ಸ್ಟೋರ್ಸ್ ಮೇಲೆ ದಾಳಿ ನಡೆ...
ಸುಮಾರು 100 ಜನರಷ್ಟಿದ್ದ ಗುಂಪು ಅಂಗಡಿಗೆ ...
ಒಳಗಿದ್ದ ದಿನಿಸು ಸಾಮಾನುಗಳನ್ನೆಲ್ಲ ಹೊರಗೆ ...
ಹಾಕಿ, ಎರಡು ಫ್ರಿಜ್‌ಗಳನ್ನೂ ಕೂಡ ನಾಶಗೊಳಿ...
ಈ ಗುಂಪಿನಲ್ಲಿದ್ದವರ ಹೆಸರುಗಳನ್ನು ಕಾಣಿಸಿ ಅ...
ಖಾದರ್ ಪೊಲೀಸರಿಗೆ ದೂರು ಕೊಟ್ಟಿದ್ದಾರೆ. ...
ಈವರೆಗೆ ಅವರಲ್ಲಿ ಯಾರನ್ನೂ ಬಂಧಿಸಿಲ್ಲವಂತೆ.

ಅದಕ್ಕೆ ಬದಲಾಗಿ ಅದೇ ದಿನ ಸಂಜೆ, ಈ ...
ನಡೆದ 1 ಗಂಟೆಯ ನಂತರ ಪೊಲೀಸರು ಖಾ...
ಅವರ ಮನೆಗೆ ನುಗ್ಗಿ ಅವರ ಎರಡನೆ ಮಗ ಪರ್ವೇಜ...
ಬಂಧಿಸಿ ನಂತರ ಬಳ್ಳಾರಿ ಜೈಲಿಗೆ ಸಾಗಿಸಿದ್ದಾರೆ. ಖಾ...
ಸೊಸೆ ಫಾತಿಮಾ ಈ ಬಗ್ಗೆ ಪೊಲೀಸರನ್ನು ಪ್ರಶ್ನಿಸಿ...
"ನಿಮ್ಮ ಮಕ್ಕಳಿಗೆ ಲೂಟಿ ಮಾಡಲು ಯಾಕೆ ಕಲಿಸುತ್ತಿ...
ಎಂದು ಕೇಳಿದ್ದಾರೆ. ಫಾತಿಮಾ, "ನಮ್ಮ ಅಂಗಡಿ...
ಲೂಟಿಯಾಗಿದೆ; ನೀವು ನಮ್ಮ ಮನೆಯ ಹುಡುಗ...
ಅರೆಸ್ಟ್ ಮಾಡುತ್ತಿದ್ದೀರಿ" ಎಂದಾಗ ಪೊಲೀಸ...
ಆಕೆಯ ಮೇಲೆ ಕೈ ಮಾಡಲು ಬಂದ. ಆಗ ...
ಪೊಲೀಸರು ಅವನನ್ನು ತಡೆದರಂತೆ.

ಈ ಘಟನೆಯನ್ನು ನಮಗೆ ವಿವರಿಸಿದ ಫಾ...
ಅವತ್ತು ಫೈಸಲ್ ನಗರದಲ್ಲಿ ಅನೇಕ ಮುಸ್ಲಿಮ್ ...
ಗಳವರೂ ಪೊಲೀಸರಿಗೆ ಹೆದರಿ ಮನೆ ಖಾಲಿ ಮಾಡಿ...
ತಿಳಿಸಿದರು. "ಯಾಕೆ ಯಾವ ಟೀವಿ ಚಾನೆಲ್‌ನ...
ಇದನ್ನು ತೋರಿಸಲಿಲ್ಲ?" ಎಂದು ಅವರು ನಹ...
ಕೇಳಿದರು. ಖಾದರ್ ಅವರ ಮನೆಯ ಎದುರಿಗೆ ರಸ್ತೆ...
ಇರುವ ಮನೆ ಬಶೀರ್‌ರದ್ದು. ಟೈರ್ ರಿಸೋ...
ವೃತ್ತಿ ಮಾಡಿಕೊಂಡಿರುವ ಅವರು ಸುಮಾರು ...
ಹರೆಯದವರು. ಶುಕ್ರವಾರ ಮಧ್ಯಾಹ್ನ ಪೊಲೀಸರು ...
ಮನೆಗೆ ಬಾಗಿಲು ಮುರಿದು ಒಳನುಗ್ಗಿದಾಗ, ...
ಜಾಂಡಿಸ್‌ನಿಂದ ನಿತ್ರಾಣರಾಗಿ ಮಲಗಿದ್ದರು. ಪೊಲೀ...
ಅವರಿಗೆ ಒದ್ದು, ತಡೆಯಲು ಹೋದ ಅವರ ಪತ್ನಿ...
ದೂಡಿ, ಅರೆಸ್ಟ್ ಮಾಡಿ ಕಂಕನಾಡಿ ಪೊಲೀಸ್ ...
ಒಯ್ದರು. ಮಾರನೆಯ ದಿನ ಠಾಣೆಯ ಎಸ್‌ಐಗೆ ...
ಜಾಂಡಿಸ್‌ನಿಂದ ನರಳುತ್ತಿರುವುದು ಹೌದು ...
ಮನವರಿಕೆಯಾಗಿ ಅವರನ್ನು ಮನೆಗೆ ಕಳುಹಿಸಿಕೊ...

ಫೈಸಲ್ ನಗರದಿಂದ ವೀರ ನಗರ ಅಂಗನ...
ಸ್ಥಳಾಂತರಗೊಂಡ ಹಿಂದೂಗಳ ಪೈಕಿ ನಾಲ್ಕು ಮನೆ...
ಈಗಲೂ ತಮ್ಮ ಮನೆಗಳಿಗೆ ವಾಪಸಾಗಿಲ್ಲ. ಅವ...
ಕುಟುಂಬಗಳವರು ವೀರ ನಗರದಲ್ಲಿ ಬಾಡಿಗೆ ಮನ...
ದ್ದಾರೆ; ಒಂದು ಮನೆಯವರು ನಾಗುರಿಯಲ್ಲಿ ನೆಲೆ...
ನಾವು ಅವರನ್ನು ಮಾತಾಡಿಸಿದಾಗ, ಅವರೆಲ್ಲರೂ ...
ಖಂಡಿತವಾಗಿ, "ನಾವು ಇನ್ನು ಫೈಸಲ್ ನಗರಕ್ಕೆ ಹ...
ವುದಿಲ್ಲ; ಬ್ಯಾರಿಗಳ ಒಟ್ಟಿಗೆ ಇರಲು ನಮಗೆ ...
ವಾಗುತ್ತದೆ" ಎಂದು ಹೇಳಿದರು. ಆದರೆ ಈ ಮನೆ...
ತಮ್ಮ ಗಂಡುಮಕ್ಕಳ ಹೆಸರು ಹೇಳಿದಾಗ ನಮಗೆ ...
ಭಯದ ಕಾರಣ ಗೊತ್ತಾಯಿತು. ಈ ಹೆಸರುಗಳು...
ನೋಡಿದ ಮುಸ್ಲಿಮ್ ಗಾಯಾಳುಗಳು ತಮ್ಮ ...
ಹಲ್ಲೆ ನಡೆಸಿದವರು ಎಂದು ಹೇಳಿದ ಹೆಸರುಗಳೇ ...

ಮಂಗಳೂರಿನ ಪ್ರತಿಷ್ಠಿತ ಖಾಸಗಿ ಆಸ್ಪತ್ರೆಯೊ...
ಎರಡೂ ಕಾಲುಗಳೂ ಜಖಂ ಆಗಿ, ಸೊಂಟ...
ಕೆಳಗೆ ರಾಡ್ ಕೂಡಿಸಿ ಬೆನ್ನು ಹೊಟ್ಟೆಗ...
ಗಾಯಗಳಾಗಿದ್ದ ಫೈಸಲ್ ನಗರದ ನಡುವಯಸ್ಸಿನ ...
ಒಬ್ಬರನ್ನು ನಾವು ಮಾತನಾಡಿಸಿದೆವು. ಕಡು ಬಡ...
ಅವರು ಅನಾರೋಗ್ಯದ ಕಾರಣದಿಂದ ಯಾವ ವೃತ್ತಿ...
ಈಗ ಮಾಡುತ್ತಿಲ್ಲವಂತೆ; ಮೊದಲು ಅವರು ಟೈ...
ಮಾಡಿಕೊಂಡಿದ್ದರು. "ನನ್ನ ಮಗಳ ಮದುವೆಗೆ ...
ತುಂಬ ಸಾಲ ಮಾಡಿಕೊಂಡಿದ್ದೇನೆ; ಈಗ ಇದು" ...
ಅವರು ಚಿಂತಾಕ್ರಾಂತರಾಗಿದ್ದರು. ನಾವು ಅವರ ಹ...
ಇಲ್ಲಿ ಕಾಣಿಸುತ್ತಿಲ್ಲ, ಯಾಕೆಂದರೆ ಮುಸ್ಲಿಮರ ...
ಹಲ್ಲೆ ನಡೆಸಿದ ಆರೋಪಿಗಳ ಪಟ್ಟಿಯಲ್ಲಿ ಇವರ...

ನಮೂ ಇವೆ. ಫೈಸಲ್ ನಗರದ ಇವರ ಮನೆಗೆ ಮುಸ್ಲಿಮ್ ಯುವಕರು ನುಗ್ಗಿ ಇವರಿಗೆ ಹೊಡೆದ ಸಂದರ್ಭದಲ್ಲಿ ವರ ಮಗನಿಗೂ ಗಾಯವಾಗಿದೆ.

ಎರಡು ಘಟನೆಗಳು; ಎರಡು ಸಾಧ್ಯತೆಗಳು

55ರ ಹರೆಯದ ಹಸನಬ್ಬ ಬಂಟವಾಳ ತಾಲ್ಲೂಕು ಮಾಣೂರು ಗ್ರಾಮದವರು. ಮಾಣೂರು, ಮಂಗಳೂರು-ಂಗಳೂರು ಹೆದ್ದಾರಿಯಿಂದ ಸುಮಾರು 6 ಕಿ.ಮೀನಷ್ಟು ರದವಲ್ಲಿದೆ. ಈ ಗ್ರಾಮದ ಸುಮಾರು 20 ಮನೆಗಳಲ್ಲಿ ಮುಸ್ಲಿಮರಿದ್ದಾರೆ. ಹಸನಬ್ಬ ಗಣೇಶ ಬೀಡಿಯೂ ಸೇರಿದಂತೆ ನ್ನೂ ಕೆಲವು ಬ್ರಾಂಡಿನ ಬೀಡಿಗಳ ಕಂಟ್ರಾಕ್ಟರ್. ಂಗಳೂರು ಮತ್ತು ದಾವಣಗೆರೆ ಅವರ ಮಾರಾಟದ ಲಯ. ಹಸನಬ್ಬ ಅನುಕೂಲಸ್ಥರು. ಅವರ ಬೀಡಿ ್ಯಕ್ಟರಿಯಲ್ಲಿ ಊರಿನ ಆಸುಪಾಸಿನ 120 ಮಂದಿ ದ್ಯೋಗ ಮಾಡಿಕೊಂಡಿದ್ದಾರೆ. ಅವರೆಲ್ಲರೂ ಮುಸ್ಲಿ ೇತರರು. ಹಸನಬ್ಬ ತಮ್ಮ ಊರಿನ ಹಲವು ಹುಡುಗರಿಗೆ, ಮ್ಮ ಗುರುತು ಪರಿಚಯದ ಆಧಾರದಲ್ಲಿ ದಾವಣಗೆರೆ ಲ್ಲೂ ಕೆಲಸ ತೆಗೆಸಿಕೊಟ್ಟಿದ್ದಾರೆ. ಅವರು ಮಾಣೂರಿ ಲ್ಲಿಯೇ ಹುಟ್ಟಿ ಬೆಳೆದವರು. ಕನಿಷ್ಠ ನೂರು ವರ್ಷಗಳಿಂದ ವರ ಕುಟುಂಬ ಇಲ್ಲಿ ನೆಲೆಸಿದೆ. ಮಾಣೂರಿನ ಸುಪಾಸಿನಲ್ಲಿ ರಿಕ್ಷಾ, ಟ್ಯಾಕ್ಸಿ, ಟೆಂಪೋ ಇತ್ಯಾದಿಗಳು ುವುದಿಲ್ಲ. ಹಾಗಾಗಿ ಊರಿನ ರೋಗಿಗಳನ್ನೂ, ಹೆರಿಗೆಯ ವಸರದಲ್ಲಿರುವ ಬಸುರಿಯರನ್ನು ೆಷ್ಟೋ ಬಾರಿ, ಒಮ್ಮೊಮ್ಮೆ ಅಪರಾತ್ರಿ ಲ್ಲಿ ಕೂಡ, ಹಸನಬ್ಬ ತಮ್ಮ ಕಾರಿ ಲ್ಲಿಯೇ ಒಂದು ಬಿಡಿಗಾಸೂ ತೆಗೆದು ಳ್ಳದೆ ಆಸ್ಪತ್ರೆಗೆ ಸಾಗಿಸಿದ್ದಾರೆ. ಮಾಣೂ ಲ್ಲಿ ಎಲ್ಲರಿಗೂ ಅವರು ಆತ್ಮೀಯರೇ.



ಹಸನಬ್ಬರ ಮನೆಯ ಹಿಂಭಾಗದಲ್ಲಿ ್ವ ದೂರದಲ್ಲಿ ಸುಮಾರು 20 ಮಕ್ಕಳು ರಬಹುದಾದ ಮದ್ರಸಾದ ಹಾಲ್ ೆ. ಅದರ ಎಡಕ್ಕೆ ಹಸನಬ್ಬರ ಬಂಧಿಕರೊಬ್ಬರ ಮನೆ. ಅಕ್ಟೋಬರ್ ರ ಶುಕ್ರವಾರ ರಾತ್ರಿ 11.30 ರ ೊತ್ತಿಗೆ ಮಾಣೂರಿನವರೇ ಆದ ಮಾರು 20 ಯುವಕರು, ಆ ಪ್ರಾರದ ದ್ಯುತ್ ಸಂಪರ್ಕ ಕಿತ್ತು ಹಾಕಿ, ದಲು ಮದ್ರಸಾದ ಮೇಲೆ ದಾಳಿ ಡಿದರು. ಅವರು ಪೆಟ್ರೋಲು, ಸೀಮೆಎಣ್ಣೆ, ಸೋಡಾ ಟ್ಟಿ, ಮರದ ರೀಪು, ಕಬ್ಬಿಣದ ರಾಡು, ತಲವಾರು ಂತಾದ ಹತ್ಯಾರಗಳಿಂದ 'ಸುಸಜ್ಜಿತ'ರಾಗಿದ್ದರು. ಮದ್ರಸಾದ ಕಿ ಗಾಜುಗಳನ್ನು ಪುಡಿ ಮಾಡಿ, ಪೆಟ್ರೋಲ್ ತುಂಬಿಸಿದ ಟ್ಟಿಗಳಿಗೆ ಬೆಂಕಿ ಕೊಟ್ಟು ಮದ್ರಸಾದ ಒಳಗೆ ಎಸೆದರು. ನಡುವೆ ಮದ್ರಸಾದ ಒಳಗಿದ್ದ ಇಬ್ಬರು ಶಿಕ್ಷಕರು, ಬಾಗಿಲಿನಿಂದ ತಪ್ಪಿಸಿಕೊಂಡು ಹೋಗಿ ಜೀವ ಳಿಸಿಕೊಂಡರು.

ಮದ್ರಸಾದಲ್ಲಿ ತಮ್ಮ ಕೆಲಸ ಮುಗಿಸಿದ ಗುಂಪು, ರ ಪಕ್ಕದಲ್ಲೇ ಇರುವ ಹಸನಬ್ಬರ ಸಂಬಂಧಿಕರ ಮನೆಯ ಲೆ ಎರಗಿತು. ಮನೆಯ ಬಾಗಿಲು ಮುರಿದು ಕಿಟಕಿ ನ್ನು ಪುಡಿ ಮಾಡಿ, ಮನೆ ಅಂಗಳದಲ್ಲಿ ನಿಲ್ಲಿಸಿದ್ದ ಚ್ಚ ಹೊಸ ಇಂಡಿಕಾ ಕಾರಿಗೆ ಪೆಟ್ರೋಲ್ ಸುರಿದು ಕಿ ಹಚ್ಚಲಾಯಿತು. ನಾವು ಆ ಕಾರಿನ ಕರಕಲಾದ ಬರವನ್ನು ನೋಡಿದೆವು. ಕಾರಿಗೆ ಗತಿ ಕಾಣಿಸಿದ ಲೆ ಈ ಯುವಕರ ಗುಂಪು ಸೀದಾ ಬಂದದ್ದು ಹಸ ರ ಮನೆ ಅಂಗಳಕ್ಕೇ. ಗುಂಪಿನಲ್ಲಿದ್ದವರು ಹಸನಬ್ಬರ ರು ಕೂಗಿ, "ಮದ್ರಸಾದ ಗುರುಗಳು ಕರೆಯುತ್ತಿದ್ದಾರೆ; ಬೇಕಂತೆ" ಎಂದು ಕಿರುಚಿಕೊಂಡರು. ಹಸನಬ್ಬ ನಿದ್ರೆ ಂದ ಎದ್ದು ಬಂದು ಬಾಗಿಲು ತೆರೆಯುತ್ತಿದ್ದಂತೆಯೇ ಡ್ಡದೊಂದು ಕಲ್ಲು ತೂರಿ ಬಂದು ಅವರ ಹಣೆಗೆ ಳಿಸಿತು. ಹಸನಬ್ಬ ತಕ್ಷಣ ಬಾಗಿಲು ಹಾಕಿಕೊಂಡರು. ವಕರು ಅವರ ಮನೆಯ ಹೆಬ್ಬಾಗಿಲು ಮುರಿಯಲು ಿಸಿದರು; ಸ್ಪೈಜುಗಲ್ಲಿನಿಂದ ಅದನ್ನು ಗುದ್ದಿದರು; ಬಾಗಿ ಪಕ್ಕದ ಕಿಟಕಿ ಗಾಜುಗಳನ್ನು ಒಡೆದರು; ಮನೆ ಗಳದಲ್ಲಿ ನಿಲ್ಲಿಸಿದ್ದ ಮಾರುತಿ ಕಾರನ್ನು ಜಜ್ಜಿ ಸ್ಕ್ರಾಪ್ ಡಿದರು.

ಅಷ್ಟರಲ್ಲಿ ಮನೆಯ ಒಳಗೆ ಭಯಭೀತರಾಗಿ ಇದನ್ನೆಲ್ಲ ಡುತ್ತಿದ್ದ ಹಸನಬ್ಬ, ಮಾಣೂರಿನವರೇ ಆದ ತಮ್ಮ ು ರಮೇಶ್ ಉಪಾಧ್ಯಾಯರಿಗೆ ಫೋನ್ ಮಾಡಿ ಸಂಗತಿ ತಿಳಿಸಿದರು. ಉಪಾಧ್ಯಾಯರು ತಮ್ಮ ಯಿಂದ ತಕ್ಷಣ ಹೊರಟುಬಂದರು. ಅವರನ್ನು ನೋಡಿ ದಿಕ್ಕಿಯಾದ ಯುವಕರ ಗುಂಪು ಅಲ್ಲಿಂದ ಕಾಲು ್.

ಮಾರನೆಯ ದಿನ ಮಾಣೂರಿನ ಎಲ್ಲ ಹಿರಿಯರೂ ಬ್ಬರಿಗೆ ತಮ್ಮ ಸಂತಾಪ ಹೇಳಿದರು. ಹಸನಬ್ಬ "ಆ ಗರೆಲ್ಲ ನನ್ನ ಗುರುತಿನವರೇ; ಇದೇ ಊರಿನವರು; ಮನೆಯ ಮಕ್ಕಳು. ನಾನು ಅವರ ಮೇಲೆ ದೂರು ುವುದಿಲ್ಲ. ನೀವು ಈ ಊರಿನ ದೇವಸ್ಥಾನಕ್ಕೆ ಹೋಗಿ ಸಂಬಂಧ ದೇವರಿಗೆ, ನಿಮ್ಮ ಮಕ್ಕಳು ಮಾಡಿದ ಾಣಿಕೆ ಕಟ್ಟಿ ಮುಂದೆ ಈ ರೀತಿ ಮಾಡುವುದಿಲ್ಲ ಎಂದು ಅವರಿಂದ ಹೇಳಿಸಿ. ನನಗೆ ಅಷ್ಟು ಸಾಕು" ಎಂದು ಊರವರಲ್ಲಿ ಅರಿಕೆ ಮಾಡಿಕೊಂಡರು. ಊರಿನ ಹಿರಿಯರಲ್ಲಿ ಒಬ್ಬನೂ ಚಕಾರ ಮಾತಾಡಲಿಲ್ಲ, ಹಾಗಾಗಿ ಈಗ ಹಸನಬ್ಬ ಒಲ್ಲದ ಮನಸ್ಸಿನಲ್ಲಿ ಆ ಯುವಕರೆಲ್ಲರ ಹೆಸರು ಕಾಣಿಸಿ ದೂರು ಕೊಟ್ಟಿದ್ದಾರೆ. ಪೊಲೀಸರಿಗೆ ನೀಡಿದ ದೂರಿನ FIR ಪ್ರತಿಯನ್ನೂ ಅವರು ನಮಗೆ ತೋರಿಸಿದರು. ಆದರೆ ಇದುವರೆಗೆ ಆರೋಪಿಗಳಲ್ಲಿ ಯಾರ ಬಂಧನವೂ ಆಗಿಲ್ಲ.

ಆ ಯುವಕರೆಲ್ಲ ಏನೂ ಆಗದವರಂತೆ ರಾಜಾರೋಷವಾಗಿ ತಿರುಗಾಡಿಕೊಂಡಿದ್ದಾರೆ; ಹಸನಬ್ಬರಿಗೆ ಬಾಯ್ತುಂಬ ಸಮಾಧಾನ ಹೇಳಿದ ಮಾಣೂರಿನ ಹಿರಿಯರಿಗೂ ತಮ್ಮ ಊರಿನಲ್ಲಿ ನಡೆದದ್ದರ ಬಗ್ಗೆ ಪಶ್ಚಾತ್ತಾಪವಿಲ್ಲ. ಇಂತಹ ಜನಗಳಿರುವ ಜಾಗವನ್ನೂ 'ಊರು' ಎಂದು ಕರೆಯುವುದಾದರೂ ಹೇಗೆ?

ಹಸನಬ್ಬ ಕುಟುಂಬವಂತೂ ಈಗ ಕಂಗಾಲಾಗಿದೆ. ಅವರ ಮನೆಯವರು ಮುಖ್ಯವಾಗಿ ಹೆಂಗಸರು ಮತ್ತು ಮಕ್ಕಳು 'ನಾವು ಊರು ಬಿಟ್ಟು ಬೇರೆಲ್ಲಾದರೂ ದೇವರು ನಡೆಸಿದ ಹಾಗೆ ಬದುಕುವ; ಈ ಊರಿನಲ್ಲಿ ಯಾಕೆ ಸಾಯಬೇಕು' ಎಂದು ಹಸನಬ್ಬರ ಮೇಲೆ ಒತ್ತಾಯ ಹಾಕುತ್ತಿದ್ದಾರೆ. ಹಸನಬ್ಬ ನಮ್ಮೊಡನೆ ಮಾತಾಡುತ್ತ, "ನಾನು ಹುಟ್ಟಿದ್ದು, ಬೆಳೆದದ್ದು ಇದೇ ಊರಿನಲ್ಲಿ; ದೇವರು ನಡೆಸಿದರೆ ಇದೇ ಊರಲ್ಲಿ ಸಾಯುವುದು ಎಂದು ತೀರ್ಮಾನ ಮಾಡಿದ್ದೇನೆ" ಎಂದು ಹೇಳಿದರು.

ಮಾಣೂರು ಕರಾವಳಿಯ ಜನರ ಮನಸ್ಸುಗಳನ್ನು ಆವರಿಸಿಕೊಳ್ಳುತ್ತಿರುವ ದ್ವೇಷ ಹಿಂಸೆಗಳ ತಮಸ್ಸಿನ ರೂಪಕದಂತಿದೆ. ಆದರೆ ಈ ಕೆಟ್ಟ ಕಾಲದಲ್ಲೂ ತಮ್ಮ ಸಜ್ಜನಿಕೆಯನ್ನು ಬಿಡಲೊಲ್ಲದ ಜನರಿದ್ದಾರೆ ಎಂಬ ಭರವಸೆ ನಮ್ಮಲ್ಲಿ ಮೂಡಿದ್ದು ವೀರನಗರದ ಪೇರ್ಲಿ ಗುಡ್ಡೆಯಲ್ಲಿ. ಅಲ್ಲಿ ಇರುವುದು ಒಂದೇ ಮುಸ್ಲಿಮ್ ಮನೆ. ವೀರನಗರದಿಂದ ಪಡೀಲಿಗೆ ಹೋಗುವ ದಾರಿಯಲ್ಲಿ ರೈಲ್ವೆ ಹಳಿಗಳ ಪಕ್ಕದಲ್ಲಿ ಎತ್ತರವಾದ ಸ್ಥಳವೊಂದಿದ್ದು ಅಲ್ಲಿ ಮೇಸ್ತ್ರಿ ಕೆಲಸ ಮಾಡುವ ಖಾಲಿದ್ ಮನೆ ಮಾಡಿಕೊಂಡಿದ್ದಾರೆ. ಅವರ ಮನೆಯ ಸುತ್ತಮುತ್ತ ಇರುವ ಮನೆಗಳು ದಲಿತರವು.

ಸುಮಾರು 30ರ ಹರೆಯದ ಖಾಲಿದ್‌ಗೆ ಮದುವೆಯಾಗಿಲ್ಲ. ಅವರು ತಮ್ಮ ಇಬ್ಬರು ಅಕ್ಕಂದಿರ ಜೊತೆಗಿದ್ದಾರೆ. ಖಾಲಿದ್‌ರ ಹಿರಿಯ ಅಕ್ಕ ಗಂಡನಿಂದ ಪರಿತ್ಯಕ್ತರಾಗಿದ್ದಾರೆ; ಕಿರಿಯ ಅಕ್ಕನಿಗೆ ಆರೋಗ್ಯ ಸರಿಯಿಲ್ಲ; ಆಕೆಯ ಗಂಡ ಕೂಲಿ ಕೆಲಸ ಮಾಡುವವರಾಗಿದ್ದು ಅವರ ಆರೋಗ್ಯವೂ ನೆಟ್ಟಗಿಲ್ಲ. ಅವರೀಗ ಆಸ್ಪತ್ರೆಯಲ್ಲಿದ್ದಾರೆ. ತಾ. 6.10.2006 ಶುಕ್ರವಾರ ಮಧ್ಯಾಹ್ನ 3 ಗಂಟೆಯ ಸುಮಾರಿಗೆ ಖಾಲಿದ್ ಮಸೀದಿಯಿಂದ ಮನೆಗೆ ವಾಪಸಾಗುತ್ತಿದ್ದಾಗ ಕೈಯಲ್ಲಿ ತಲವಾರು ಹಿಡಿದಿದ್ದ ಮೂರು ಜನ ಅವರನ್ನು ತಡೆದು ಅವರ ಹೊಟ್ಟೆಗೆ, ಇರಿದು ಕಾಲಿಗೆ ಬಾರಿಸಿದರು.

ನಾವು ಖಾಲಿದ್‌ರನ್ನು ಆಸ್ಪತ್ರೆಯಲ್ಲಿ ಭೇಟಿಯಾಗಿದ್ದೆವು; ಅವರು ತಮಗೆ ಹೊಡೆದವರ ಹೆಸರುಗಳನ್ನೂ ಹೇಳಿದ್ದರು. ಗಾಯಗೊಂಡು ರಕ್ತ ಸುರಿಸುತ್ತಿದ್ದ ಖಾಲಿದ್ ರಸ್ತೆಯಲ್ಲಿದ್ದ ಪೊಲೀಸರ ನೆರವು ಕೇಳಿದಾಗ, ಪೊಲೀಸರು ಅವರನ್ನೇ ಗದರಿಸಿ ಕಳುಹಿಸಿದರಂತೆ. ಈ ಘಟನೆ ನಡೆದ ಮಾರನೆ ದಿನ 5-6 ಯುವಕರ ಗುಂಪೊಂದು, ಹಗಲು ಹೊತ್ತಿನಲ್ಲೇ ಖಾಲಿದ್‌ರ ಮನೆ ಮೇಲೆ ಕಲ್ಲು ತೂರಾಟ ನಡೆಸಿ ಮನೆಗೆ ಬೆಂಕಿ ಹಚ್ಚಲು ಮುಂದಾಯಿತು. ಆಗ ಅವರ ಪಕ್ಕದ ಮನೆಯ, ಕಲ್ಯಾಣಿ ಎಂಬ ಸುಮಾರು 70 ವರ್ಷದ ಮುದುಕಿ ಮತ್ತು ಇತರ ನೆರೆಹೊರೆಯವರು (ಎಲ್ಲರೂ ದಲಿತರು) ಈ ಗುಂಪಿಗೆ ಅಡ್ಡ ನಿಂತರು.

ಕಲ್ಯಾಣಿ, ಆ ಹುಡುಗರಿಗೆ, "ಖಾಲಿದ್ ಮನೆಯವರು ನಿಮಗೆ ಏನು ಅನ್ಯಾಯ ಮಾಡಿದ್ದಾರೆ? ಅವರು ಇಲ್ಲಿ ಯಾರಿಗೂ ಏನೂ ಅನ್ಯಾಯ ಮಾಡಿದವರಲ್ಲ, ನೀವು ಬೆಂಕಿ ಹಚ್ಚುವುದೇ ಆದರೆ ಮೊದಲು ನಮ್ಮ ಮನೆಗೆ ಬೆಂಕಿ ಕೊಡಿ" ಎಂದು ಹೇಳಿದರು. ಆ ಹುಡುಗರು ಮರು ಮಾತಿಲ್ಲದೆ ಜಾಗ ಖಾಲಿ ಮಾಡಿದರು. ಈ ವಿಷಯವನ್ನು ನಮಗೆ ಆಸ್ಪತ್ರೆಯಲ್ಲಿ ಖಾಲಿದ್ ಸಹ ತಿಳಿಸಿದ್ದರು.

ಕಲ್ಯಾಣಿ ಕಡುಬಡತನದಲ್ಲಿರುವ ದಲಿತ ಮಹಿಳೆ. ಆಕೆ ಅಕ್ಷರಸ್ಥಳ ಹಾಗೆಯೂ ನಮಗೆ ಕಾಣಲಿಲ್ಲ. ಪೇರ್ಲ ಗುಡ್ಡೆಯ ಖಾಲಿದ್‌ರ ಮನೆಯ ಅಂಗಳದಲ್ಲಿ ನಿಂತು ಕಲ್ಯಾಣಿ ನಮಗೆ ಹೇಳಿದ್ದು ಇಷ್ಟೇ, "ನಾವು ಈ ಮನೆಯವರನ್ನು ಇಷ್ಟು ವರ್ಷದಿಂದಲೂ ನೋಡುತ್ತ ಇದ್ದೇವೆ. ಖಾಲಿದ್ ಯಾರಿಗೂ ಅನ್ಯಾಯ ಮಾಡಿದವನಲ್ಲ. ಈಗ ಯಾರೋ ಅವನ ಮನೆಗೆ ಬೆಂಕಿ ಹಚ್ಚುತ್ತೇವೆ ಎಂದರೆ ನಾವು ಸುಮ್ಮನಿರುವುದಾ?" ಇದು ಒಂದು ಊರನ್ನು ಊರಾಗಿ ಉಳಿಸುವ ಸಜ್ಜನಿಕೆ. ಮಾಣೂರು, ಮಂಗಳೂರು, ಪುತ್ತೂರು, ಉಡುಪಿ, ಕುಂದಾಪುರ ಇವು ಊರುಗಳಾಗಿ ಉಳಿಯುತ್ತವೆಯೇ? ಎಂಬುದೇ ಈಗ ನಮ್ಮ ಮುಂದಿರುವ ಸವಾಲು. ●



ಈ ಸಿನಿಮಾ ಖಂಡಿತ ಸೂಪರ್ ಹಿಟ್... ನನ್ನ ನಾಲಿಗೆ ಯಾವತ್ತೂ ತಪ್ಪು ಹೇಳಿಲ್ಲ, ಹಿಂದೆಲ್ಲ ನಾನು ಹೇಳಿದ್ದು ನಿಜ ಆಗಿದೆ. ಸಿನಿಮಾ ಮೇಕಿಂಗ್ ಸ್ಟೈಲು, ಡಬ್ಬಿಂಗ್ ನಂತರ ವೀಕ್ಷಣೆ, ಸಂಗೀತ ಇತ್ಯಾದಿಯನ್ನೆಲ್ಲ ಗ್ರಹಿಸಿ ಹೇಳ್ತಾ ಇದ್ದೀನಿ: ಈ ಚಿತ್ರ 100% ಯಶಸ್ವಿ ಆಗುತ್ತೆ ಎಂದು.

'ತನನಂ ತನನಂ'ನ ನನ್ನ ಪಾತ್ರ most memorable. ಆರಂಭದಲ್ಲಿ ಕವಿತಾ ಕೊಟ್ಟ ಸ್ಕ್ರಿಪ್ಟ್ ಓದಿಯೇ ನಾನು ಥ್ರಿಲ್ ಆಗಿಬಿಟ್ಟೆ. ಇನ್ನೊಂದು ನಾಯಕಿ ಪಾತ್ರಕ್ಕೆ ರಕ್ಷಿತಾಳನ್ನು approach ಮಾಡಿದರು ಕವಿತಾ. 'ರಕ್ಷಿತಾ ಮಾಡಲು ಒಪ್ಪಿದರೆ ನಿನಗೆ O.K.ನಾ?' ಎಂದು ಕವಿತಾ ಕೇಳಿದಾಗ ನಾನು `no problem at all' ಎಂದಿದ್ದೆ. ರಕ್ಷಿತಾಳ ರೋಲ್ ಜೊತೆ ನಾನು ನನ್ನ ರೋಲ್‌ಅನ್ನು compare ಮಾಡೋಕೆ ಹೋಗಲಿಲ್ಲ, ನನ್ನ ರೋಲ್ ಬಗ್ಗೆ ಅಷ್ಟೇ ನನ್ನ ತಯ್ಯಾರಿ ಇತ್ತು. ಈ ಚಿತ್ರದಲ್ಲಿ ಡಬಲ್ ರೋಲ್ ಕೊಟ್ಟಿದ್ದರೂ ನಾನು yes ಅಂತಿದ್ದೆ. ಏಕೆಂದರೆ both roles are powerful.

ರಕ್ಷಿತಾ, ನಾನು ಒಟ್ಟಿಗೆ ನಟಿಸುತ್ತಿರುವುದರಿಂದ ಪ್ರೇಕ್ಷಕರ curiosity ಹೆಚ್ಚಿ, ಚಿತ್ರದ ಮಾರ್ಕೆಟ್ ವ್ಯಾಲ್ಯೂ ಕೂಡ ಹೆಚ್ಚುತ್ತದೆ ಎಂದು ಆಗಲೇ ಲೆಕ್ಕ ಹಾಕಿದ್ದೆ. ಅದಕ್ಕೇ ಸಂಭಾವನೆ ಹೆಚ್ಚಿಸಿಕೊಂಡೆ! ಎನ್.ಎಮ್. ಸುರೇಶ್‌ರವರು ಇತ್ತೀಚೆಗೆ 'ಫ್ಲಾಪ್' ಅನುಭವ ಪಡೆದಿದ್ದರೂ, ನನ್ನ 'ಹಿಟ್' ಟ್ರ್ಯಾಕ್ ರೆಕಾರ್ಡ್ ನೋಡಿ ಹಿಂದೆಮುಂದೆ ನೋಡದೇ ಸಂಭಾವನೆ ಹೆಚ್ಚಿಸಿಬಿಟ್ಟರು.

ನಾನಂತೂ ತುಂಬಾ ಪ್ರೊಫೆಷನಲ್ ಆಗಿ ಶಿಸ್ತಿನಿಂದ ನಟಿಸಿದ್ದೇನೆ. ಸೆಕೆಂಡ್ ಹಾಫ್‌ನಲ್ಲಿ ನನ್ನ ರೋಲ್ ಕುತೂಹಲಕಾರಿ. ಅದು ಏನಂತ ಈಗಲೇ ಹೇಳುವುದಿಲ್ಲ, ಕನ್ನಡ ಚಿತ್ರದಲ್ಲಿ ಅಂತಹ ರೋಲ್ ಬಂದೇ ಇಲ್ಲ! ಅದು ಸೀಕ್ರೆಟ್. ಸಿನಿಮಾ ನೋಡಿ enjoy ಮಾಡಿ...



ತನನಂ ಸೂಪರ್ ಹಿಟ್ ಅಂತಾ ನನ್ನ sixth sense ಹೇಳುತ್ತೆ

ಸಂಪ್ರದಾಯಸ್ಥ ಸಂಗೀತಗಾರರ ಕುಟುಂಬದ ಹುಡುಗಿಯಾಗಿ ಲಂಗ, ದಾವಣಿಗಳಲ್ಲಿ ನಾನು ಮಿಂಚಿಂಗೋ ಮಿಂಚಿಂಗು! ಇದರಲ್ಲಿ ಶಾಸ್ತ್ರೀಯ ನೃತ್ಯಗಳ ಮಿಶ್ರಣದ ಸೆಮಿ-ಕ್ಲಾಸಿಕ್ ನೃತ್ಯಗಳಿವೆ, ಭರತನಾಟ್ಯಂ ಇದೆ. ನಾನು ಈ ಎಲ್ಲ ಡ್ಯಾನ್ಸ್‌ಗಳನ್ನು enjoy ಮಾಡ್ತಾ ಮಾಡಿರುವೆ. ಡ್ಯಾನ್ಸ್ ಮಾಡೋಕೆ ಈ ಲಂಗ, ದಾವಣಿಗಳೇ the best dress! ಜೀನ್ಸ್ ಪ್ಯಾಂಟ್ ಹಾಕಿದಾಗಿನ ಕಿರಿಕಿರಿ ಇರಲ್ಲ; easy ಆಗಿ ಮೂವ್‌ಮೆಂಟ್ಸ್ ಮಾಡಬಹುದಪ್ಪ..

ಗಿರೀಶ್ ಕಾರ್ನಾಡ್ ಸರ್ ಜೊತೆ ಮೊದಲನೆ ಚಿತ್ರವಿದು. ನನಗೆ ಫಸ್ಟ್ ಟೈಮ್ ಗಿರೀಶ್ ಕಾರ್ನಾಡ್ ಮೇಲೆ crush ಶುರುವಾಗಿಬಿಟ್ಟಿತ್ತು! ಅದೇ ಸ್ಕೂಲ್ ವಿದ್ಯಾರ್ಥಿಗಳಿಗೆ ತಮ್ಮ ಯಾರೋ ಟೀಚರ್ ಒಬ್ಬರ ಮೇಲೆ ಒಂಥರಾ ಪ್ರೀತಿ ಇರುತ್ತಲ್ಲ.. ಹಾಗೆ! ಅದು ಕಾರ್ನಾಡ್‌ರ ಮೇಲಿನ ಗೌರವ, ಅಕ್ಕರೆಯ ಕಾರಣಕ್ಕಾಗಿ. ಕಾರ್ನಾಡ್ ಸರ್ ತುಂಬಾ dignified, sophisticated. ಎಲ್ಲದರ ಬಗ್ಗೆ ತಿಳಿದಿರುವ ಅವರಿಗೆ ನಟನೆಯೂ easy ಕೆಲಸವೇ.

ಆರಂಭದಲ್ಲಿ ಭಾರತಿ ಮೇಡಂ ನೋಡಿದರೆ ಭಯ ಆಗುತ್ತಿತ್ತು, ಆದರೆ ಅವರು ತುಂಬಾ ಕ್ಲೋಸ್ ಆಗಿ ಮೂವ್ ಆದರು. ಭಾರತಿ ಮೇಡಂ ನನಗೆ ಭಾರತಿ ಆಂಟಿ ಆಗಿಬಿಟ್ಟರು. ಒಂದು ಸೀನ್‌ನಲ್ಲಿ ನಾನು ನಾಚಿಗೊಂಡು ಓಡಬೇಕು. ಭಾರತಿ ಆಂಟಿ ಅದನ್ನು ಲಜ್ಜೆಯಿಂದ ಮಾಡಿ ತೋರಿಸಿ ನನಗೆ ಹೇಳಿಕೊಟ್ಟರು. ಇನ್ನೊಂದು ದೃಶ್ಯಕ್ಕಾಗಿ, ತಮ್ಮದೇ ಚಿನ್ನಾಭರಣಗಳನ್ನು ನನಗೆ ತೊಡಿಸಿ ಅಲಂಕಾರ ಮಾಡಿದರು. ಭಾರತಿ ಆಂಟಿಗೆ ಒಳ್ಳೆ sense of humour ಇದೆ. ಕಾರ್ಡ್ಸ್ ಆಡುವುದನ್ನೂ ನನಗೆ ಕಲಿಸಿದ್ದು ಅವರೇ. ನಾವು ಆಡುವುದನ್ನು ಕವಿತಾ ಮಗಳು ಇಶಾ ಇಂಟರೆಸ್ಟಿನಿಂದ ನೋಡ್ತಿದ್ದು... ಶೂಟಿಂಗ್ ವೇಳೆ ಇಶಾಳ ಕಂಪನಿಯನ್ನು ನಾನು ತುಂಬಾ enjoy ಮಾಡಿದೆ. ಆಗಲೇ ಅವಳು 'ಕಂಡೆ ನಾ ಗೋವಿಂದನಾ' ಹಾಡು ಹೇಳ್ತಿದ್ದಳು. ಈಗಂತೂ ಅದು ಅವಳ ಫೇವರಿಟ್! ಬಹುತೇಕ ಮಕ್ಕಳಿಗೆ ಆ ಹಾಡು ಇಷ್ಟವಾಗಿಬಿಟ್ಟಿದೆ. ಹಾಡೂ ಇಂಪಾಗಿದೆ.... ನನ್ನ ಡ್ಯಾನ್ಸ್ ಏನು ಕಡಿಮೆನಾ? ಸೂಪರ್ಬ್.... ಟಿವಿಯಲ್ಲಿ ಆ ಹಾಡು ನೋಡಿದವರು ಅದನ್ನೇ ಹೇಳ್ತಿದ್ದಾರೆ.

ರಕ್ಷಿತಾ, ನಾನು ಶೂಟಿಂಗ್ ಆರಂಭದಲ್ಲಿ ಹೇಗಿದ್ದೆವೋ ಇಂದು ಹಾಗೇ ಇದ್ದೇವೆ. ನನಗೆ ರಕ್ಷಿತಾಳ ಬಗ್ಗೆ ಹೆಚ್ಚೇನೂ ಗೊತ್ತಿಲ್ಲ, ರಕ್ಷಿತಾ ಕುರಿತು ವಿಶೇಷ ಅಭಿಪ್ರಾಯಗಳೇನೂ ಇಲ್ಲ, ಎಲ್ಲರಂತೆ ಆಕೆಯೂ ನನ್ನ ಒಬ್ಬ ಫ್ರೆಂಡ್ ಅಷ್ಟೇ.

ಒಂದು ದೃಶ್ಯದಲ್ಲಿ ಶ್ಯಾಮ್‌ಗೆ ಹುಷಾರಿರುವುದಿಲ್ಲ, ಹಿಂದಿನಿಂದ ಬರುವ ನಾನು ಶ್ಯಾಮ್‌ಗೆ ಕಷಾಯ ಕೊಡಬೇಕು. ಶೂಟಿಂಗ್ ನಡೆಯುತ್ತಿದ್ದ ಆ ಚಿಕ್ಕಮಗಳೂರಿನ ಮನೆ ನಮ್ಮ ಮನೆಯಂತೆಯೇ ಆಗಿಬಿಟ್ಟಿತ್ತು, ಅಡುಗೆ ಮನೆ ಹೊಕ್ಕ ನಾನು ಮೆಣಸಿನಕಾಯಿ ಸಾಸ್, ಸೋಯಾ ಸಾಸ್ ಮತ್ತು ಉಪ್ಪು ಬೆರೆಸಿದ 'ಸ್ಪೆಷಲ್ ಕಷಾಯ' ಮಾಡಿಕೊಂಡಿದ್ದೆ. ಶ್ಯಾಮ್ ಬಿಟ್ಟು ಉಳಿದವರೆಲ್ಲರಿಗೂ ಇದು ಗೊತ್ತಿತ್ತು. ನನ್ನ 'ಸ್ಪೆಷಲ್ ಕಷಾಯ' ಬಾಯಿಗೆ ಹಾಕಿಕೊಂಡಿದ್ದೇ ತಡ, ಉರಿದುಹೋಗಿದೆ ಶ್ಯಾಮ್‌ಗೆ! ವಾಯಕ್ ಅಂತಾ ಉಗುಳಿದ್ದೇ ಉಗುಳಿದ್ದು! ಎಲ್ಲರೂ ನಕ್ಕಿದ್ದೇ ನಕ್ಕಿದ್ದು! ಇದು ಎಷ್ಟು ನ್ಯಾಚುರಲ್ ಆಗಿತ್ತೆಂದರೆ ಸಿನಿಮಾದಲ್ಲೂ ಈ ದೃಶ್ಯವನ್ನೇ ತೆಗೆದುಕೊಂಡು ಬಿಟ್ಟಿದ್ದಾರೆ. ನೋಡಿದಿರಾ, ನಾನು ತುಂಟಾಟ ಮಾಡಿದ್ದೂ ಸಿನಿಮಾಕ್ಕೆ ಉಪಯೋಗವಾಯ್ತು!

ಇನ್ನು ಕವಿತಾ ಬಗ್ಗೆ ಹೇಳುವುದು ತುಂಬಾ ಇದೆ. ಫಸ್ಟ್ ಟೈಮ್ ನನಗೆ ಬೌಂಡೆಡ್ ಸ್ಕ್ರಿಪ್ಟ್ ಕೊಟ್ಟವರೆಂದರೆ ಅದು ಕವಿತಾ ಲಂಕೇಶ್. ಬೇರೆ ನಿರ್ದೇಶಕರು ಶಾರ್ಟ್ ಆಗಿ ಕತೆ ಹೇಳಿ ಹೋಗ್ತಾರೆ. ಸಿನಿಮಾ ಮಾಡುವಾಗ ನಮ್ಮ ರೋಲೇ ಬದಲಾಗಿರುತ್ತೆ. ಕವಿತಾ ಚಿತ್ರ ಹೇಗಿರಬೇಕೆಂದು ಮೊದಲೇ ಕಲ್ಪಿಸಿಕೊಂಡಿದ್ದರು. ಸ್ಕ್ರಿಪ್ಟ್ ಹೇಗಿತ್ತೋ ಚಿತ್ರವೂ ಹಾಗೇ ಬಂದಿದೆ. ಅಷ್ಟೊಂದು planned, systematic ಅವರು. ಒಂದೊಂದು ದೃಶ್ಯವನ್ನು ನಾನು ನಾಲ್ಕೈದು ವಿಧದಲ್ಲಿ ಅಭಿನಯಿಸಿ ತೋರಿಸುತ್ತಿದ್ದೆ. ಅವರು ಒಂದನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರು. She is a good human being ಮತ್ತು ಅವರ ತಾಳ್ಮೆಯೂ ದೊಡ್ಡದೇ. ರಕ್ಷಿತಾ ಮತ್ತು ನನ್ನನ್ನು ಹಾಕಿಕೊಂಡು ಸಿನಿಮಾ ಮಾಡೋದು easyನಾ?

ಮೂರು ಜಡೆಗಳ ಮಧ್ಯೆ 'ತನನಂ ತನನಂ' ಫ್ರೆಶ್ ಆಗಿ ತೇಲಿ ಬರುತ್ತಿದೆ. ಆಡಿಯೋ ಹಿಟ್ ಆಗಿದೆ. 'ತನನಂ ತನನಂ' ಒಂದು ಫ್ಯಾಮಿಲಿ ಎಂಟರ್‌ಟೇನರ್. ಎಲ್ಲರಿಗೂ ಇಷ್ಟ ಆಗುತ್ತೆ. ಇದೇ ತಿಂಗಳ 24ನೇ ತಾರೀಖು 'ತನನಂ ತನನಂ' ನಿಮ್ಮೆದುರು ಬರುತ್ತಿದೆ. ನಾನು ಮೊದ್ಲೇ ಹೇಳಿದ್ದೇನೆ: ನನ್ನ ಸಿಕ್ಸ್ತ್ ಸೆನ್ಸ್ ಹೇಳೋ ಪ್ರಕಾರ ಇದು ಸೂಪರ್‌ಹಿಟ್ ಆಗುತ್ತೆ.

ಈ ಚಿತ್ರದ ಎಲ್ಲ ಹಾಡುಗಳೂ ನನಗೆ ಇಷ್ಟವಾಗಿವೆ. ಅದರಲ್ಲೂ 'ಕಂಡೆ ನಾ' ಮತ್ತು ಟೈಟಲ್ ಸಾಂಗ್ ಹೆಚ್ಚು ಇಷ್ಟ. 'ಕಂಡೆ ನಾ' ಎಷ್ಟು ಇಷ್ಟ ಅಂದ್ರೆ ನವೆಂಬರ್ 12 ರಂದು ಉದಯ ಟಿವಿಯ ಅವಾರ್ಡ್ ಕಾರ್ಯಕ್ರಮದಲ್ಲಿ 'ಕಂಡೆ ನಾ ಗೋವಿಂದನಾ' ಹಾಡಿಗೆ ಡ್ಯಾನ್ಸ್ ಮಾಡ್ತಾ ಇದ್ದೀನಿ... ನೀವೆಲ್ಲ ನೋಡಿ enjoy ಮಾಡಿ. bye, ಟೇಕ್ ಕೇರ್...

-ರಮ್ಯಾ

(ನಿರೂಪಣೆ : ಪಿ.ಕೆ. ಮಲ್ಲನಗೌಡರ್)

'ದೇವ ವಂಶ' ರಕ್ಷಣೆಗೆ ಆಧುನಿಕ ಭೀಷ್ಮನ ಗುರಾಣಿ

ಆಕಸ್ಮಿಕವಾಗಿ ಎನ್ನುವಂತೆ ಸಂಬಂಧಿಕರ ಮನೆಯ ಮದುವೆಗೆ ಹೋಗಿದ್ದೆ. ಅದು ಬೆಂಗಳೂರು-ಮಂಗಳೂರು ಹೆದ್ದಾರಿಯ ಪಕ್ಕದಲ್ಲೇ ನಡೆಯುತ್ತಿದ್ದ ಮದುವೆ. ಯಾರ ಗ್ರಹಚಾರಕ್ಕೋ ಏನೋ ನಾನು ಹೋಗುವ ಬಸ್ಸು ಆ ಸ್ಥಳವನ್ನು ಬೇಗನೇ ತಲುಪಿತು. ಬಸ್ಸು ಇಳಿದು ಚಪ್ಪರದ ಹಟ್ಟಿಗೆ ಹೋದೆ. ಗಂಡಿನ ಕಡೆಯವರು ಇನ್ನೂ ಬಂದಿರಲಿಲ್ಲ. ಹೆಣ್ಣಿನ ಕಡೆಯವರು ಯಾರೂ ಪರಿಚಯ ಇರಲಿಲ್ಲ. ಹಾಗಾಗಿ ಒಬ್ಬನೇ ಕುಳಿತು ತಂದಿದ್ದ ಪತ್ರಿಕೆ ನೋಡುತ್ತಾ ಇದ್ದೆ. 'ಎಲ್ಲಿ ಸಾ' ಅನ್ನುವ ದನಿ ಕೇಳಿಸಿತು. ಕತ್ತೆತ್ತಿ ನೋಡಿದೆ. ಕ್ಯಾತ ಪ್ರತ್ಯಕ್ಷ ಆಗಿದ್ದ. ಬೇಸರ ಕಳೆಯಲು ಒಂದು ಪ್ರಾಣಿ ಸಿಕ್ಕಿತಲ್ಲ ಅಂತ ಸಂತೋಷದಿಂದಲೇ- 'ಏನೋ ಕ್ಯಾತ ಇಲ್ಲಿ' ಕೇಳಿದೆ. 'ನಿಮ್ಮಂಗೆ ನಾನೂವೆ ಸಾ' ಎಂದವನೇ ಮುಂದುವರಿಸಿದ' ಎಲ್ಲಿ ಸಾ ಅಂಡ್ರೆಡ್ ರುಪೀಸ್ ಎತ್ತಾಕಿ ಸಾ'.

ನಾನು ಯಾವಾಗ ಇವನಿಂದ ಸಾಲ ಪಡೆದಿದ್ದೆ? ಅಥವಾ ಪಡೆದೂ ಮರೆತು ಹೋಗಿರಬಹುದೆ?

'ಯಾವ ಹಂಡ್ರೆಡ್ ರುಪೀಸ್ಲಾ' ಅಂದೆ.

'ಡ್ರಿಂಕ್ಸ್ ಕಡೇದು ಸಾ' ಅಂದ.

ಎಲಾ ಇವನ ಮನೆ ಕಾಯ್ವಾಗ. ಕುಡಿಯಕ್ಕೆ ಬರಗೆಟ್ಟು ಇವನ ಹತ್ತಿರ ಸಾಲ ಮಾಡಿದ್ನಾ... ಯಾರಾದರೂ ಕೇಳಿಸಿಕೊಂಡರೇನು ಗತಿ ಅಂತ ಮೈ ಪರಚಿಕೊಳ್ಳುವ ಹಾಗಾಯಿತು. ಮೂರನೆಯವರಿಗೆ ಕೇಳಿಸದ ಹಾಗೆ 'ಯಾವ ಹಂಡ್ರೆಡ್ ರುಪೀಸು ಯಾವ ಡ್ರಿಂಕ್ಸು' ಅಂದೆ. 'ಸನ್ ಡ್ರಿಂಕ್ಸ್‌ದುಸಾ' ಅಂದ!

ಟ್ಯೂಬ್‌ಲೈಟ್ ಹತ್ತಿಕೊಂಡಿತು. ನಮ್ಮ ಸುತ್ತಿನಲ್ಲಿ ಇತ್ತೀಚೆಗೆ ಒಂದು ಸಂಪ್ರದಾಯ ಬೆಳೆದು ಬಂದಿದೆ. ಜನ ಸೇರುವ ಮದುವೆ, ತಿಥಿ, ಸಭೆ, ಸಮಾರಂಭಗಳಿಗೆ ಇಂತಹ ಕುಡುಕಪ್ರಿಯರು ಮೊದಲೇ ಹಾಜರಾಗಿ ಹೊಂಚು ಹಾಕುತ್ತಿರುತ್ತಾರೆ. ಈ ಮಿಕ ಪರವಾಗಿಲ್ಲ ಬಲೆಗೆ ಬೀಳುತ್ತೆ ಅಂತ ಖಾತರಿಯಾದರೆ ಹೀಗೆ 'ಹಂಡ್ರೆಡ್ ರುಪೀಸ್ ಕೊಡಿ ಸಾ', 'ಫಿಫ್ಟಿ ಸಾಕು ಕಣಣ್ಣ', 'ಅನ್ನೋ ಬ್ರಾಂದಿಗೆ ಇಪ್ಪತ್ತು ಕೊಡು' ಅಂತ ಜಿಗಣೆ ಹಿಡಿದ ಹಾಗೆ ಹಿಡಿಯುತ್ತಾರೆ. ನಮ್ಮ ರಾಜಕೀಯ ಧುರೀಣರ ವರಪ್ರಸಾದ ಇಂತಹವರನ್ನು ಸೊಗಸಾಗಿ ಬೆಳೆಸುತ್ತಾ ಬಂದಿದಾರೆ.

'ಲೋ ಕ್ಯಾತ ಯಾಕ್‌ಲಾ ಹಿಂಗೆ ಹೊತ್ತಾರೆ ಹೊತ್ತಾರೇ ನಿ ಕುಡೀತಿ' ಅಂದೆ

'ನೀವು ಮಾಡಿದರೆ ಮಾತ್ರ ಸರಿ, ನಾವು ಮಾಡಿದ್ರೆ ತಪ್ಪು' ಅಂದ ಕೆಕ್ಕರಿಸುತ್ತಾ.

'ನಾನೇನೋ ಮಾಡಿದೀನಿ?'

'ನೀವು ಅಂದ್ರೆ, ನೀವೇ ಅಲ್ಲ, ನಿಮ್ಮಂಥೋರು.'

'ಅದೇನ್ ಬಿಡಿಸಿ ಹೇಳ್ಲ'

'ಕುಮಾರಸ್ವಾಮಿ ಮಗ ಮಾಡಿದ್ದು ಸರಿಯೇ ಸಾ?'

ದೊಡ್ಡವರ ಮನೆ ಮಾತು ಎತ್ತಿದ್ದ. ಮುಖ್ಯಮಂತ್ರಿಯವರು, ನಮ್ಮ ಕಾನೂನು ಪಂಡಿತರು 'ಅದು ಹಸುಗಲ್ಲದ ಹಸುಗೂಸು, ಬಾಯಿಗೆ ಬೆರಳಿಟ್ಟರೆ ಚೀಪಕ್ಕೂ ಬಾರದ್ದು' ಅಂತ ಸರ್ಟಿಫಿಕೇಟ್ ಮೇಲೆ ಸರ್ಟಿಫಿಕೇಟ್ ಕೊಡ್ತ ಇದಾರೆ. ಅದನ್ನೇ ಅವನಿಗೆ ಹೇಳಿದೆ.

'ಅದೂ ಸರಿ ಬುಡಿ ಸಾ... ಆ ವಯಸ್ನಲಿ ಯಾರು ಬೆರಳು ಚೀಪ್ತಾರೆ ಸಾ... ಅವರು ಚೀಪೋದೇ ಬೇರೆ' ಅಂದ ಕಿಡಿಗೇಡಿ.

ಮುಖ್ಯಮಂತ್ರಿಯವರ ಸುಪುತ್ರ ಏನೇನು ಚೀಪುತ್ತಾನೆ ಎಂಬುದರ ಪ್ರವರ ಒಪ್ಪಿಸಿಯೇ ಬಿಡ್ತಿದ್ದನೇನೋ. ಯಾರಾದರೂ ಕೇಳಿಸಿಕೊಂಡಾರು ಎಂಬ ದಿಗಿಲಾಯಿತು. ವಿಷಯ ಕೊಂಚ ಬದಲಾಯಿಸಿದೆ.

'ಗೃಹಮಂತ್ರಿ ಪ್ರಕಾಶ್ ಅವರೆ ಇದು ಬಹಳ ಸಾಮಾನ್ಯ ಬಾಲಾಪರಾಧ ಅಂದವ್ರೆ' ಅಂದೆ.

'ಬಾಲಾಪರಾಧ ಆದ್ರೆ, ರಿಮ್ಯಾಂಡ್ ಹೋಂಗೆ ಸೇರುಸ್ಬಿ ಸಾ. ಮನೇಲಿ ಯಾಕೆ ಇಟ್ಕಂಡಿದ್ದಾರು'



ಪಾಪ ಕುಮಾರಸ್ವಾಮಿ ಅವರು 'ಈಗಿನ ಮಕ್ಕಳ ಮನಸ್ಸು ಬಹಳ ಸೂಕ್ಷ್ಮ, ಹೋಟೆಲ್ ಎಂಪೈರ್ ವಿಷಯಾನ ಇಲ್ಲಿಗೇ ಮರೆತುಬಿಡಿ, ಅದನ್ನು ಕೆದಕಿಕೆದಕಿ ಮಗನನ್ನು 'ಆತ್ಮಹತ್ಯೆ ಹಂತಕ್ಕೆ ದೂಕಬೇಡಿ' ಅಂತ ಮಾಧ್ಯಮದವರ ಹತ್ತಿರ ಕೇಳಿಕೊಂಡಿದ್ದರು. ಅದನ್ನು ಅವನಿಗೆ ಹೇಳಿದೆ.

'ಯಾರ್‍ಸಾ ಕೆದಕ್ಕೋರು? ಯಾರು ತಪ್ಪು ಮಾಡಿದ್ರೂ ಅವರಿಗೆ ಕಾನೂನಿನಂತೆ ಶಿಕ್ಷೆ ಆಗ್ಲಿ ಅಂದಿದ್ರೆ ಮುಗ್ದೇ ಹೋಯ್ತಿತ್ತಲ್ಲ, ಭೇಷ್ ಕಣಯ್ಯ ಮುಖ್ಯಮಂತ್ರಿ ಅಂದ್ರೆ ಹಿಂಗಿರ್‍ಬೇಕು. ಸ್ವಂತ ಮಗನ್ನೂ ಶಿಕ್ಷೆ ಕೊಡುಸ್ದ ಅಂತಾ ಜನ ಕೊಂಡಾಡರು. ಆ ಹೈದ್ನೂ ಬುದ್ಧಿ ಕಲ್‌ತ್ಕೊಳ್ತಿತ್ತು'

ಅಣಕ

ದೇವೇಗೌಡರು, ಕುಮಾರಸ್ವಾಮಿಯವರು ಪದೇ ಪದೇ 'ದೇವೇಗೌಡನ ವಂಶ ಮುಗಿಸಬೇಕು ಅಂತ ಇದಾರೆ', 'ನಮ್ಮ ವಂಶ ಮುಗಿಸಬೇಕು ಅಂತ ಹೀಗೆ ಮಾಡ್ತಿದಾರೆ ಎಂದು ಹೇಳುತ್ತಾನೆ ಇರುತ್ತಾರಲ್ಲ... ಅವರು ಯಾರು ಎನ್ನುವುದನ್ನು ಸ್ಪಷ್ಟವಾಗಿ ತಿಳಿಸಿಲ್ಲವಾದರೂ ಆ ಪಡೆಯ ಯೋಧ ಈ ಕ್ಯಾತನೇ ಇರಬಹುದಾ ಅನ್ನುವ ಸಂಶಯ ಬಂತು. ಚಂದ್ರವಂಶವನ್ನು ಕಾಪಾಡಲು ದ್ವಾಪರಯುಗದಲ್ಲಿ ಭೀಷ್ಮ ಪರದಾಡಿದಂತೆ ಕಲಿಯುಗದಲ್ಲಿ 'ದೇವ ವಂಶ'ವನ್ನು ಕಾಯಲು ಆಧುನಿಕ ಭೀಷ್ಮ ಹರದನಹಳ್ಳಿ ದೇವೇಗೌಡರು ತಮ್ಮ ತನುಮನಗಳನ್ನು ಸಮರ್ಪಿಸುತ್ತಿರುವುದು ಕೊಂಚ ಸಮಾಧಾನ ತಂದಿತು. ವಂಶದ ರಕ್ಷಣೆಗೆ ಅವರು ಏನೇನು ತೊಂದರೆ ಅನುಭವಿಸುತ್ತಿದ್ದಾರೆ ಎಂಬುದು ಅವರಿಗೆ ಗೊತ್ತು. ಬೆಳಗಿನ ಜಾವ ಮೂರೋ ನಾಲ್ಕೋ ಗಂಟೇಲಿ ಕುಡಿದು ಚಿತ್ತಾಗಿ ಹೋಟೆಲಿಗೆ ಹೋಗಿ ಊಟ ಕೇಳಿ ಇಕ್ಕಿಸಿಕೊಂಡ ತಮ್ಮ ಪ್ರೀತಿಯ ಮೊಮ್ಮಗ, 'ಮುಖ್ಯಮಂತ್ರಿ ಮಗನಿಗೇ ಹೊಡೀತಾರೆ ಅಂದರೆ ಏನೋ ಅರ್ಥ, ಅವರನ್ನ ಹಂಗೇ ಬಿಡಬಾರದು' ಎಂಬ ಸ್ನೇಹಿತರ ಪ್ರಚೋದನೆಗೆ ಒಳಗಾಗಿಯೋ ಏನೋ, ಹೋಟೆಲಿನ ಧ್ವಂಸಕ್ಕೆ ಮುಂದಾಗಿ 'ಧ್ವಂಸ ವೀರ' ಆದನಲ್ಲ... ಅವನ, ಆತನ ತಂದೆಯ ರಕ್ಷಣೆಗೆ ಕವಚವಾಗಿ ನಿಲ್ಲಲು ಅವರು ಮಾಡಿದ ಹರಸಾಹಸ... ನಲವತ್ತು ವರ್ಷಗಳ ಹಿಂದಿನ ಕಡತ ಹುಡುಕಿ ಅಳಿಯ ನಟರಾಜ ಮಾಡಿದ ಪಾಪಕ್ಕೆ ದೇವರಾಜ ಅರಸು ಗುರಿ ಮಾಡುವುದು ತಪ್ಪು ಎಂದು ತಾವು ವಾದಿಸಿದ್ದನ್ನು ಮಾಧ್ಯಮದವರ ಮುಂದೆ ಪ್ರದರ್ಶಿಸಬೇಕಾದರೆ ಶ್ರಮ ಏನು ಎಂಬುದು ಅವರಿಗೇ ಗೊತ್ತು.

ದೇವೇಗೌಡರ ಪತ್ರಿಕಾಗೋಷ್ಠಿ ಎಂದರೆ ವರದಿಗಾರರಿಗೆ ಅದೇನೋ ಮಂಕು ಬಡಿದು ಬಿಡುತ್ತೆ ಅಂತ ಕಾಣುತ್ತೆ. ಬೇರೆ ಪತ್ರಿಕಾಗೋಷ್ಠಿಗಳಲ್ಲಿ ಕೆಣಕಿ ಕೆಣಕಿ ಪ್ರಶ್ನೆ ಕೇಳುವ ಈ ಮಂದಿ ಗರುಡನ ರೇಖೆ ಕಂಡ ನಾಗರಹಾವಿನಂತೆ ಮುದುರಿಕೊಳ್ಳುತ್ತಾರೆ. ಅದಕ್ಕೇ ಏನೋ ಅವತ್ತು ಅವರಿಗೆ ಇದೇ ದೇವೇಗೌಡರು ಮೆಡಿಕಲ್ ಕಾಲೇಜಿನಲ್ಲಿ ಓದುತ್ತಿದ್ದ ಸಚಿವೆ ಬಿ.ಟಿ. ಲಲಿತಾನಾಯಕ್ ಅವರ ಮಗ ಅಂಬೇಡ್ಕರ್ ವಿಗ್ರಹಕ್ಕೆ ಅವಮಾನ ಮಾಡಿದಾಗ...'ಮರ್ಯಾದೆಯಾಗಿ ರಾಜೀನಾಮೆ ನೀಡಮ್ಮ' ಅಂತ ಬುದ್ಧಿವಾದ ಹೇಳಿದ್ದು ಮರೆತೇಹೋಯಿತು. ಎಂತಹದ್ದೋ ಮಂಕು... ಆಧುನಿಕ ಭೀಷ್ಮಾಚಾರ್ಯರೇ ತಮ್ಮ ಮೊಮ್ಮಗ ಮಾಡಿದಂತಹದ್ದೇ ಹಲ್ಕಾ ಕೆಲಸವನ್ನು ಇತರೆ ಮಂತ್ರಿಗಳ ಮಕ್ಕಳು ಮಾಡಿದ್ದು ಈ ರೀತಿ ರಣಾರಂಪ ಆಗಿದ್ದರೆ ತಾವು ಇದೇ ರೀತಿಯ ತೀರ್ಮಾನ ತೆಗೆದುಕೊಳ್ಳುತ್ತಿದ್ದೀರಾ?' ಅಂತ ಕೇಳುವುದೂ ನೆನಪಿಗೆ ಬರಲೇ ಇಲ್ಲ.

ಇನ್ನು ಹೋಟೆಲ್ ಮಾಲೀಕ, ನಮ್ಮ ದಕ್ಷ ಪೊಲೀಸು ಎಂತೆಂತಹ ಕತೆ ಕಟ್ತಾರೆ ಅಂತೀರಾ... ಅದನ್ನೇನಾದರೂ ಕೃತಿಗೆ ಇಳಿಸುವ ಶಕ್ತಿ ಇದ್ದಿದ್ದರೆ ಅದ್ಭುತ ಕಾಗಕ್ಕ ಗುಬ್ಬಕ್ಕನ ಕಥೆ ತರಹ ಇರುತ್ತಿತ್ತು. ಹೋಟೆಲ್ ಧ್ವಂಸ ಪ್ರಕರಣ ನಡೆದ ದಿನ ವೀರಾವೇಶದಿಂದ ಹಾರಾಡಿದ ಮಾಲೀಕ 'ನಮ್ಮಲ್ಲಿ ಕ್ಯಾಮೆರಾ ಅಳವಡಿಸಿದೀವಿ, ಇಲ್ಲಿನ ಪ್ರತಿಯೊಬ್ಬರ ಚಲನವಲನವನ್ನು ಅದರಲ್ಲಿ ಚಿತ್ರೀಕರಿಸಲಾಗುತ್ತದೆ' ಎಂಬ ಅರ್ಥದ ಬಡಾಯಿ ಕೊಚ್ಚಿದ್ದರಲ್ಲ... ಈಗೇನು ಹೇಳ್ತಾರೆ ಅಂದರೆ... ಎರಡು ತಿಂಗಳಿನಿಂದ ಕ್ಯಾಮೆರಾಗಳು ಕೆಟ್ಟು ಕುಲಗೆಟ್ಟು ಹೋಗಿವೆಯಂತೆ! ಕಿಡಿಗೇಡಿ ಕೃತ್ಯಗಳಲ್ಲಿ ತೊಡಗಿದ್ದವರ ಮುಖವೂ ಯಾರಿಗೂ ನೆನಪಿಲ್ಲವಂತೆ! ಇನ್ನು ಪೊಲೀಸಿನವರ ವರಸೇನೇ ಬೇರೆ ಬಿಡಿ. ದೂರು ದಾಖಲಾಗಿದ್ದರೂ ಯಾವ ಪಕ್ಷದವರೂ ತನಿಖೆ ನಡೆಸಲು ಒತ್ತಾಯಿಸುತ್ತಿಲ್ಲವಂತೆ! ಅಂದರೇನಾಯಿತು? ಪೊಲೀಸಿನವರಿಗೆ ಕೇವಲ ದೂರು ನೀಡಿದರೆ ಸಾಲದು. ಅದರ ಮೇಲೆ ಕಾನೂನಿನ ಕ್ರಮ ತೆಗೆದುಕೊಳ್ಳಲು ಒತ್ತಾಯ ಮಾಡಬೇಕು! ಏನು ದಕ್ಷತೆ, ಏನು ಕಥೆ!

ಮುಖ್ಯಮಂತ್ರಿಯವರೇನೂ ಇಂತಹ ಕಥೆ ಕಟ್ಟುವುದರಲ್ಲಿ ಹಿಂದೆ ಬಿದ್ದಿಲ್ಲ. 'ನನ್ನ ಮಗ ಚಿನ್ನದಂತಹವನು. ರಾತ್ರಿ ಹೊರಗಡೆ ಹೋಗೋದೆ ಇಲ್ಲ, ಉಂಡು ಮನೇಲಿ ಮಲಗಿದ್ದ ಅವನನ್ನ ರಾಜಕೀಯ ದ್ವೇಷದಿಂದ ಪುಸಲಾಯಿಸಿ ಹೊರಕ್ಕೆ ಕರೆದುಕೊಂಡು ಹೋಗಿದ್ದಾರೆ. ಅವರೇ ಕಲ್ಲು ಹೊಡೆದು ಇವನ ಮೇಲೆ ದೂರು ಹೊರೆಸಿದ್ದಾರೆ' ಎಂಬರ್ಥದ ಮಾತುಗಳನ್ನು ಹೇಳಿದ್ದಾರೆ.

ಅಂದರೆ ಇಡೀ ಆಡಳಿತ ವ್ಯವಸ್ಥೆ 'ಧ್ವಂಸವೀರ'ನ ರಕ್ಷಣೆಗೆ ನಿಂತಿದೆ. ಅಂತಹದ್ದರಲ್ಲಿ ಬಡವ ನೀನು ಮಡಗಿದಂತಿರು ಅನ್ನದೆ ಈ ತರಲೆ ಕ್ಯಾತನ ತರಹ ಹಾದಿಬೀದೀಲಿ ಅವರ ಕುರಿತು ಮಾತನಾಡುವುದರ ಅಪಾಯ ಅರಿತು ಮಾತು ಮರೆಸಲು ಪ್ರಯತ್ನಿಸಿದ[illegible]

'ಕ್ಯಾತ, ಯಾರು ಏನಾದರೆ ನಿನಗೇನು ಆಗಬೇಕು' ಅಂದೆ.

'ಏನಿಲ್ಲ ಸಾ, ಅಂಡ್ರೆಡ್ ರುಪೀಸ್ ಸಾ' ಅಂದ ಅವ!

-ಎಚ್.ಎಲ್. ಕೇಶವಮೂರ್ತಿ

ಮಗ ಪುಂಡ, ಅಪ್ಪ ಭಂಡ, ಅಜ್ಜ ಪಿಂಡ!

"ಅನಿತಕ್ಕಾ ಯಲ್ಲಾ ನಿನ್ನ ಹಣೆಬರಹ ಕಣಕ್ಕ' ಬರಹ ತುಂಬಾ ಚೆನ್ನಾಗಿತ್ತು. ಇದನ್ನು ಬರೆಯುವ ಯಾಹೂ ಯಾರು? ಅಷ್ಟು ಸೊಗಸಾಗಿ ಬರೆಯುವ ಅವರ ಪೂರ್ಣ ಹೆಸರು?

ಸಭೆ ಸಮಾರಂಭಗಳಲ್ಲೆಲ್ಲಾ ಚಿಂತಿಸದೆ ನಿದ್ದೆ ಮಾಡುವ ಮಾವ (ದೇವು)

ಅಸಲಿಗೆ ಊಟ ಸೇರದೆ, ನಿದ್ರಾಹೀನತೆಯಿಂದ ಹಳ್ಳಿಗಳ ವಾಸ್ತವ್ಯದ ಗಂಡ (ಕುಮ್ಮಿ)

ದೊಡ್ಡವರ ಮಕ್ಕಳೆನಿಸಿಕೊಳ್ಳಲು ಕುಡಿದು ದಾಂಧಲೆ ಮಾಡುವ ಮಗ (ನಿಖಿಲ್)

ಇವರನ್ನು ಕಟ್ಟಿಕೊಂಡು ಅನಿತಕ್ಕ ಅದ್ಹೇಗೆ ಸಂಸಾರ ನಿಭಾಯಿಸುತ್ತಿದ್ದಾರೋ? ಥೂತ್ತೇರಿ!


-ಡಿ.ಎಲ್. ನಾಗರಾಜ್, ಹರಪನಹಳ್ಳಿ



'ಮಗ ಪುಂಡ ಅಪ್ಪ ಭಂಡ' ಎಂಬ ನಿಶಿರ ಪತ್ರಿಕೆ ಮುಖಪುಟ ನೋಡಿ ಅಂದುಕೊಂಡೆ ಕುಮಾರಸ್ವಾಮಿ ಪುತ್ರನ ಬಗ್ಗೆ ವರದಿ ಸಖತ್ ಆಗಿದೆ ಅಂತ. ಪುಟ ಬಿಚ್ಚಿ ವರದಿ ಓದಿದಾಗ, ಮಗ ರಾಕೇಶ್ ಪುಂಡತನ ಮಾಡಿದ್ದಕ್ಕೆ, ಸಿದ್ರಾಮಯ್ಯ ಬೆಲ್ಟ್ ಹರಿದು ಹೋಗುವ ಹಾಗೆ ಬಡಿದಿದ್ದರು. ಆದರೆ ಇವತ್ತು ನಾಡಿನ ಮುಖ್ಯಮಂತ್ರಿ, ಮಗ ಅಪರಾತ್ರಿ ಮೂರು ಗಂಟೆಗೆ ಹೋಗಿ ಹೋಟೆಲ್‌ನಲ್ಲಿ ಊಟ ಇಲ್ಲ ಅಂದಿದ್ದಕ್ಕೆ ದಾಂಧಲೆ ಎಬ್ಬಿಸಿದ್ದನ್ನು ಅಪ್ಪ ಕುಮಾರಸ್ವಾಮಿ ಮತ್ತು ಅಜ್ಜ ದೇವೇಗೌಡ ತಪ್ಪಲ್ಲ ಎಂಬಂತೆ ವರ್ತಿಸುತ್ತಿದ್ದಾರೆ. ಮಗನ ಪುಂಡತನಕ್ಕೆ ಕಡಿವಾಣ ಹಾಕದ ಅಪ್ಪ ಭಂಡ, ಅದನ್ನು ಗಾಂಧಿ ಮಕ್ಕಳಿಗೆ ಹೋಲಿಸಿದ ಅಜ್ಜ... ಪಿಂಡ!

-ರಮಜಾನ ಕೆ. ಕೊತ್ತಿ, ಬಾದಾಮಿ

ಇತ್ತೀಚೆಗೆ ಬ್ರಿಟನ್ ಪ್ರಧಾನಿ ಟೋನಿ ಬ್ಲೇರ್‌ನ ಪುತ್ರ ತನ್ನ ಪುಂಡು ಸ್ನೇಹಿತರ ಜೊತೆಗೂಡಿ ಬಾರ್ ಒಂದರಲ್ಲಿ ಕುಡಿದು ದಾಂಧಲೆ ಎಬ್ಬಿಸಿದ್ದಕ್ಕೆ ಲಂಡನ್ ಪೊಲೀಸರ ಅತಿಥಿಯಾದ ಪ್ರಧಾನಿ ಟೋನಿ ಬ್ಲೇರ್ ಸ್ವತಃ ಪೊಲೀಸ್ ಠಾಣೆಗೆ ಬಂದು ಮುಚ್ಚಳಿಕೆ ಬರೆದು ಕೊಟ್ಟು ಜಾಮೀನಿನ ಮೇಲೆ ತಮ್ಮ ಮಗನನ್ನು ಬಿಡಿಸಿಕೊಂಡು ಹೋದರು. ಕಾನೂನು ಎಲ್ಲರಿಗೂ ಒಂದೇ ಎನ್ನುವ ಬ್ರಿಟಿಷರಿಗೂ, ನಮ್ಮ ರಾಜಕಾರಣಿಗಳು ಕಾನೂನನ್ನು ಪರಿಪಾಲಿಸುವ ಪರಿಗೂ ಎಷ್ಟು ವ್ಯತ್ಯಾಸ ಎನ್ನುವುದನ್ನು ನಿಖಿಲ್ ಗೌಡ ಕೇಸಿನಲ್ಲಿ ಸಾಬೀತಾಗಿದೆ.



ಮುಖ್ಯಮಂತ್ರಿ ಕುಮಾರಸ್ವಾಮಿಯವರ ಪುತ್ರ ನಿಖಿಲ್ ಗೌಡ ಎಂಪೈರ್ ಹೋಟೆಲ್‌ಗಳಲ್ಲಿ ನಡೆಸಿದ ದಾಂಧಲೆ ಎಲ್ಲಾ ಮಾಧ್ಯಮಗಳಲ್ಲಿ ಪ್ರಕಟವಾದವು. ಈ ವಿಷಯ ದಲ್ಲಿ ಕ್ರಿಯಾಶೀಲರಾಗಬೇಕಾದ ಪೊಲೀಸರು ತಂದೆ ಮಗ, ಮೊಮ್ಮಗನನ್ನು ರಕ್ಷಿಸಲು ಅನುಭವಿಸಿದ ಪಡಿಪಾಟಲು ನೋಡಿ ವಿಷಾದವಾಗುತ್ತಿದೆ. ನಿಖಿಲ್ ಗೌಡ ಮಾಡಿದ ತಪ್ಪನ್ನೇ ಬೇರೆ ಸಾಮಾನ್ಯರು ಮಾಡಿದಿದ್ದರೆ ಅವರಿಗೆ ಪರಪ್ಪನ ಅಗ್ರಹಾರ ತೋರಿಸುತ್ತಿದ್ದರು. ಇಂತಹ ರಾಜಕಾರಣಿಗಳಿಂದ ನಮ್ಮ ದೇಶಕ್ಕೆ ಭವಿಷ್ಯವಿಲ್ಲ ಎಂಬುದಂತೂ ನಿಜ.

ಆರ್.ಎನ್. ಸತ್ಯನಾರಾಯಣ ರಾವ್, ಬೆಂಗಳೂರು

ಹೊಗಳಿಕೆ ತೆಗಳಿಕೆ

ನವೆಂಬರ್ 1ರ ತಮ್ಮ ಪತ್ರಿಕೆಯಲ್ಲಿ 'ಶಿವಮೊಗ್ಗಕ್ಕೊಂದು ವಿಮಾನ ನಿಲ್ದಾಣ- ರೈತರ ಪಾಲಿಗೆ ಸ್ಮಶಾನ' ಲೇಖನ ಚೆನ್ನಾಗಿದೆ.


,ಉಪಮುಖ್ಯಮಂತ್ರಿ ಯಡಿಯೂರಪ್ಪ ಮಂತ್ರಿಗಳಾದ ಕೆ.ಎಸ್. ಈಶ್ವರಪ್ಪ, ಹಾಗು ಶಂಕರಮೂರ್ತಿ ಸೇರಿಕೊಂಡು ಸೋಗಾನೆ ಗ್ರಾಮದ ಸ.ನಂ. 120, ನಿದಿಗೆ ಗ್ರಾಮದ ಸ.ನಂ. 156 ಒಟ್ಟು ಇವೆರಡರಲ್ಲಿ 1850 ಎಕರೆ ಫಲವತ್ತಾದ ಕೃಷಿಯೋಗ್ಯ ಭೂಮಿಯನ್ನು ವಶಪಡಿಸಿಕೊಂಡು ವಿಮಾನ ನಿಲ್ದಾಣ ನಿರ್ಮಿಸಲು ಹೊರಟಿರುವುದರಿಂದ, 60 ವರ್ಷಗಳಿಂದ ಭೂಮಿಯನ್ನವಲಂಬಿಸಿ ಬದುಕನ್ನು ಕಟ್ಟಿಕೊಂಡಿರುವ ಸಮುದಾಯಗಳ ಭವಿಷ್ಯ ನರಕವಾಗಲಿದೆ.

ಈ ಭೂಮಿಯನ್ನು ರೈತರಿಗೆ ಉಳಿಸಿಕೊಡುವಂಥ ಹೋರಾಟವನ್ನು ಕೆ.ಟಿ. ಗಂಗಾಧರ್ ಎಂಬ ರೈತ ನಾಯಕ ಮಾಡುತ್ತಿಲ್ಲ. ಬದಲಾಗಿ, ಬದುಕನ್ನು ಕಳೆದುಕೊಳ್ಳಲಿರುವ ಜನತೆಯ ಪರವಾಗಿ ನಿಂತಿರುವ ಮಹಿಳಾ ಜಾಗೃತಿಯ ಅನಿತಾ, ದ.ಸಂ.ಸದ ಹಾಲೇಶಪ್ಪ ಮಾಸ್ತರ್‌ಗಳನ್ನು ನಕ್ಸಲೈಟರೆಂದು, ಜನರು ಅವರೊಂದಿಗೆ ಹೋದರೆ ಸರ್ಕಾರ-ಪೊಲೀಸರು ಸುಮ್ಮನೆ ಬಿಡುವುದಿಲ್ಲವೆಂದು ಅಪಪ್ರಚಾರವನ್ನು ಮಾಡಿಸುತ್ತಿದ್ದಾರೆ.

ಇವರು ಭೂಮಾಫಿಯಾಗಳೊಂದಿಗೆ ಹೆಗಲು ಕೊಟ್ಟು ನಿಂತಿರುವುದು ಸತ್ಯವಾಗಿದೆ. ದುಡಿವ ರೈತರಿಗೆ-ಸಮುದಾಯಗಳಿಗೆ ದ್ರೋಹ ಬಗೆಯುತ್ತಿರುವ ಕೆ.ಟಿ. ಗಂಗಾಧರ್ ಕೋಮುವಾದಿ ನಾಯಕರುಗಳನ್ನು ಹೊಗಳುತ್ತಿರುವ ಮರ್ಮ ಎಲ್ಲರಿಗೂ ಗೊತ್ತಿದೆ.

-ಎಂ. ಲೋಕೇಶ್ ಈಸೂರ್, ಶಿವಮೊಗ್ಗ

ನೈಜ ಸಂತೋಷವು ಎಷ್ಟು ಸ್ನೇಹಿತರಿದ್ದಾರೆ ಎಂಬುದರಲ್ಲಿ ಇರುವುದಿಲ್ಲ; ಅವರ ಮಟ್ಟ ಮತ್ತು ಆಯ್ಕೆಯಲ್ಲಿರುತ್ತದೆ-ಸಾಮ್ಯುಯಲ್ ಜಾನ್‌ಸನ್



ಆ ಭಾನುವಾರ ತಂದ ಸಂತೋಷ

ನನ್ನ ಜೀವನದಲ್ಲಿ ಅದೆಷ್ಟೋ ಭಾನುವಾರಗಳನ್ನು ...ಡಿದ್ದೇನೆ. ಆದರೆ ಆ ಭಾನುವಾರ ನೀಡಿದಷ್ಟು ...ಂದ, ಥ್ರಿಲ್, ಸಂಭ್ರಮವನ್ನು ನಾನು ಎಂದೂ ...ತ್ತೆ ಅನುಭವಿಸಿಲ್ಲ.

ಹಿಂದಿನ ರಾತ್ರಿ ಮಲಗಲು ಹೊರಟಾಗ ...ರುದಿನ ಭಾನುವಾರದ ಜ್ಞಾನದಲ್ಲೇ ...ಲಗಿದೆ. ಎಂದಿಗಿಂತ ಸ್ವಲ್ಪ ಮೊದಲೇ ...ದ್ದೇಳಬೇಕೆಂದು ಮನಸ್ಸಿನಲ್ಲಿ ಅಂದು ...ಂದಿದ್ದೆ.

ಆದರೆ ಯಾಕೋ ಭಾನುವಾರ ಬೆಳಿಗ್ಗೆ ...ದ್ದು ಪತ್ರಿಕೆಗಳನ್ನು ಓದಲು ಮನಸ್ಸು ...ಂಜರಿಯುತ್ತಿತ್ತು. ಹಿಂದಿನ ದಿನ ನನ್ನ ...ಹಾಯಕನಿಗೆ ಎಲ್ಲಾ ಪತ್ರಿಕೆಗಳನ್ನು ಬೆಳಿಗ್ಗೆ ...ರು ಗಂಟೆಗೇ ತರಬೇಕೆಂದು ಹೇಳಿದ್ದೆ. ...ತ ಹಾಗೆ ತಂದಿದ್ದ ಕೂಡ. ಆದರೆ ...ಸಿಗೆಯಿಂದ ಎದ್ದು ಪತ್ರಿಕೆಗಳಲ್ಲಿ ...ನಂದ್' ಸಿನಿಮಾದ ವಿಮರ್ಶೆಗಳನ್ನು ...ದಲು ಮನಸ್ಸು ಹಾತೊರೆಯುತ್ತಿದ್ದರೂ ನನ್ನ ...ದೆಯಲ್ಲಿ ಏನೋ ಒಂಥರ ಡವಡವ....

ಕೊನೆಗೆ ನನ್ನ ಕೋಣೆಯ ಹೊರಗಡೆ ಎಲ್ಲರೂ ...ತೋಷದಿಂದ ಮಾತನಾಡು...ವುದು ಕೇಳಿಸುತ್ತಿತ್ತು. ...ನು ಕಣ್ಣುಜ್ಜಿಕೊಂಡು ಹೊರ...ದೆ. ಟೇಬಲ್ ಮೇಲೆ ಪತ್ರಿಕೆ... ರಾಶಿ ಬಿದ್ದಿತ್ತು. ಎಲ್ಲರೂ ...ದೊಂದು ಪತ್ರಿಕೆಯನ್ನು ...ಡಿದು ಓದುತ್ತಿದ್ದರು. ನಾನು ...ರಬಂದ ತಕ್ಷಣ ಎಲ್ಲರೂ ...ಗೆ ಕಂಗ್ರಾಟ್ಸ್ ಹೇಳಿದರು. ...ಗ ನಾನು ಧೈರ್ಯ ಮಾಡಿ ...ತ್ರಿಕೆಗಳತ್ತ ನೋಡಿದೆ.

ಪತ್ರಿಕೆಯವರ ಬಗ್ಗೆ ಹಿಂದಿ...ದಲೂ ನನಗೆ ಅಪಾರವಾದ ಅಭಿಮಾನ. ಬೇರೆ ...ವರು ನಮ್ಮನ್ನು ಹೊಗಳುತ್ತಿದ್ದರೂ ಪತ್ರಿಕೆಯವರು ...ತ್ರ ನಮ್ಮ ತಪ್ಪುಗಳನ್ನು ಎತ್ತಿ ತೋರಿಸುತ್ತಾರೆ ...ದು ಬಲವಾಗಿ ನಂಬಿರುವವನು ನಾನು. ನಾನು ...ಲೇಜಿನಲ್ಲಿದ್ದಾಗ, ಪತ್ರಿಕೆಗಳಲ್ಲಿನ ಸಿನಿಮಾ ವಿಮರ್ಶೆ...ನ್ನು ಓದಿಯೇ ಚಿತ್ರ ನೋಡಲು ಹೋಗುತ್ತಿದ್ದೆ. ...ನ್ನ ತರಹ ಅನೇಕರೂ ವಿಮರ್ಶೆ ಓದಿ ಸಿನಿಮಾ ...ೋಡುತ್ತಾರೆ ಎಂಬುದು ನನಗೆ ಗೊತ್ತಿತ್ತು. ಹೀಗಾಗಿ ...ನ್ನ ಮೊದಲ ಚಿತ್ರದ ಪತ್ರಿಕಾ ವಿಮರ್ಶೆಗಾಗಿ ಚಾತಕ ...ಕ್ಷಿಯಂತೆ ಕಾಯುತ್ತಿದ್ದೆ.

ಎಲ್ಲ ಪತ್ರಿಕೆಗಳು ಚಿತ್ರದ ಬಗ್ಗೆ ಪಾಸಿಟಿವ್ ಆಗಿ ...ರೆದಿದ್ದರು.

ಅಂದರೆ, ದೆ ಹ್ಯಾವ್ ಲೈಕಡ್ ದಿ ಫಿಲ್ಮ್ ...ದಾಯ್ತು. ಆ ಚಿತ್ರದಲ್ಲಿ ನನ್ನ ಸಣ್ಣ ಪುಟ್ಟ ತಪ್ಪುಗಳನ್ನು ...ರೆತು ಎಲ್ಲರೂ ಚೆನ್ನಾಗಿಯೇ ಬರೆದಿದ್ದನ್ನು ನೋಡಿ ...ತೋಷವಾಯಿತು.

ಇಷ್ಟಾಗಿಯೂ ನಾನು ಸಿನಿಮಾ ರಿಲೀಸ್ ಆಗುವ ...ಮಯದಲ್ಲಿ ಯಾವುದೇ ಪತ್ರಕರ್ತರನ್ನು ಭೇಟಿಯಾ...ರಲಿಲ್ಲ. ಪತ್ರಕರ್ತರಿಗಾಗಿ ಸಂತೋಷ ಕೂಟವನ್ನೂ ...ವು ಏರ್ಪಡಿಸಿರಲಿಲ್ಲ. ಏಕೆಂದರೆ ಕರ್ನಾಟಕದ ...ನಿಮಾ ಪತ್ರಕರ್ತರು ವಸ್ತುನಿಷ್ಠವಾಗಿ ಬರೆಯುತ್ತಾರೆ ...ಬುದು ನಮ್ಮ ಅಭಿಪ್ರಾಯವಾಗಿತ್ತು. ಇದಕ್ಕೆ ಉದಾ...ಹರಣೆ ಎಂದರೆ ನನ್ನ ಅಪ್ಪಾಜಿಯ ಕೆಲವು ಸಿನಿಮಾಗಳನ್ನು ...ಾವ ಪತ್ರಕರ್ತರು ಹೊಗಳಿದ್ದರೋ ಅದೇ ಪತ್ರ...ಕರ್ತರು ಕೆಲವು ಸಿನಿಮಾಗಳನ್ನು ಟೀಕಿಸಿದ್ದರು ಕೂಡ. ...ವರು ಹಾಗೆ ಟೀಕಿಸಿದ್ದ ಸಿನಿಮಾಗಳು ಚೆನ್ನಾಗಿರಲಿಲ್ಲ ...ಬುದು ನಮ್ಮ ಮನೆಯವರ ಅಭಿಪ್ರಾಯ ಕೂಡ ...ಗಿತ್ತು.

ಅವತ್ತು ಬೆಳಗ್ಗೆ ಒಂದೊಂದೇ ಪತ್ರಿಕೆಗಳನ್ನು ...ದುತ್ತಾ ಹೋದಂತೆ ನನ್ನ ಕಣ್ಣುಗಳನ್ನು ನಾನೇ ...ನಂಬಲಾರದೇ ಹೋದೆ.

ಒಂದು ಪತ್ರಿಕೆಯವರು ನನ್ನನ್ನು 'ಡಿಸ್ಕೋ ಕಿಂಗ್' ...ಎಂದು ವರ್ಣಿಸಿದ್ದರು. ಮತ್ತೊಂದು ಪತ್ರಿಕೆ 'ಎ ಸ್ಟಾರ್ ...ಈಸ್ ಬಾರ್ನ್' ಎಂದು ಹೊಗಳಿತ್ತು, ಇನ್ನೊಂದು ...ಪತ್ರಿಕೆ 'ನ್ಯೂ ಎರಾ ಬಿಗಿನ್ಸ್' ಎಂಬ ಲೇಖನಕ್ಕೆ, ನನ್ನ ...ಯಶಸ್ಸೇ ಆಧರಿಸಿ ಕನ್ನಡ ಚಿತ್ರರಂಗದಲ್ಲಿ ಯುವಕರ ...ಯುಗ ಪ್ರಾರಂಭವಾಯಿತು ಎಂದು ವರದಿಮಾಡಿತ್ತು, ...ತಮಿಳು ಹಾಗೂ ತೆಲುಗು ಪತ್ರಿಕೆಗಳವರು ಕೂಡ ...ನನ್ನ ಬಗ್ಗೆ ಇದೇ ರೀತಿ ಬರೆದಿದ್ದರು.

ನಾನು ಡಾ. ರಾಜ್‌ಕುಮಾರ್ ಅವರ ಮಗನೆಂಬ ...ಕಾರಣಕ್ಕಾಗಿ ಜನತೆ, ಅಭಿಮಾನಿಗಳು ಮತ್ತು ಉದ್ಯಮ ...ದವರು ಹೊಗಳಿದ್ದರು ಎಂದು 'ನನಗೆ ಎಲ್ಲೋ ...ಅನಿಸಿತ್ತು, ಆದರೆ ಶನಿವಾರ ಹಾಗೂ ಇಲ್ಲದ


> ಯಾಕೋ ಆ ಭಾನುವಾರ ಬೆಳಿಗ್ಗೆ ಎದ್ದು ಪತ್ರಿಕೆಗಳನ್ನು ಓದಲು ಮನಸ್ಸು ಹಿಂಜರಿಯುತ್ತಿತ್ತು. ಹಿಂದಿನ ದಿನ ನನ್ನ ಸಹಾಯಕನಿಗೆ ಎಲ್ಲಾ ಪತ್ರಿಕೆಗಳನ್ನು ಬೆಳಿಗ್ಗೆ ಆರು ಗಂಟೆಗೇ ತರಬೇಕೆಂದು ಹೇಳಿದ್ದೆ. ಆತ ಹಾಗೆ ತಂದಿದ್ದ ಕೂಡ. ಆದರೆ ಹಾಸಿಗೆಯಿಂದ ಎದ್ದು ಪತ್ರಿಕೆಗಳಲ್ಲಿ 'ಆನಂದ್' ಸಿನಿಮಾದ ವಿಮರ್ಶೆಗಳನ್ನು ಓದಲು ಮನಸ್ಸು ಹಾತೊರೆಯುತ್ತಿದ್ದರೂ ನನ್ನ ಎದೆಯಲ್ಲಿ ಏನೋ ಒಂಥರ ಡವಡವ....

ಪತ್ರಿಕೆಯವರು ಕೂಡ ನನ್ನನ್ನು ಮೆಚ್ಚಿದಾಗ ನನ್ನ ಆತ್ಮವಿಶ್ವಾಸ ಇಮ್ಮಡಿಯಾಯಿತು.

ಆ ನಾಲ್ಕು ದಿನಗಳನ್ನು ನಾನು ಎಂದೂ ಮರೆಯಲಾಗುವುದಿಲ್ಲ. ಗುರುವಾದ ನನ್ನ ಮೊದಲ ಚಿತ್ರ ಬಿಡುಗಡೆಯಾಯಿತು. ಶುಕ್ರವಾರ ಉದ್ಯಮದ ಗಣ್ಯರಾದ ಕೆ.ಸಿ.ಎನ್ ಗೌಡರು, ಲಕ್ಷ್ಮಣ್, ಗೋಪಾಲ್, ಸಿದ್ದಲಿಂಗಯ್ಯ, ಕೆ.ಎಸ್.ಎಲ್. ಸ್ವಾಮಿ, ದೊರೆ-ಭಗವಾನ್, ಕೆ.ಸಿ.ಎನ್. ಚಂದ್ರು, ಅನೇಕ ನಿರ್ಮಾಪಕರು,

ನಿರೂಪಣೆ: ಸದಾಶಿವ ಶೆಣೈ

27



ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!

ನಿರ್ದೇಶಕರು ಹಾಗು ಇತರರು ನನ್ನನ್ನು ಅಭಿನಂದಿಸಿದರು. ಶನಿವಾರ ಮೈಸೂರಿನಲ್ಲಿ ಅಭಿಮಾನಿಗಳು ನನ್ನನ್ನು ಸುತ್ತುವರೆದು ತಮ್ಮ ಪ್ರೀತಿಯನ್ನು ವ್ಯಕ್ತಪಡಿಸಿದರು. ಕೊನೆಗೆ ಭಾನುವಾರ ಪತ್ರಿಕೆಯ ವಿಮರ್ಶಕರೂ ನನ್ನನ್ನು ಮೆಚ್ಚಿ ಬರೆದರು.

ಇದೆಲ್ಲ ಆದನಂತರ, ನನ್ನ ಪತ್ನಿಯ ಹುಟ್ಟು ಹಬ್ಬವನ್ನು ಗಾಜನೂರಿನಲ್ಲಿ ಆಚರಿಸುವುದೆಂದು ನಿರ್ಧರಿಸಿದೆವು. ನಾವು ಮದುವೆ ಆದನಂತರ ಅದು ಆಕೆಯ ಮೊದಲನೆ ಬರ್ತ್‌ಡೇ ಆಗಿತ್ತು. ಒಂದು ರೀತಿಯಲ್ಲಿ ಗೀತಾ ನನ್ನ ಅದೃಷ್ಟ ದೇವತೆ, ನನ್ನ 'ಲೇಡಿ ಲಕ್'. ನಾನು ಗೀತಾಳನ್ನು ಮದುವೆಯಾದ ನಂತರ ಪ್ರತಿ ಹಂತದಲ್ಲೂ ಯಶಸ್ಸು ಮತ್ತು ಸಂಭ್ರಮವನ್ನು ಕಾಣುತ್ತಾ ಬಂದಿದ್ದೇನೆ. ಅದರ ಮೊದಲ ಹೆಜ್ಜೆಯೇ ನನ್ನ ಚೊಚ್ಚಲ ಚಿತ್ರದ ಬಿಡುಗಡೆ ಮತ್ತು ಯಶಸ್ಸು.

ನಾವು ಗಾಜನೂರಿಗೆ ಹೋಗುವ ಮುನ್ನ ಕೊಯಮತ್ತೂರಿನಲ್ಲಿದ್ದ ಅಪ್ಪಣ್ಣಪ್ಪ ಎಂಬುವವರನ್ನು ಭೇಟಿಯಾಗಲು ಹೊರಟೆವು. ಅಪ್ಪಣ್ಣಪ್ಪ ಯಾರು ಗೊತ್ತಾ? ಅವರು ನನ್ನ ಅಪ್ಪಾಜಿಯ ಆತ್ಮೀಯ ಸ್ನೇಹಿತರಲ್ಲೊಬ್ಬರು. ಕೊಯಮತ್ತೂರಿನಲ್ಲಿದ್ದ ಅವರು ಅಪ್ಪಾಜಿ ಅತ್ಯಂತ ಕಷ್ಟದ ದಿನಗಳನ್ನು ಎದುರಿಸುತ್ತಿದ್ದಾಗ ತುಂಬ ಸಹಾಯ ಮಾಡಿದ್ದರಂತೆ.

ಅವರ ಆಶೀರ್ವಾದ ಪಡೆಯಬೇಕೆಂದು ಅಪ್ಪಾಜಿ ನನಗೆ ಆದೇಶ ನೀಡಿದ್ದರು. ಅಷ್ಟೇ ಅಲ್ಲ, ಅವರನ್ನು ಭೇಟಿಯಾಗಲು ಅಪ್ಪಾಜಿ ಕೂಡ ನಮ್ಮ ಜೊತೆ ಬಂದಿದ್ದರು. ನಾವೆಲ್ಲಾ ಅವರನ್ನು ಭೇಟಿಯಾಗಿ, ಆಶೀರ್ವಾದ ಪಡೆದು, ಅವರೊಂದಿಗೆ ಕೆಲ ಸಮಯವನ್ನು ಕಳೆದೆವು.

ಸಾಮಾನ್ಯವಾಗಿ ಚಿತ್ರವೊಂದು ಸೂಪರ್ ಹಿಟ್ ಆದ ತಕ್ಷಣ ಅದನ್ನು ಹಲವಾರು ವಿಧಾನಗಳಲ್ಲಿ ನಮ್ಮ ಉದ್ಯಮದಲ್ಲಿ ಆಚರಿಸುತ್ತಾರೆ. ಹಲವರು ಸ್ನೇಹಿತರಿಗೆ ಪಾರ್ಟಿ ಕೊಟ್ಟು ಮಧ್ಯ ರಾತ್ರಿಯ ತನಕ ಎಂಜಾಯ್ ಮಾಡುತ್ತಾರೆ. ಪಾರ್ಟಿಗೆ ಬಂದವರೆಲ್ಲಾ ಕಂಠಪೂರ್ತಿ ಕುಡಿದು ಪಾರ್ಟಿ ಕೊಟ್ಟವರನ್ನು ಹೊಗಳುತ್ತಾರೆ. ಆದರೆ ಇಂತಹ ಆಚರಣೆಗಳಲ್ಲಿ ಅಪ್ಪಾಜಿಗೆ ಯಾವುದೇ ನಂಬಿಕೆ ಇರಲಿಲ್ಲ. ಅದರ ಬದಲಿಗೆ ಕಷ್ಟ ಕಾಲದಲ್ಲಿ ನಮಗೆ ನೆರವಾದ ಜನರ ಬಳಿಗೆ ಹೋಗಿ ಅವರ ಆಶೀರ್ವಾದ ಪಡೆಯುವುದು ಒಳ್ಳೇದು ಎಂಬುದು ಅವರು ಹೇಳಿಕೊಟ್ಟ ಪಾಠ. ಹೀಗಾಗಿ ನಾವು ಬೆಂಗಳೂರಿನ ಸಂಭ್ರಮ, ಸಂತೋಷ ಇವೆಲ್ಲವನ್ನೂ ಬಿಟ್ಟು ದೂರದ ಕೊಯಮತ್ತೂರಿಗೆ ಹೋಗಿ ಸದ್ದುಗದ್ದಲವಿಲ್ಲದೆ ಅಪ್ಪಣ್ಣಪ್ಪನವರ ಮನೆಯಲ್ಲಿ ಕಾಲ ಕಳೆದೆವು. ಅವರ ಆಶೀರ್ವಾದ ಪಡೆದ ನಂತರ ಎಲ್ಲರೂ ಗಾಜನೂರಿಗೆ ಬಂದೆವು.

ನನ್ನ ಮುದ್ದಿನ ಹೆಂಡತಿ ಗೀತಾಳ ಹುಟ್ಟಿದ ಹಬ್ಬಕ್ಕಾಗಿ ನಮ್ಮ ಕುಟುಂಬದವರೆಲ್ಲಾ ಅಲ್ಲಿ ಸೇರಿದ್ದೆವು. ಎಲ್ಲರೂ ಸಂತೋಷದಿಂದ ಹುಟ್ಟಿದ ಹಬ್ಬದಲ್ಲಿ ಪಾಲ್ಗೊಂಡೆವು. 'ಆನಂದ್' ಚಿತ್ರ ಸೂಪರ್ ಹಿಟ್ ಆಗುತ್ತೆ ಎಂದು ಅಷ್ಟೊತ್ತಿಗೆಲ್ಲಾ ಚಿತ್ರಬ್ರಹ್ಮರು ಭಾಷ್ಯ ಬರೆದಿದ್ದರು. ಹೀಗಾಗಿ ಗೀತಾಳ ಹುಟ್ಟುಹಬ್ಬಕ್ಕೆ ಒಂದು ವಿಶೇಷವಾದ ಹೊಳಪಿತ್ತು.

ಎಲ್ಲರೂ ಸಂತೋಷದಿಂದ ಆನಂದದಿಂದ ಕಾಲ ಕಳೆದೆವು.

This was my success story of `Anand`. ಆದರೆ ನನ್ನ ಜೀವನದಲ್ಲಿ ಬದಲಾವಣೆಗಳಾದವು. ನನ್ನ ಪಾಡಿಗೆ ನಾನು ಆರಾಮವಾಗಿ ಗೆಳೆಯರ ಜೊತೆ ಓಡಾಡುತ್ತಾ ಕಾಲ ಕಳೆಯುತ್ತಿದ್ದ ನಾನು ನನಗರಿವಿಲ್ಲದೇ ದೊಡ್ಡ ಸ್ಟಾರ್ ಆಗ್ಬಿಟ್ಟಿದ್ದೆ. ಕಾರನಲ್ಲಿ ಹೋಗುವಾಗ ದಾರಿಯಲ್ಲಿ ನನ್ನ ಕಟೌಟ್ ಮತ್ತು ವಾಲ್ ಪೋಸ್ಟರ್‌ಗಳನ್ನು ನೋಡಿದಾಗ ನನಗೇ ಆಶ್ಚರ್ಯ ಮತ್ತು ರೋಮಾಂಚನವಾಗುತ್ತಿತ್ತು. ಒಮ್ಮೆ ಮಂಡ್ಯದ ಬಳಿ ಕಾಫಿ ಕುಡಿಯಲು ಒಂದು ಹೋಟೆಲ್‌ನ ಬಳಿ ಕಾರು ನಿಲ್ಲಿಸಿದೆ. ಆಗ 'ಶಿವರಾಜ್ ಕುಮಾರ್ ಬಂದಿದ್ದಾರೆ' ಎಂಬ ಸುದ್ದಿ ಎಲ್ಲೆಡೆ ಹರಡಿ ಜನ ಹೋಟೇಲಿಗೆ ನುಗ್ಗಲಾರಂಭಿಸಿದರು.

ಅಲ್ಲಿಂದ ಬಿಡಿಸಿಕೊಂಡು ಬರಲು ಸಾಕಷ್ಟು ಕಷ್ಟಪಡಬೇಕಾಯಿತು. ನಾನು ಇನ್ನು ಮುಂದೆ ಮೊದಲಿನಂತೆ ಜೀವಿಸಲು ಸಾಧ್ಯವಿಲ್ಲ ಅಂತ ನನಗೆ ಆಗ ಗೊತ್ತಾಯಿತು.

ಇಂಥ ಸಂದರ್ಭದಲ್ಲಿ ಮದ್ರಾಸಿನ ನನ್ನ ಗೆಳೆಯರಿಗೆ ಈ ಚಿತ್ರ ತೋರಿಸಬೇಕು. ಅವರು ಏನೆನ್ನುತ್ತಾರೆ? ಎಂಬ ಕುತೂಹಲ ನನ್ನಲ್ಲಿತ್ತು. ಆಗ ನಾನು ಮದ್ರಾಸಿಗೆ ಹೋದೆ. ಅಲ್ಲಿ ಏನಾಯಿತು ಗೊತ್ತೇ?


(ಮುಂದುವರೆಯುವುದು....)

ಕಿಕ್ಕೇರಿಸದ ಕಿಕ್ಕೇರಿ



"ವಿಶ್ವಕನ್ನಡ ಸಮ್ಮೇಳನದ ಮೊದಲನೆಯ ದಿನ ನಮ್ಮನ್ನು ಯಾರೂ ಕ್ಯಾರೇ ಅನ್ನಲಿಲ್ಲ" ಎಂದು ಯಾವುದೇ ಮುಲಾಜಿಲ್ಲದೆ ಅಮೆರಿಕದ ಬಾಲ್ಟಿಮೋರ್‌ನಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದ ಬಗ್ಗೆ ಮಾತಿಗಿಳಿದರು ಹಿನ್ನಲೆ ಗಾಯಕ ಕಿಕ್ಕೇರಿ ಕೃಷ್ಣಮೂರ್ತಿ.

"ಮೊದಲ ದಿನ ದೊಡ್ಡ ದೊಡ್ಡ ಸ್ಟಾರ್‌ಗಳಿದ್ದರಲ್ಲಾ? ಗುರುಕಿರಣ್, ಎಸ್.ಪಿ. ಬಾಲಸುಬ್ರಮಣ್ಯಂ..... ಅವರಿದ್ದಾಗ ನಮ್ಮನ್ನು ಅಲ್ಲಿಯ 'ಅಕ್ಕ' ಪದಾಧಿಕಾರಿಗಳು ನಿರ್ಲಕ್ಷಿಸಿದರು. ಯಾರೂ ನಮ್ಮನ್ನು ಸರಿಯಾಗಿ ಟ್ರೀಟ್ ಮಾಡಲೇ ಇಲ್ಲ, ನಮ್ಮನ್ನು ಕೇಳುವವರೇ ಇರಲಿಲ್ಲ. ನಮಗೆ ಹೋಟ್ಲಿಂದ ಸಭಾಂಗಣಕ್ಕೆ ಬರಕ್ಕೆ ದಾರಿನೇ ಗೊತ್ತಿರ್ಲಿಲ್ಲ, ಅವರು ಕಾರು ಕೂಡ ಅರೇಂಜ್ ಮಾಡಿರ್ಲಿಲ್ಲ. ನನ್ನೊತೆ ಚಂದ್ರಶೇಖರ ಪಾಟೀಲ್, ಕಣವಿ ಅವರು ಕೂಡ ಇದ್ರು. ಅವ್ರೂ ಹೋಟ್ಲಲ್ಲೇ ಕೂತ್ಕೊಂಡ್ರು" ಎಂದು ಮೊದಲ ದಿನದ ಅವ್ಯವಸ್ಥೆ ಕುರಿತು ತಮಗಾದ ವಿಷಾದದ ಬಗ್ಗೆ ಕಿಕ್ಕೇರಿ ವಿವರಿಸಿದರು.



ಶೆಣೈ

"ಊಟದ ಜಾಗ ಎಲ್ಲಿ ಅಂತ ಗೊತ್ತಿರ್ಲಿಲ್ಲ. ಸಭಾಂಗಣದಿಂದ ಊಟದ ಜಾಗಕ್ಕೆ ಐದು ಡಾಲರ್ ಕೊಟ್ಟು ಟ್ಯಾಕ್ಸಿಯಲ್ಲಿ ಹೋದ್ವಿ. ಆಮೇಲೆ ಗೊತ್ತಾಯ್ತು ಅದು ಕೇವಲ ವಾಕಬಲ್ ಡಿಸ್ಟೆನ್ಸ್‌ನಲ್ಲಿತ್ತು ಅಂತ. ಹೀಗೆ ಮೊದಲ ದಿನ ಬಹಳ ಬಹಳ ಕಹಿ ಅನುಭವವಾಯ್ತು. ಯಾಕಾದ್ರೂ 'ಅಕ್ಕ'ನನ್ನು ನೋಡಲು ಬಂದೆವೊ ಅನ್ನಿಸಿತು" ಎಂದು ಸುಸ್ತಾದವರಂತೆ ಕಿಕ್ಕೇರಿ ಹೇಳಿದ್ದರು.

"ಆದರೆ ಎರಡನೇ ದಿನ ಎಲ್ಲವೂ ಸರಿಹೋಯಿತು. ಎಲ್ಲರ ಪರಿಚಯವಾಯಿತು. ಚಂಪಾ, ಕಣವಿಯಂಥವರು ಊಟಕ್ಕೆ ಕ್ಯೂ ನಿಲ್ಲುವುದು ಸರಿ ಅಲ್ಲ, ಏನಾದ್ರೂ ವ್ಯವಸ್ಥೆ ಮಾಡಿ ಅಂತ ಹೇಳಿದ್ದಕ್ಕೆ ವ್ಯವಸ್ಥೆ ಮಾಡಿದರು. ಇಬ್ಬರು ಸ್ವಯಂಸೇವಕರನ್ನು ನಮ್ಮ ಜೊತೆ ಬಿಟ್ರು."

"ನಮಗೆ ವಿಶ್ವ ಕನ್ನಡ ಸಮ್ಮೇಳನಕ್ಕಿಂತಲೂ ಬೇರೆ ಕಡೆ ವಿಭಿನ್ನವಾದ ಅನುಭವವಾಯಿತು. ನಾನು ನರಸಿಂಹನಾಯಕ್ ಮತ್ತು ಪ್ರವೀಣ್ ಗೋಡ್ಖಿಂಡಿಯವರ ಟ್ರೂಪ್‌ನಲ್ಲಿದ್ದೆ. ಬಾಲ್ಟಿಮೋರ್ ನಂತರ ಫಿಲಡೆಲ್ಫಿಯಾ, ನ್ಯೂ ಜೆರ್ಸಿ, ವಾಷಿಂಗ್‌ಟನ್, ಚಿಕಾಗೋ, ಲಾಸ್ ಏಂಜಲೀಸ್ ಹಾಗೂ ಇನ್ನೂ ಅನೇಕ ಪಟ್ಟಣಗಳಿಗೆ ಭೇಟಿಯಿತ್ತು ಕಾರ್ಯಕ್ರಮ ನೀಡಿದೆವು. ಈ ಎಲ್ಲ ಪ್ರದೇಶಗಳಲ್ಲಿ ಕನ್ನಡಿಗರು ನಮ್ಮನ್ನು ಅಭಿಮಾನದಿಂದ ಸ್ವಾಗತಿಸಿದರು. ಅವರಿಗೆಲ್ಲಾ ಜನಪದ ಮತ್ತು ದಾಸರ ಪದಗಳು ಅಂದರೆ ಪ್ರಾಣ. ಹೀಗಾಗಿ ನಾನು ಹೋದಲ್ಲೆಲ್ಲಾ ಚೆಲ್ಲಿದರು ಮಲ್ಲಿಗೆಯಾ, ಎಲ್ಲೋ ಜೋಗಪ್ಪ ನಿನ್ನರಮನೆ, ಪಿಂಗಳು, ಮೊದಲಾದ ಹಾಡುಗಳಿಗಾಗಿ ಸಿಕ್ಕಾಪಟ್ಟೆ ಡಿಮ್ಯಾಂಡ್ ಬಂತು. ನಾನು ಈ ಹಾಡುಗಳನ್ನು ಹಾಡಲು ಶುರು ಮಾಡಿದಾಕ್ಷಣ ಅಮೆರಿಕ ಕನ್ನಡಿಗರು ಸಂತೋಷಪಡುತ್ತಿದ್ದರು. ನನಗಿದು ಅಮೆರಿಕದ ಮೊದಲ ಪ್ರವಾಸದ ಅನುಭವವಾದರೂ ನನಗಿಂತ ಮೊದಲೇ ಜನಪದ ಗಾಯಕರಾದ ಬಾನಂದೂರು ಕೆಂಪಯ್ಯ, ಅಪ್ಪಗೆರೆ ತಿಮ್ಮರಾಜು ಮೊದಲಾದವರೆಲ್ಲ ಈ ಹಾಡುಗಳನ್ನೆಲ್ಲ ಹಾಡಿ ಅಲ್ಲಿಯವರನ್ನು ರಂಜಿಸಿದ್ದರು. ಇವತ್ತಿಗೂ ಅಲ್ಲಿಯ ಜನ ಈ ಹಾಡಿಗಾಗಿ ಹೊತೊರೆಯುತ್ತಿದ್ದಾರೆ. ಈ ಮೂರು ಹಾಡು ಇಟ್ಟುಕೊಂಡೇ ಇನ್ನೊಂದು ಬಾರಿ ಅಮೆರಿಕಕ್ಕೆ ಹೋಗಿಬರಲು ಏನೂ ತೊಂದರೆ ಇಲ್ಲ' ಎನ್ನುತ್ತಾರೆ ಕಿಕ್ಕೇರಿ.

ಕಿಕ್ಕೇರಿ ಅಮೆರಿಕನ್ನಡಿಗರಲ್ಲಿ ಅಂತಹ ಉತ್ಸಾಹವನ್ನು ಸೃಷ್ಟಿಸಿಲ್ಲದಿದ್ದರೂ ಮೊದಲ ಪ್ರಯತ್ನದಲ್ಲಿ ತನ್ನ ಅಸ್ತಿತ್ವವನ್ನು ತೋರಿಸಿಕೊಂಡುಬಂದಿದ್ದಾರೆ. ಹಾಗೆ ನೋಡಿದರೆ ಅಪ್ಪಗೆರೆ, ಪಿಚ್ಚಳ್ಳಿ, ಬಾನಂದೂರು ಗಾಯಕರಿಗಿರುವಂತಹ ಚಾರಿಷ್ಮ ಕಿಕ್ಕೇರಿಗೆ ಇಲ್ಲದ ಕಾರಣ ಅಮೆರಿಕನ್ನಡಿಗರಿಗೆ ಇವರ ಹಾಡಲ್ಲಿ ಅಂತಹ ಮತ್ತು ಕಂಡಿಲ್ಲವೇನೋ? ಯಾಕೆಂದರೆ ಅಪ್ಪಗೆರೆಯ ಹಾವಭಾವ, ಪಿಚ್ಚಳ್ಳಿಯ ತಾರಕ ಧ್ವನಿ, ಅಥವಾ ಬಾನಂದೂರರ ರಾಗ-ಭಾವಗಳು ಕಿಕ್ಕೇರಿಯಲ್ಲಿ ಇಲ್ಲ ಎಂಬುದನ್ನು ಅವರು ಹೇಳುತ್ತಿದ್ದರು. ಆದರೆ ಕಿಕ್ಕೇರಿ ಹೇಳುತ್ತಿದ್ದುದೇ ಬೇರೆ.

"ನಾನು ಹಾಡಲು ಶುರು ಮಾಡಿದ ತಕ್ಷಣ ಅವರಲ್ಲಿ ಕರೆಂಟ್ ಸಂಚರಿಸುತ್ತಿತ್ತು, ಕಿಕ್ಕೇರಿ ಚೆನ್ನಾಗಿ ಹಾಡುತ್ತಾನೆ" ಎಂದು ಅವರು ಇಂಟರ್‌ನೆಟ್ಟಲ್ಲಿ ಮೆಸೇಜು ಕಳುಹಿಸುತ್ತಿದ್ದರು. ಅಮೆರಿಕದಲ್ಲಿ ಕನ್ನಡದ ಜನಪದ ಹಾಡುಗಳನ್ನು ಹಾಡಲು ಇವರನ್ನು ಇಲ್ಲಿಂದ ಕಳುಹಿಸಿಕೊಟ್ಟದ್ದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಈಗ ಸದ್ಯಕ್ಕೆ ಕಿಕ್ಕೇರಿ ತಂಪಿನ ಉತ್ಸವದಲ್ಲಿ ಕೇಕೆ ಹಾಕುತ್ತಾ ಹಾಡುತ್ತಿದ್ದಾರೆ.

ನೆನಪಿಡಿ; ಅತಿ ಮಹತ್ವದ ಕಾಣಿಕೆ ಅಂಗಡಿಗಳಲ್ಲೂ ಸಿಗುವುದಿಲ್ಲ, ಮರದ ಕೆಳಗೂ ಸಿಗುವುದಿಲ್ಲ, ಅದು ನಮ್ಮ ನಿಜವಾದ ಗೆಳೆಯರ ಹೃದಯದಲ್ಲಿದೆ-ಸಿಂಡಿ ಲಿವ್

R.B.P. LANKESH, Kannada Weekly   Price Rs. 10/- 15-11-2006   RNI No. KARKAN2005/14648   Regd.No.KA/BG(S)/2036/200



ರಕ್ಷಿತಾಳ ರಾಜಿ ಪಂಚಾಯಿತ್ತಿಗಳು

ಪ್ರೇಂ-ರಕ್ಷಿತಾರ ನಡುವಿನ ಪ್ರೇಮಜ್ವರ ದಿನೇದಿನೇ ಏರುತ್ತಿದೆ. ಗಂಟೆಗಟ್ಟಲೆ ಮೊಬೈಲಿನಲ್ಲಿ ಮಾತಾಡೋದೇನು, ಬಿಟ್ಟೂಬಿಡದೆ ಭೇಟಿ ಆಗೋದೇನು.... ಕನವರಿಸಿಕೊಳ್ಳುವುದೆಷ್ಟು.... ಇದೆಲ್ಲಾ ಚೆಂದವೇನೊ ಸರಿ; ಆದರೆ ಈ ಪ್ರೀತಿಯ ಅಮಲಿನಲ್ಲಿ ಇವರಿಬ್ಬರು ಮರೆತಿರುವುದು ವೃತ್ತಿಪರತೆಯನ್ನು.

ಎಷ್ಟರ ಮಟ್ಟಿಗೆ ಅಂದರೆ ಸೆಟ್‌ನಲ್ಲಿದ್ದಾಗ ಶಾಟ್ ರೆಡಿಯಾಗಿದ್ದರೂ ರಕ್ಷಿತಾಳ ಕೈಲಿರುವ ಮೊಬೈಲ್ ಕೆಳಗಿಡಿಸಿ ಶೂಟಿಂಗ್ ಮುಂದುವರೆಸುವುದು ಕಷ್ಟವಾಗುತ್ತಿದೆ. ಇದು ಯಾವ ಹಂತಕ್ಕೆ ಹೋಗಿದೆಯೆಂದರೆ ಮೊನ್ನೆ ಎಸ್. ನಾರಾಯಣ್ ನಿರ್ದೇಶನದ 'ತಾಯಿಯ ಮಡಿಲು' ಚಿತ್ರದ ಶೂಟಿಂಗ್‌ಗೆ ಸಂಬಂಧಿಸಿದಂತೆ ರಕ್ಷಿತಾ ಜೊತೆ ಜಗಳವಾಗಿದೆ.

ರಕ್ಷಿತಾ 'ನಾ ಬರಲ್ಲ, ಪ್ರೇಂ ಬಿಡಲ್ಲ' ಎಂದು ತಪ್ಪಿಸಿಕೊಳ್ಳಲು ಯತ್ನಿಸಿದಳು. ಕೊನೆಗೆ ವಿಷ್ಣು ಮನೆಯಲ್ಲಿ ರಾಜಿ ಪಂಚಾಯ್ತಿ ನಡೆದು, ಒಂದು ವಾರದ ಮಟ್ಟಿಗೆ ಫಾರಿನ್‌ನಲ್ಲಿ ಶೂಟಿಂಗ್‌ನಲ್ಲಿ ಪಾಲ್ಗೊಳ್ಳಲು ಒಪ್ಪಿಕೊಂಡಿದ್ದಾಳೆ ರಕ್ಷಿತಾ. ಇದೇನಿದು ಅಂತಾ ಕೇಳಿದವರಿಗೆ ರಕ್ಷಿತಾ 'ನಾನು ಮೊದಲೇ ಫಾರಿನ್‌ಗೆ ಬರಲ್ಲ ಅಂತಾ ಕಂಡೀಷನ್ ಹಾಕಿದ್ದೆ' ಎನ್ನುತ್ತಿದ್ದಾಳೆ.

ಇದು ನಿಜವೇ ಇರಬಹುದು. ಆದರೆ ಇದನ್ನು ಯಾರಾದ್ರೂ ಪ್ರೊಫೆಶನಲಿಸಂ ಅನ್ನಲು ಸಾಧ್ಯವೆ? ನಾಳೆ ಪ್ರೇಂ ನಿರ್ದೇಶನದ ಸಿನಿಮಾದ ನಟಿಯೂ ಇದೇ ಕಂಡೀಷನ್ ಹಾಕಿದ್ರೆ ಪ್ರೇಂ ಒಪ್ಪುತ್ತಾರಾ?



ಉಪ್ಪಿಯ ಟಾಪ್‌ಟೆನ್: ತನ್ನ ಹಾಡೇ ಫಸ್ಟಂತೆ!

ಇದು ಉಪ್ಪಿಯ ಹೊಸ ತಿಕ್ಕಲುತನ....

ಪ್ರತೀವಾರ ಒಂದು ಕನ್ನಡ ದಿನಪತ್ರಿಕೆಯಲ್ಲಿ ಯುಬಿ ಬಿಯರ್ಸ್‌ನವರು ಟಾಪ್‌ಟೆನ್ ಹಾಡುಗಳ ಜಾಹೀರಾತು ನೀಡುತ್ತಾರೆ. ಯುಬಿಯ ಮಾಡೆಲ್(?) ಉಪ್ಪಿಯ ಆಯ್ಕೆಗಳಂತೆ ಅವು. ವಿಚಿತ್ರವೆಂದರೆ ಪ್ರತೀವಾರ ಉಪ್ಪಿ ನಟಿಸಿದ ಚಿತ್ರದ ಹಾಡೇ ಟಾಪ್‌ಒನ್ ಸ್ಥಾನದಲ್ಲಿರುತ್ತೆ! ಅಂದರೆ ತನಗೆ ತಾನೇ ಫುಲ್‌ಮಾರ್ಕ್ಸ್ ಕೊಟ್ಟುಕೊಳ್ಳುತ್ತಾನೆ ಉಪೇಂದ್ರ.

ಹೋದವಾರ ತಾನೇ ಹಾಡಿದ 'ಧೋನಿ ಧೋನಿ'ಗೆ ಫಸ್ಟ್ ರ‍್ಯಾಂಕ್ ನೀಡಿದ್ದ ಉಪ್ಪಿ ಈ ವಾರ ತನ್ನದೇ ಚಿತ್ರದ 'ಮನ್ಮಥ ಮನ್ಮಥ'ಕ್ಕೆ ಫಸ್ಟ್ ರ‍್ಯಾಂಕ್ ನೀಡಿದ್ದಾನೆ. ಈ ಇಡೀ ಹಾಡೇ ತಮಿಳು ಹಾಡೊಂದರ ನಕಲು. ಸಾಹಿತ್ಯ ಸಂಗೀತ ಎಲ್ಲವೂ ಕಾಪಿ!

ಬೆಳಿಗ್ಗೆ 'ನಂದಿನಿ' ಹಾಲು ಕುಡಿಯಿರಿ, ರಾತ್ರಿ ಹೊತ್ತು 'ಯುಬಿ' ಬಿಯರ್ ಕುಡಿಯಿರಿ ಅನ್ನೋ ಉಪ್ಪಿಯಿಂದ ಇನ್ನೇನು ನಿರೀಕ್ಷಿಸಲು ಸಾಧ್ಯ?

ಉಪ್ಪಿಯ ಈ ಢೋಂಗಿ ಜಾಹೀರಾತು ಹೀಗೇ ಮುಂದುವರೆದರೆ ನಂದಿನಿ ಹಾಲು, ಯುಬಿ ಆಲ್ಕೋಹಾಲು ಎರಡಕ್ಕೂ ನಷ್ಟ ಕಟ್ಟಿಟ್ಟ ಬುತ್ತಿ!



ಡೇಟಿಂಗ್ ದುನಿಯ... ಮೆ ಉಮ್ರಾವ್... ಜಾನ್...


ಡೇಟಿಂಗ್ ಸ್ಪೀಡು ಹೆಚ್ಚುತ್ತಲೇ ಇರುವಾಗ, ಲವ್ವು ಭೌತಿಕ ಸುಖಕ್ಕೆ ಸೀಮಿತಗೊಳ್ಳುತ್ತಿರುವಾಗ ಜೆ.ಪಿ. ದತ್ತಾ 'ಉಮ್ರಾವೊ ಜಾನ್' ಎಂಬ ಪ್ರೇಮಕಾವ್ಯಕ... ಹಾಕಿ, ಲವ್ ಫೇಲ್ಯೂರ್ ಆಗಿದ್ದಾರೆ.

ಆವತ್ತಿನ ಮುಜಫರ್ ಅಲಿಯ 'ಉಮ್ರಾವೊ ಜಾನ್' ಎಂದೂ ಮರೆಯದಂತಹ ಪ್ರೇಮಕಾವ್ಯ, ದೃಶ್ಯಕಾವ್ಯ... ಆದರಲ್ಲಿನ ಸಂಭಾಷಣೆಗಳಂತೂ ಹಿತಕರ....

ಈಗ ಬಂದಿರುವ 'ಉಮ್ರಾವೊ ಜಾನ್'ನಲ್ಲಿ ಉರ್ದು ಡೈಲಾಗ್‌ಗಳಿವೆ. ಆದರೆ ಅದನ್ನು ಸರಿಯಾಗಿ ಉಚ್ಚರಿಸಲು ಆಗಿಲ್ಲ ಈಗಿನ ಕಲಾವಿದರಿಗೆ!

ಬಣ್ಣಬಣ್ಣದ ಕಲಾತ್ಮಕ ಸೆಟ್‌ಗಳಷ್ಟೇ ಕಣ್ಣಿಗೆ ಹಬ್ಬ. ಅಭಿಷೇಕ್ ಕಷ್ಟಪಟ್ಟಿದಷ್ಟೇ ಬಂತು. ಇನ್ನು ಐಶ್ ಸುಂದರ ಗೊಂಬೆಯಷ್ಟೇ....


ಹಳೆ 'ಉಮ್ರಾವೊ ಜಾನ್'ನ ರೇಖಾ... ಮರೆಯಲಾದೀತೆ? 'ರೇಖಾ ಜಾನ್.... Y... are our Umrao jaan forever!





ಬಂಗಾರದ ಬೇಟೆಯಾಡಿದ ಸೃಜನ್





ಲೋಕೇಶ್ ಅವರ ಮಗ ಸೃಜನ್ ಲೋಕೇಶ್ ಕೊನೆಗೂ ಬಂಗಾರದ ಬೇಟೆಯಾಡುವುದರಲ್ಲಿ ಯಶಸ್ವಿಯಾಗಿದ್ದಾರೆ.

ಇತ್ತೀಚೆಗಷ್ಟೇ 'ಬಂಗಾರದ ಬೇಟೆ' ಕಾರ್ಯಕ್ರಮದ ಮುಖಾಂತರ ಸುದ್ದಿ ಮತ್ತು ವಿವಾದಕ್ಕೊಳಗಾದ ವಿಜಯಲಕ್ಷ್ಮಿಯನ್ನು ಸೃಜನ್ ಲೋಕೇಶ್ ಮದುವೆಯಾಗಲಿರುವ ಸುದ್ದಿ ಬಂದಿದೆ.

ಒಂದೇ ಒಂದು ಚಿತ್ರದಲ್ಲಿ ನಾಯಕನಟನಾಗಿ ನಟಿಸಿ ಆನಂತರ ಟೀವಿ ಧಾರಾವಾಹಿಗಳಿಗೆ ಸೀಮಿತವಾಗಿರುವ ಸೃಜನ್ ಲೋಕೇಶ್ ಹೀರೋ ಆಗುವಲ್ಲಿ ವಿಫಲರಾಗಿರಬಹುದು. ಆದರೆ ಹಲವಾರು ಸಮಸ್ಯೆಗಳಲ್ಲಿ ಸಿಲುಕಿಕೊಂಡಿದ್ದ ವಿಜಯಲಕ್ಷ್ಮಿಯ ಪಾಲಿಗೆ ಹೀರೋ ಆಗಿದ್ದಾರೆ.

ಈ ಯುವದಂಪತಿಗಳಿಗೆ ನಮ್ಮ ಶುಭ ಹಾರೈಕೆ.



'ತನನಂ ತನನಂ' ಚಿತ್ರದಲ್ಲಿ ಸೀಮಾ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 2667642...
Fax : 26604536, E-mail :lankesh70@rediffmail.com, Printed at Rajhans Enterprises, # 134, 4th M...